# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಸೆಪ್ಟೆಂಬರ್ 25, 2021

ಸಂಪುಟ : 48 ಸಂಚಿಕೆ : 133 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 8 ರೂ : 4.00 www.janathavani.com janathavani@mac.com





## ಸಿರಿಗೆರೆಯ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ

**ತರಳಬಾಳು ಜಗದ್ಗುರು ಲಿಂ. ಶಿವಕುಮಾರ ಶಿವಾಚಾರ್ಯ ಶ್ರೀಗಳವರ 29ನೇ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಘೋಷಣೆ**

ಸಿರಿಗೆರೆ, ಸೆ.24 - ಸಿರಿಗೆರೆಯ ಎಲ್ಲಾ ವಿದ್ಯಾರ್ಥಿ - ವಿದ್ಯಾರ್ಥಿನಿಯರಿಗೆ ಪ್ರಸ್ತುತ ವರ್ಷದಿಂದಲೇ ಉಚಿತ ಊಟ ವಸತಿ ನೀಡಲು ತೀರ್ಮಾನಿಸಲಾಗಿದೆ ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಘೋಷಿಸಿದ್ದಾರೆ.

ಇಲ್ಲಿನ ಶ್ರೀ ಗುರುಶಾಂತೇಶ್ವರ ದಾಸೋಹ ಮಂಟಪದಲ್ಲಿ ಶುಕ್ರವಾರ ಸರಳವಾಗಿ ಆಚರಿಸಿದ ಲಿಂಗೈಕ್ಯ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿಯವರ 29ನೇ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಶ್ರೀಗಳು ಆಶೀರ್ವಚನ ನೀಡಿದರು.

ದಾವಣಗೆರೆಯಲ್ಲಿ 100 ವರ್ಷಗಳ ಹಿಂದೆ ಮೊಟ್ಟ ಮೊದಲು ವಿದ್ಯಾರ್ಥಿ ನಿಲಯ ಸ್ಥಾಪಿಸಿದವರು ಲಿಂ. ಗುರುಶಾಂತರಾಜ ದೇಶಿಕೇಂದ್ರ ಸ್ವಾಮಿಗಳವರು. ಲಿಂಗೈಕ್ಯ ಶ್ರೀ ಗುರುಶಾಂತರಾಜ ದೇಶಿ ಕೇಂದ್ರ ಸ್ವಾಮೀಜಿಯವರು ಹಾಗೂ ಲಿಂಗೈಕ್ಯ ಶಿವಕುಮಾರ ಸ್ವಾಮೀಜಿಯವರು ಈರ್ವರೂ ತರಳಬಾಳು ಸಂಸ್ಥೆಯ ಮನದಾಳದ ಆದರ್ಶ ಗುರುಗಳಾಗಿದ್ದಾರೆ. ಇನ್ನು ಮುಂದೆ ಭಕ್ತರು ತಮ್ಮ ಯಾವುದೇ ಆಹ್ವಾನ ಪತ್ರಿಕೆಗಳಲ್ಲಿ ಈರ್ವರ ಭಾವಚಿತ್ರವನ್ನು ಹಾಕುವ ಮೂಲಕ ಅವರಿಗೆ ಭಕ್ತಿ ಸಮರ್ಪಿಸಬೇಕು ಎಂದು ಕರೆ ನೀಡಿದರು.

ಬಹು ನಿರೀಕ್ಷಿತ ಭರಮಸಾಗರ ದೊಡ್ಡ ಕೆರೆಗೆ ನೀರು ಹರಿಯುವುದರ ಬಗ್ಗೆ ಯಾರೂ ನಿರಾಸೆಗೊಳ್ಳಬಾರದು. ಒಳ್ಳೆಯ ಕೆಲಸಗಳಿಗೆ ಅಡೆತಡೆ ವಿಘ್ನಗಳು ಇರುತ್ತವೆ. ಈಗ ಬಂದಿರುವ ವಿಘ್ನ ತಾತ್ಕಾಲಿಕ. ಕೆಲವು ತಾಂತ್ರಿಕ ತೊಂದರೆಗಳಿಂದ ಈ ದಿನ ನೀರು ಹರಿಸಲು ಸಾಧ್ಯವಾಗಲಿಲ್ಲ ಆದರೆ ತಾಂತ್ರಿಕ ದೋಷಗಳನ್ನು ಪರಿಹರಿಸಲು ಪರಿಶ್ರಮಿಸಲಾಗಿದೆ (5ನೇ ಪುಟಕ್ಕೆ)

## ಅ.1 ರಿಂದ ಚಿತ್ರಮಂದಿರ 100% ಭರ್ತಿ

### 1-5ನೇ ತರಗತಿ ಶಾಲೆಗಳ ಬಗ್ಗೆ ಇನ್ನೂ ನಿರ್ಧಾರವಿಲ್ಲ

**ಪಾಸಿಟಿವಿಟಿ ದರ ಶೇ.1ಕ್ಕಿಂತ ಕಡಿಮೆ ಇರುವ ಜಿಲ್ಲೆಗಳಲ್ಲಿ ಹೆಚ್ಚಿನ ಚಟುವಟಿಕೆಗಳಿಗೆ ಅನುಮತಿ**

**ಗರ್ಭಿಣಿಯರು, ಮಕ್ಕಳಿಗೆ ಚಿತ್ರಮಂದಿರಗಳಲ್ಲಿ ಪ್ರವೇಶವಿಲ್ಲ**

**ರಾತ್ರಿ ಕರ್ಫ್ಯೂ 10ರಿಂದ ಬೆಳಿಗ್ಗೆ 5ರವರೆಗೆ**

**6-12ನೇ ತರಗತಿ ಶಾಲೆಗಳು ವಾರದಲ್ಲಿ ಐದು ದಿನ, ಶೇ.100ರ ಹಾಜರಾತಿ**

ಬೆಂಗಳೂರು, ಸೆ. 24 – ನಾಲ್ಕೈದು ಜಿಲ್ಲೆಗಳನ್ನು ಹೊರತುಪಡಿಸಿದರೆ ರಾಜ್ಯದಲ್ಲಿ ಕೊರೊನಾ ಪರಿಸ್ಥಿತಿ ನಿಯಂತ್ರಣದಲ್ಲಿರುವ ಹಿನ್ನೆಲೆಯಲ್ಲಿ, ಸಿನೆಮಾ ಹಾಗೂ ಪಬ್‌ಗಳಿಗೆ ರಾಜ್ಯ ಸರ್ಕಾರ ಹೆಚ್ಚಿನ ಅವಕಾಶ ನೀಡಲು ನಿರ್ಧರಿಸಿದೆ.



ಅಕ್ಟೋಬರ್ 1 ರಿಂದ ಕೋವಿಡ್ ಪಾಸಿಟಿವಿಟಿ ದರ ಶೇ. 1ಕ್ಕಿಂತ ಕಡಿಮೆ ಇರುವ ಜಿಲ್ಲೆಗಳಲ್ಲಿ ಚಿತ್ರಮಂದಿರಗಳಲ್ಲಿ ಶೇ. 100 ಸೀಟು ಭರ್ತಿಗೆ ಅವಕಾಶ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ರಾಜ್ಯದಲ್ಲಿ ಕೊರೊನಾ ಸ್ಥಿತಿಗತಿ ಕುರಿತಂತೆ ತಜ್ಞರು ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ನಂತರ ಮಾಧ್ಯಮದವರಿಗೆ ಅವರು ಈ ವಿಷಯ ತಿಳಿಸಿದರು.

ರಾಜ್ಯದಲ್ಲಿ ಪ್ರಸ್ತುತ ಸರಾಸರಿ ಪಾಸಿಟಿವಿಟಿ ದರ ಶೇ.0.66 ಇದೆ. ಅಕ್ಟೋಬರ್ 1 ರಿಂದ ಕೋವಿಡ್ ಪಾಸಿಟಿವಿಟಿ ದರ ಶೇ. 1ಕ್ಕಿಂತ ಕಡಿಮೆ ಇರುವ ಜಿಲ್ಲೆಗಳಲ್ಲಿ ಶೇ. 100 ಸೀಟು ಭರ್ತಿಗೆ ಅವಕಾಶ ನೀಡಲಾಗುವುದು. ಶೇ. 1ಕ್ಕಿಂತ ಹೆಚ್ಚಾದರೆ ಶೇ. 50 ರಷ್ಟು ಭರ್ತಿಗೆ ಹಾಗೂ ಶೇ. 2 ಕ್ಕಿಂತ ಹೆಚ್ಚಾದರೆ ಚಿತ್ರಮಂದಿರ ಬಂದ್ ಮಾಡಲಾಗುವುದು ಎಂದು ತಿಳಿಸಿದರು. ಇದೇ ಮಾನದಂಡವನ್ನು ಅನುಸರಿಸಿ ಅಕ್ಟೋಬರ್ (5ನೇ ಪುಟಕ್ಕೆ)


ಚಿರಸ್ಮರಣೆ



ದಿ|| ದೊಗ್ಗಳ್ಳಿ ಮಲ್ಲಿಕಾರ್ಜುನಪ್ಪ

ನೀವು ನಮ್ಮನ್ನಗಲಿ ಇಂದಿಗೆ ಹದಿನೇಳು ವರ್ಷಗಳು ಕಳೆದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ,
ಪತ್ನಿ, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಮಿತ್ರರು.
ದಾವಣಗೆರೆ.



|| ಶ್ರೀ ಕೋಗುಂಡಿ ಬಸವೇಶ್ವರ ಪ್ರಸನ್ನ || ಶಿವ || ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ||

ಕೈಲಾಸ ಶಿವಗಣಾರಾಧನೆ ಆಹ್ವಾನ

ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ಶಾಮನೂರು ಗ್ರಾಮದ ವಾಸಿ
ಶ್ರೀಮತಿ ಶಾಂತಮ್ಮ ಪರಮೇಶ್ವರಪ್ಪ ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.

ಶರಣ ಬಂಧುಗಳೇ, ದಿನಾಂಕ 18.09.2021ನೇ ಶನಿವಾರ ರಾತ್ರಿ 9 ಗಂಟೆಗೆ ನನ್ನ ಪೂಜ್ಯ ಪತಿಯವರಾದ



ಜನನ : 06-06-1952
ಲಿಂಗೈಕ್ಯ : 18-09-2021

ಶ್ರೀ ಗುರಾಳರ ಪರಮೇಶ್ವರಪ್ಪನವರು

ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ 26.09.2021ನೇ ಭಾನುವಾರ ಬೆಳಿಗ್ಗೆ 10.30 ಗಂಟೆಗೆ
ಶ್ರೀ ಆಂಜನೇಯ ಸ್ವಾಮಿ ಕಲ್ಯಾಣ ಮಂಟಪ, ಶಾಮನೂರು
ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ✦ ಶ್ರೀಮತಿ ಶಾಂತಮ್ಮ ಪರಮೇಶ್ವರಪ್ಪ ಮತ್ತು ಮಕ್ಕಳು
✦ ಶ್ರೀಮತಿ ಮಧುರ ಮತ್ತು ಶ್ರೀ ಜಿ.ಪಿ. ಕವಿ ಹಾಗೂ ಮಕ್ಕಳು
✦ ಶ್ರೀಮತಿ ಶ್ವೇತ ಮತ್ತು ಶ್ರೀ ಚಿದಾನಂದ (ರವಿ) ಹಾಗೂ ಮಕ್ಕಳು
✦ ಶ್ರೀಮತಿ ಸುಮ ಮತ್ತು ಶ್ರೀ ಮಲ್ಲಿಕಾರ್ಜುನ್ ಹಾಗೂ ಮಕ್ಕಳು
✦ ಶ್ರೀಮತಿ ವೀಣಾ ಮತ್ತು ಶ್ರೀ ವಿಜಯಕುಮಾರ್ ಹಾಗೂ ಮಕ್ಕಳು
✦ ಮೃತರ ಸಹೋದರರು, ಮೊಮ್ಮಕ್ಕಳು, ಅಳಿಯಂದಿರು
✦ ಗುರಾಳರ ವಂಶಸ್ಥರು, ಶಾಮನೂರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು

ಚಿದು ಆಪ್ಟಿಕಲ್ಸ್, ಪಿ.ಜೆ. ಬಡಾವಣೆ, ದಾವಣಗೆರೆ. ಮೊ: 99644 66984, 83102 40764

ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.




ದಸರಾ–ದೀಪಾವಳಿ ಹಬ್ಬದ ಪ್ರಯುಕ್ತ

AP ENCLAVE

Exclusive Residential Plotted Development

AP ENCLAVE
ANNAPURNESHWARI








FOR THOSE WHO EXPECT MORE

PROJECT HIGHLIGHTS
- 24x7 bus facility
- 24x7 Water & Power supply
- Automatic LED Street Lights
- Clear Files • Execellent Location
- Entire Layout As per Vaastu
- Execellent Water Table

AMENITIES
- Entrance Arch with Gate
- Asphalted Roads
- Kids Play Area
- Underground drainage system
- Round the clock security

- Harihar City : 05 Minutes
- Davangere City : 10 Minutes

Execellent connectivity and proximity to premier educational institutions.

Healthcare facilities and a wide range of work places.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಬಂಪರ್ ಕೊಡುಗೆ

ನಾವು ನೂತನವಾಗಿ ನಿರ್ಮಿಸಿರುವ
ಅನ್ನಪೂರ್ಣೇಶ್ವರಿ ಎನ್‌ಕ್ಲೇವ್ (A.P. Enclave)ನಲ್ಲಿ
'ಎ' ಬಡಾವಣೆ ಮತ್ತು 'ಬಿ' ಬಡಾವಣೆಗಳ
ನಿರ್ಮಾಣ ಮುಕ್ತಾಯಗೊಂಡಿದ್ದು,
ಇನ್ನು 'ಸಿ' ಮತ್ತು 'ಡಿ' ಬಡಾವಣೆಗಳ
ನಿರ್ಮಾಣ ಪ್ರಕ್ರಿಯೆ ಆರಂಭಗೊಂಡಿದೆ.
ಈ ಬಡಾವಣೆಗಳಲ್ಲಿನ ನಿವೇಶನಗಳಿಗೆ
ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಂದ
250 ಅರ್ಜಿಗಳನ್ನು ಆಹ್ವಾನಿಸಲಾಗಿದ್ದು,
ಈ ಅರ್ಜಿಗಳಲ್ಲಿ 150 ಅರ್ಜಿಗಳನ್ನು ಮಾತ್ರ
ಲಕ್ಕಿ ಡ್ರಾ ಮೂಲಕ ಆಯ್ಕೆ ಮಾಡಲಾಗುವುದು.

ನಿವೇಶನಗಳ ಅಳತೆ : 30×50 ಅಡಿಗಳು

ನಿವೇಶನಕ್ಕೆ 250 ಅರ್ಜಿಗಳನ್ನು ಕೊಡಲಾಗುತ್ತದೆ.
ಅರ್ಜಿ ಒಂದಕ್ಕೆ ರೂ. 1050/- (ಹಿಂತಿರುಗಿಸುವ ಶುಲ್ಕ)

ಅರ್ಜಿ ವಿತರಿಸುವ ದಿನಾಂಕ : 25.09.2021ರ ಶನಿವಾರ
ಅರ್ಜಿ ವಿತರಿಸುವ ಸಮಯ : ಬೆಳಿಗ್ಗೆ 9.30 ರಿಂದ ಸಂಜೆ 5.30ರವರೆಗೆ
ಅರ್ಜಿ ಸಿಗುವ ಸ್ಥಳ : ಎ.ಪಿ. ಎನ್‌ಕ್ಲೇವ್
ಹರಿಹರ-ದಾವಣಗೆರೆ ಸಮಾನಂತರ ರಸ್ತೆ,
ರೈಲ್ವೆ ಗೇಟ್ ಹತ್ತಿರ, ಹರಿಹರ.

(ಷರತ್ತುಗಳು ಅನ್ವಯಿಸುತ್ತವೆ)

ಹೆಚ್ಚಿನ ಮಾಹಿತಿಗಾಗಿ
ಎ.ಪಿ. ಡೆವಲಪರ್ಸ್
ಮೊ. 81235 31456, 97392 23456

# 60 ಸಾವಿರ ದಾಟಿದ ಷೇರು ಸೂಚ್ಯಂಕ

## 31 ವರ್ಷಗಳಲ್ಲಿ ಸಾವಿರದಿಂದ ಅರವತ್ತು ಸಾವಿರದ ಹಂತಕ್ಕೆ

ಮುಂಬೈ, ಸೆ. 24 – ಮುಂಬೈ ಷೇರು ಸೂಚ್ಯಂಕ ಶುಕ್ರವಾರ ಮೊದಲ ಬಾರಿಗೆ 60 ಸಾವಿರದ ಗಡಿ ದಾಟಿದೆ. 30 ಷೇರುಗಳ ಸೂಚ್ಯಂಕ ಶುಕ್ರವಾರ 16.311 ಅಂಕಗಳ ಏರಿಕೆ ಕಂಡಿದ್ದು, ಸಾರ್ವಕಾಲಿಕ ದಾಖಲೆಯ 60,4,847ಕ್ಕೆ ತಲುಪಿದೆ.

ಇದೇ ದಿನ ಎನ್.ಎಸ್.ಇ. ಸೂಚ್ಯಂಕ 30.25 ಅಂಕಗಳಷ್ಟು ಹೆಚ್ಚಾಗಿದ್ದು, ದಾಖಲೆಯ 17,853.20ಕ್ಕೆ ತಲುಪಿದೆ.

31 ವರ್ಷಗಳ ನಂತರ ಮುಂಬೈ ಷೇರು ಸೂಚ್ಯಂಕ 1,000 ಅಂಕಗಳಿಂದ 60 ಸಾವಿರಕ್ಕೆ ತಲುಪಿದೆ.

ಕಳೆದ ಕೆಲ ವರ್ಷಗಳಲ್ಲಿ ಸೂಚ್ಯಂಕ ಹಲವು ಮೈಲಿಗಲ್ಲುಗಳನ್ನು ದಾಟಿದೆ. ಫೆಬ್ರವರಿ 6, 2006ರಲ್ಲಿ ಷೇರು ಸೂಚ್ಯಂಕ 10 ಸಾವಿರದ ಮಟ್ಟಕ್ಕೆ ತಲುಪಿತ್ತು.

2007, ಅಕ್ಟೋಬರ್ 29ರಂದು 20 ಸಾವಿರದ ಹಂತಕ್ಕೆ ಬಂದಿತ್ತು. ನಂತರ ಮಾರ್ಚ್ 4, 2015ರಲ್ಲಿ 30 ಸಾವಿರದ ಮಟ್ಟ ತಲುಪಿತ್ತು. ಮೇ 23, 2019ರಂದು ಸೂಚ್ಯಂಕ 40 ಸಾವಿರಕ್ಕೆ ಹಾಗೂ ಜನವರಿ 21, 2021ರಂದು 50 ಸಾವಿರದ ಹಂತಕ್ಕೆ ತಲುಪಿತ್ತು.

ಆಸಕ್ತಿಕರ ಅಂಶವೆಂದರೆ ಷೇರು ಸೂಚ್ಯಂಕ 50 ಸಾವಿರ ಹಾಗೂ 60 ಸಾವಿರದ ಹಂತವನ್ನು ಒಂದೇ ವರ್ಷದಲ್ಲಿ ತಲುಪಿದೆ. ಕೊರೊನಾ ನಂತರ ಷೇರು ಪೇಟೆಯಲ್ಲಿ ಹಿಂದೆಂದೂ ಕಾಣದಷ್ಟು ಏರಿಕೆ ಕಂಡು ಬರುತ್ತಿದೆ. 2021ರಲ್ಲಿ ಷೇರು ಪೇಟೆಯಲ್ಲಿ ಶೇ.25.75ರ ಏರಿಕೆಯಾಗಿದೆ.

# ವಿದ್ಯಾನಗರ ರೋಟರಿಯಿಂದ ರಕ್ತ ತಪಾಸಣಾ ಶಿಬಿರ

ದಾವಣಗೆರೆ, ಸೆ. 24- ನಗರದ ವಿದ್ಯಾನಗರ ರೋಟರಿ ಸಂಸ್ಥೆ ಇವರ ಆಶ್ರಯದಲ್ಲಿ ಇದೇ ದಿನಾಂಕ 29ರ ಬುಧವಾರ ಬೆಳಿಗ್ಗೆ 9 ರಿಂದ ಶರಣ ಮಾಗನೂರು ಬಸಪ್ಪ ರಪೋಟರಿ ಭವನದಲ್ಲಿ ಸಕ್ಕರೆ ಮಟ್ಟದ ಅಂಶ ಗುರುತಿಸಲು ಉಚಿತ ರಕ್ತ ತಪಾಸಣೆ ಶಿಬಿರ

ತಪಾಸಣೆಗೆ ಬರುವವರು ಖಾಲಿ ಹೊಟ್ಟೆಯಲ್ಲಿ ಬರತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ರೋ.ಹೆಚ್. ಆಂಜನೇಯ ಮೂರ್ತಿ ಅಧ್ಯಕ್ಷರು (94486 68165) ಮತ್ತು ರೋ. ರವಿಕುಮಾರ್( 88929 88989) ಇವರನ್ನು ಸಂಪರ್ಕಿಸಬಹುದಾಗಿದೆ.

# ಜನನ, ಮರಣ ಅರಿತು ಬಾಳಿದರೆ ಜೀವನ ಸಾರ್ಥಕ

ಹರಪನಹಳ್ಳಿ, ಸೆ.24- ಗ್ರಾಮಾಂತರ ಪ್ರದೇಶದಲ್ಲಿ ಶಿಕ್ಷಣ ಜ್ಞಾನವನ್ನು ಉಣಬಡಿಸಿ ವಿಶ್ವಮಟ್ಟದಲ್ಲಿ ಶ್ರೀ ಸಿರಿಗೆರೆ ಮಠವನ್ನು ಪರಿಚಯಿಸಿದ ಮಹಾನ್ ಪುಣ್ಯಾತ್ಮರು ಲಿಂಗೈಕ್ಯ ಶ್ರೀ ಶಿವಕುಮಾರ ಶಿವಾಚಾರ್ಯರಾಗಿದ್ದಾರೆಂದು ಸಾಧು ವೀರಶೈವ ಸಮಾಜದ ಅಧ್ಯಕ್ಷ ಗುಂಡಗತ್ತಿ ಬಂದೋಳ ಮಂಜುನಾಥ್ ಹೇಳಿದರು.

ಪಟ್ಟಣದ ತರಳಬಾಳು ವಿದ್ಯಾಸಂಸ್ಥೆಯ ಹೆಚ್‌ಪಿಎಸ್ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಶ್ರೀ ತರಳಬಾಳು ಜಗದ್ಗುರು ಲಿಂಗೈಕ್ಯ ಶ್ರೀ 1108 ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ 29ನೇ ಶ್ರದ್ಧಾಂಜಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜನನ, ಮರಣ, ಜೀವನ ಎಂಬ ಈ ಮೂರು ವಿಷಯಗಳನ್ನು ಮನುಷ್ಯ ತಿಳಿದು ಬಾಳಿದರೆ ಜೀವನ ಸಾರ್ಥಕತೆ ಆಗುತ್ತದೆ. ಇತ್ತೀಚಿನ ದಿನಗಳಲ್ಲಿ ಯುವ ಪೀಳಿಗೆಯಲ್ಲಿ ಮೊಬೈಲ್ ಗೀಳು ಹೆಚ್ಚಾಗಿದ್ದು, ಯಾವುದರ ಅರಿವಿಲ್ಲದಂತಾಗುತ್ತಿದೆ. ಇದು ಬೇಸರದ ಸಂಗತಿ. ಜೀವನದಲ್ಲಿ ಸ್ವಲ್ಪ ಕಷ್ಟಪಟ್ಟರೆ ಜೀವನ ಪರ್ಯಂತ ಸುಖವಾಗಿರಬಹುದು ಎಂಬುದನ್ನು ಶ್ರೀಗಳ ಕಾಯಕ ನಿಷ್ಠೆಯಿಂದ ತಿಳಿಯಬಹುದು ಎಂದರು.



ಹರಪನಹಳ್ಳಿ : ತರಳಬಾಳು ಲಿಂ. ಶ್ರೀಗಳ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಸಾಧು ವೀರಶೈವ ಸಮಾಜದ ಅಧ್ಯಕ್ಷ ಗುಂಡಗತ್ತಿ ಬಂದೋಳ ಮಂಜುನಾಥ್

ಹಾವೇರಿಯ ಎಸ್‌ಜೆವಿಎಂ ಪದವಿ ಪೂರ್ವ ಕಾಲೇಜು ಉಪನ್ಯಾಸಕ ಶಿವಾನಂದ ಬ. ಸಂಗಾಪುರ ಮಾತನಾಡಿ, ಜಗದ ಒಳಿತಿಗಾಗಿ ಜನಿಸಿದ ಮಹಾಗುರುವಾಗಿ, ಕತ್ತಲೆಯಲ್ಲಿದ್ದ ಸಮಾಜಕ್ಕೆ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಮಹಾಬೆಳಕನ್ನು ತೋರಿ, ನಿಜಾರ್ಥದ ಜಗದ್ಗುರುವೆಂದು ಜನಮಾನಸದಿ ಚಿರಸ್ಥಾಯಿಯಾಗಿರುವ ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಇಪ್ಪತ್ತನೇಯ ಪೀಠಾಧೀಪತಿಗಳಾಗಿದ್ದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮೀಜಿಯವರು ತಮ್ಮ ಜೀವಿತದ ಅವಧಿಯಲ್ಲಿಯೇ ಜನಮಾನ ಸದಲ್ಲಿ ದಂತಕಥೆಯಾಗಿದ್ದಾರೆ ಎಂದರು.

ಕಾಲೇಜು ಸಲಹಾ ಸಮಿತಿ ಸದಸ್ಯ ಎಸ್. ಬಿ. ಪಾಟೀಲ್, ಹೆಚ್‌ಪಿಎಸ್ ಪಿಯು ಕಾಲೇಜು ಪ್ರಾಚಾರ್ಯ ಡಾ.ಮಂಜುನಾಥ್ ಬೆನಕನಕೊಂಡ ಮಾತನಾಡಿ, ಸಾಗರಕ್ಕೆ ಸಾಗರವೇ ಉಪಮೆ ಎನ್ನುವಂತೆ ಶ್ರೀಗಳಿಗೆ ಶ್ರೀಗಳೇ ಸಾಟಿ. ಗುರುಗಳು ಆಸೀನರಾದದ್ದು ಬೆಳ್ಳಿ, ಬಂಗಾರದ ಸಿಂಹಾಸನದ ಮೇಲೆ ಅಲ್ಲ. ಭಕ್ತರ ಹೃದಯವೇ ಅವರ ಸಿಂಹಾಸನವಾಗಿತ್ತು ಎಂದರು.

ಈ ವೇಳೆ ಸಾಧು ವೀರಶೈವ ಸಮಾಜದ ಉಪಾಧ್ಯಕ್ಷ ಉಮೇಶ್, ಶೇಖರ್ ಗೌಡ ಪಾಟೀಲ್, ದೈಹಿಕ ಶಿಕ್ಷಕ ಕೆ.ಟಿ.ವೆಂಕಟೇಶ್, ಉಪನ್ಯಾಸಕರುಗಳಾದ ಮಂಜುನಾಥ್ ಮಾಳ್ಗಿ, ಕೆ.ಬಿ. ರವೀಂದ್ರ, ಬಿ.ಒ. ಸುಧಾ, ಡಿ.ಸಿ. ಪ್ರದೀಪ್, ಕೆ.ಎಸ್. ನಾಗರಾಜ್, ಸಿದ್ದಪ್ಪ, ಅರುಣ್, ಮೇಘನಾ, ಸೌಭಾಗ್ಯಮ್ಮ, ರವಿನಾಯ್ಕ್, ವಾರ್ಡನ್ ಪ್ರಕಾಶ್, ಸಿಬ್ಬಂದಿ ಬಸವರಾಜ್, ಕೊಟ್ರೇಶ್, ಶಕುಂತಲಮ್ಮ ಇನ್ನಿತರರಿದ್ದರು.

# ಏರ್‌ಬಸ್ ವಿಮಾನಗಳ ಖರೀದಿಗೆ 20 ಸಾವಿರ ಕೋಟಿ ರೂ. ಒಪ್ಪಂದ




ನವದೆಹಲಿ, ಸೆ. 24 – 56 ಸಿ-295 ಸಾರಿಗೆ ವಿಮಾನಗಳ ಖರೀದಿಗಾಗಿ ಏರ್‌ಬಸ್ ಡಿಫೆನ್ಸ್ ಅಂಡ್ ಸ್ಪೇಸ್ ಜೊತೆಗೆ ಭಾರತ 20 ಸಾವಿರ ಕೋಟಿ ರೂ.ಗಳ ಒಪ್ಪಂದ ಮಾಡಿಕೊಂಡಿದೆ. ವಾಯುಪಡೆಯ ಹಳೆಯದಾಗಿರುವ ಅವ್ರೋ - 748 ವಿಮಾನಗಳ ಜಾಗಕ್ಕೆ ಹೊಸ ವಿಮಾನಗಳನ್ನು ಖರೀದಿಸಲಾಗುತ್ತಿದೆ. 16 ವಿಮಾನಗಳನ್ನು ಸಿದ್ಧ ಸ್ವರೂಪದಲ್ಲಿ ಆಮದು ಮಾಡಿಕೊಳ್ಳಲಾಗುವುದು. ನಂತರ 40 ವಿಮಾನಗಳನ್ನು ಟಾಟಾ ಅಡ್ವಾನ್ಸಡ್ ಸಿಸ್ಟಮ್ಸ್ (ಟಿ.ಎ.ಎಸ್.ಎಲ್.) ಸಹಭಾಗಿತ್ವದಲ್ಲಿ ಭಾರತದಲ್ಲೇ ಉತ್ಪಾದಿಸಲಾಗುವುದು.

ಏರ್‌ಬಸ್ ಡಿಫೆನ್ಸ್‌ಗೆ ಅಭಿನಂದಿಸಿರುವ ಟಾಟಾ ಟ್ರಸ್ಟ್ ಅಧ್ಯಕ್ಷ ರತನ್ ಟಾಟಾ, ವೈಮಾನಿಕ ವಲಯ ಹಾಗೂ ವೈಮಾನಿಕ ಯೋಜನೆಗಳಿಗೆ ಭಾರತವನ್ನು ಮುಕ್ತಗೊಳಿಸುವಲ್ಲಿ ಇದು ಮಹತ್ವದ ಹೆಜ್ಜೆ ಎಂದಿದ್ದಾರೆ.

ಈ ಯೋಜನೆಯಿಂದ ದೇಶದಲ್ಲಿ ಅಂತರರಾಷ್ಟ್ರೀಯ ಮಾನದಂಡದ ಪೂರೈಕೆ ಜಾಲ ಸೃಷ್ಟಿಯಾಗಲಿದೆ. ಇಂತಹ ಕ್ರಮವನ್ನು ಹಿಂದೆಂದೂ ತೆಗೆದುಕೊಂಡಿರಲಿಲ್ಲ ಎಂದಿದ್ದಾರೆ.

# ರೈತ ಸಂಘಟನೆಗಳಿಂದ ಬೈಕ್ ರ್‍ಯಾಲಿ



**ಹರಿಹರ**

ಹರಿಹರ, ಸೆ.24- ದೆಹಲಿಯಲ್ಲಿ ಕಳೆದ ಹತ್ತು ತಿಂಗಳಿನಿಂದ ಸತತವಾಗಿ ನಡೆಯುತ್ತಿರುವ ರೈತರ ಹೋರಾಟವನ್ನು ಬೆಂಬಲಿಸಿ, ರಾಜ್ಯದಲ್ಲಿ ಸೆ. 27 ರಂದು ರಾಜ್ಯದ ವಿವಿಧ ರೈತ ಸಂಘಟನೆಗಳ ವತಿಯಿಂದ ಬಂದ್‌ಗೆ ಕರೆ ನೀಡಿರುವ ಹಿನ್ನೆಲೆಯಲ್ಲಿ, ನಗರದಲ್ಲಿ ಇಂದು ಬೈಕ್ ರ್‍ಯಾಲಿ ನಡೆಸಲಾಯಿತು.

ವ್ಯಾಪಾರಸ್ಥರು ಸ್ವಯಂ ಪ್ರೇರಿತರಾಗಿ ತಮ್ಮ ತಮ್ಮ ಅಂಗಡಿ ಮುಂಗಟ್ಟನ್ನು ಬಂದ್ ಮಾಡವ ಮೂಲಕ ಬಂದ್ ಕರೆಗೆ ಬೆಂಬಲವನ್ನು ನೀಡುವಂತೆ ನಗರದಲ್ಲಿ ರ್‍ಯಾಲಿ ಮೂಲಕ ರೈತ ಮುಖಂಡರು ವ್ಯಾಪಾರಸ್ಥರಲ್ಲಿ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಹೇಶ್ ದೊಗ್ಗಳ್ಳಿ, ಪಾಲಾಕ್ಷಪ್ಪ ಹೊಳೆಸಿರಿಗೆರೆ, ರುದ್ರಪ್ಪ, ಬಸವರಾಜಪ್ಪ, ಗದಿಗೆಪ್ಪ ಗೋವಿನಾಳ, ಪ್ರಭುಗೌಡ, ರುದ್ರುಮುನಿ ಇನ್ನಿತರರು ಹಾಜರಿದ್ದರು.

# ಸದಾಶಿವ ಆಯೋಗದ ವರದಿ ತಿರಸ್ಕರಿಸಲು ಆಗ್ರಹ




### ಕರ್ನಾಟಕ ರಾಜ್ಯ ಮೀಸಲಾತಿ ಸಂರಕ್ಷಣಾ ಒಕ್ಕೂಟದಿಂದ ಪ್ರತಿಭಟನೆ

ದಾವಣಗೆರೆ, ಸೆ.24- ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಕೇಂದ್ರಕ್ಕೆ ಶಿಫಾರಸ್ಸು ಮಾಡದೇ ತಿರಸ್ಕರಿಸುವಂತೆ ಒತ್ತಾಯಿಸಿ, ಕರ್ನಾಟಕ ರಾಜ್ಯ ಮೀಸಲಾತಿ ಸಂರಕ್ಷಣಾ ಒಕ್ಕೂಟ ದಿಂದ ನಗರದಲ್ಲಿಂದು ಪ್ರತಿಭಟನೆ ನಡೆಸಲಾಯಿತು.

ಅಂಬೇಡ್ಕರ್ ವೃತ್ತದಿಂದ ಹಳೆ ಪಿ.ಬಿ. ರಸ್ತೆ ಮಾರ್ಗವಾಗಿ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ಮುಖೇನ ಸಾಗಿದ ಸಂಘಟನೆಯ ಪದಾಧಿಕಾರಿಗಳು, ಎಸ್‌ಸಿ-ಎಸ್‌ಟಿ ಮೀಸಲಾತಿ ಹೆಚ್ಚಿಸಲು ನ್ಯಾಯಮೂರ್ತಿ ಎಚ್. ಎನ್. ನಾಗಮೋಹನ ದಾಸ್ ಸರ್ಕಾರಕ್ಕೆ ಸಲ್ಲಿಸಿದ ವರದಿಯನ್ನು ಅಂಗೀಕರಿಸುವಂತೆ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಅವೈಜ್ಞಾನಿಕವಾಗಿರುವ ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿಯನ್ನು ಅನುಷ್ಠಾನಗೊಳಿಸಿದರೆ ಪರಿಶಿಷ್ಟ ಜಾತಿಯ 101 ಜಾತಿಗಳಲ್ಲಿ ಮಾದಿಗ ಸಮುದಾಯವನ್ನು ಹೊರತುಪಡಿಸಿ, ಉಳಿದ 100 ಜಾತಿಗಳಿಗೆ ತೀವ್ರ ಅನ್ಯಾಯವಾಗಲಿದೆ. ಆಯೋಗವು ಸಮೀಕ್ಷೆ ವೇಳೆ ವಾಸ್ತವವಾಗಿ ಸ್ಥಳ ಪರಿಶೀಲಿಸದೇ, ಒಂದೇ ಸಮುದಾಯದ ವ್ಯಕ್ತಿಗಳಿಂದ ಎಲ್ಲಾ ಜಿಲ್ಲೆಗಳಲ್ಲೂ ಮಾಹಿತಿ ಪಡೆದು, ವರದಿ ರಚಿಸಿದೆ. ರಾಜ್ಯ ಸರ್ಕಾರ ಈ ಆಯೋಗದ ವರದಿ ಅನುಷ್ಠಾನಗೊಳಿಸಬಾರದು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪರಿಶಿಷ್ಟ ಜಾತಿಯ ಸಹೋದರ ಸಮುದಾಯಗಳ ಮಧ್ಯೆ ಪ್ರಚೋದನೆ, ದ್ವೇಷ, ಒಡಕು ಬಿತ್ತಲು ಹೊರಟಿರುವ ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ಎ. ನಾರಾಯಣಸ್ವಾಮಿಗೆ ಸಚಿವ ಸಂಪುಟದಿಂದ ಕೈಬಿಡಬೇಕು. ಹೋರಾಟಗಳ ಹೆಸರಿನಲ್ಲಿ ಬಂಜಾರರ ಕುಲ ಗುರು ಶ್ರೀ ಸೇವಾಲಾಲ್ ಸ್ವಾಮಿಗಳು, ಭೋವಿ ಸಮಾಜದ ದಾರ್ಶನಿಕರಾದ ಶ್ರೀ ಸಿದ್ಧರಾಮೇಶ್ವರ ಶರಣರು ಸೇರಿದಂತೆ, ಯಾವುದೇ ದಾರ್ಶನಿಕರನ್ನು, ಸಮಾಜದ ಸಚಿವ ಪ್ರಭು ಚೌಹಾಣ್ ಅವರನ್ನು ಅವಹೇಳನ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ವಕೀಲ ರಾಘವೇಂದ್ರ ನಾಯ್ಕ, ಡಿ. ಬಸವರಾಜ್, ಜಯಣ್ಣ, ಆಟೋ ತಿಮ್ಮಣ್ಣ, ಎಸ್.ಜಿ. ಸೋಮಶೇಖರ್, ಕೆ.ಎನ್. ಓಂಕಾರಪ್ಪ, ನಂಜಾನಾಯ್ಕ, ಕೃಷ್ಣ ನಾಯ್ಕ, ಧನರಾಜ ನಾಯ್ಕ, ನಾಗರಾಜ ಇನ್ನಿತರರು ಭಾಗವಹಿಸಿದ್ದರು.

# ದೇವರಮನಿಗೆ ಕೇದಾರ ಜಗದ್ಗುರುಗಳ ಸನ್ಮಾನ




ದಾವಣಗೆರೆ, ಸೆ.24 - ನಿನ್ನೆ ನಗರಕ್ಕಾಗಮಿಸಿದ್ದ ಕೇದಾರನಾಥ ಜಗದ್ಗುರುಗಳಾದ ಕೇದಾರ ಪೀಠದ ಶ್ರೀ ಭೀಮಾಶಂಕರಲಿಂಗ ಶಿವಾಚಾರ್ಯ ಸ್ವಾಮೀಜಿ ಹಾಗು ಜಗಳೂರಿನ ಕಣ್ವಕುಪ್ಪೆ ಮಠದ ಶ್ರೀ ನಾಲ್ವಡಿ ಶಾಂತಲಿಂಗ ಸ್ವಾಮೀಜಿಗಳನ್ನು ಭೇಟಿ ಮಾಡಿದ ಸಂದರ್ಭದಲ್ಲಿ ದೂಡಾ ಅಧ್ಯಕ್ಷ ಅಧ್ಯಕ್ಷ ದೇವರಮನಿ ಶಿವಕುಮಾರ್ ಅವರನ್ನು ಆಶೀರ್ವದಿಸಿದರು.

# ನಂದಿತಾವರೆಗೆ ಇಂದು ಕಟೀಲ್

ಮಲೇಬೆನ್ನೂರು ಸಮೀಪದ ನಂದಿತಾವರೆ ಗ್ರಾಮಕ್ಕೆ ಸಂಜೆ 4.30ಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಭೇಟಿ ನೀಡಿ, ಬೂತ್‌ಮಟ್ಟದ ಅಧ್ಯಕ್ಷರ ಮನೆಗೆ ನಾಮಫಲಕ ಹಾಕುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ.

# ಯಡಿಯೂರಪ್ಪ ಅವರಿಗೆ ಅತ್ಯುತ್ತಮ ಶಾಸಕ ಪ್ರಶಸ್ತಿ



ಬೆಂಗಳೂರು, ಸೆ.24- ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅತ್ಯುತ್ತಮ ಶಾಸಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಇಂದು ನಡೆದ ವಿಧಾನಮಂಡಲದ ಜಂಟಿ ಸಮಾವೇಶದಲ್ಲಿ ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರ ಸಮ್ಮುಖದಲ್ಲಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಈ ಘೋಷಣೆ ಮಾಡಿದರು.

ಲೋಕಸಭಾಧ್ಯಕ್ಷರು ಜಂಟಿ ಸಮಾವೇಶ ಉದ್ದೇಶಿಸಿ ಮಾಡಿದ ನಂತರ ಬಿ.ಎಸ್. ಯಡಿಯೂರಪ್ಪ ಅವರನ್ನು ಸಭಾಧ್ಯಕ್ಷರ ಪೀಠದ ಬಳಿಗೆ ಆಹ್ವಾನಿಸಿ, ಬೆಳ್ಳಿ ಫಲಕ ನೀಡಿ ಸನ್ಮಾನಿಸಲಾಯಿತು. ಲೋಕಸಭಾಧ್ಯಕ್ಷರು, ಯಡಿಯೂರಪ್ಪ ಅವರಿಗೆ ಬೆಳ್ಳಿ ಫಲಕ ನೀಡಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಉಪಸ್ಥಿತರಿದ್ದರು.

# ಮೆಳ್ಳೇಕಟ್ಟೆ ಸರ್ಕಾರಿ ಪ್ರೌಢಶಾಲೆಯಲ್ಲಿ ಆದರ್ಶ ಪ್ರತಿಭಾ ಪುರಸ್ಕಾರ



**ವಿದ್ಯಾನಗರ ರೋಟರಿ ಸಂಸ್ಥೆ**

ದಾವಣಗೆರೆ, ಸೆ. 24- ವಿದ್ಯಾನಗರ ರೋಟರಿ ಸಂಸ್ಥೆಯಿಂದ ಮೆಳ್ಳೇಕಟ್ಟೆ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಆದರ್ಶ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸಲಾಗಿತ್ತು. ಹೆಚ್. ಆಂಜನೇಯ ಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ದಯಾನಂದ್, ಎಸ್.ಕೆ. ಸಿದ್ದಪ್ಪ ನೇತೃತ್ವ ವಹಿಸಿ, 4 ವಿದ್ಯಾರ್ಥಿಗಳಿಗೆ ಸನ್ಮಾನ ಮಾಡಲಾಯಿತು. ಶಾಲಾ ಮುಖ್ಯಸ್ಥ ರಾಮಪ್ಪ ಮತ್ತು ಇತರರು ಉಪಸ್ಥಿತರಿದ್ದರು.

# ಟ್ರ್ಯಾಕ್ಟರ್ ಪಲ್ಟಿ: ಯುವ ಕೃಷಿಕನ ಸಾವು

ದಾವಣಗೆರೆ, ಸೆ.24- ಟ್ರ್ಯಾಕ್ಟರ್ ಪಲ್ಟಿ ಹೊಡೆದು ಕಬ್ಬಿಣದ ಸಾಮಗ್ರಿಗಳು ಮೈ ಮೇಲೆ ಬಿದ್ದ ಪರಿಣಾಮ ಸ್ಥಳದಲ್ಲೇ ಯುವ ಕೃಷಿಕನೋರ್ವ ಮೃತಪಟ್ಟಿರುವ ಘಟನೆ ಮಾಯಕೊಂಡ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇಂದು ನಡೆದಿದೆ. ಹೊಳಲ್ಕೆರೆ ತಾಲ್ಲೂಕಿನ ಚಿಕ್ಕ ಎಮ್ಮಿಗನೂರು ಗ್ರಾಮದ ನವೀನ್ ಕುಮಾರ (33) ಮೃತ ದುರ್ದೈವಿ.

ದನಗಳ ಶೆಡ್ ಕಟ್ಟಲು ಬೇಕಿದ್ದ ಕಬ್ಬಿಣದ ಸಾಮಗ್ರಿಗಳ ಖರೀದಿಸಲು ದಾವಣಗೆರೆಗೆ ಬಂದಿದ್ದು, ಅವುಗಳನ್ನು ಖರೀದಿಸಿ ವಾಪಸ್ ಬರುವಾಗ ಹಿರೇತೊಗಲೇರಿ ಬಳಿ ಇಳಿಜಾರಿನಲ್ಲಿ ಟ್ರ್ಯಾಕ್ಟರ್ ಪಲ್ಟಿಯಾಯಿತು. ಪರಿಣಾಮ ಟ್ರ್ಯಾಲಿಯಲ್ಲಿ ಕುಳಿತಿದ್ದ ನವೀನ್ ಕುಮಾರ ಮೃತಪಟ್ಟಿದ್ದಾನೆ.

# ರೈಲ್ವೆ ಹಳಿ ಬಳಿ ಯುವಕನ ಶವ ಪತ್ತೆ

ದಾವಣಗೆರೆ, ಸೆ.24- ಮಾಯಕೊಂಡದ ರೈಲ್ವೆ ಹಳಿ ಬಳಿಯಲ್ಲಿ ಅಪರಿಚಿತ ಯುವಕನೋರ್ವನ ಶವ ಪತ್ತೆಯಾಗಿದೆ.

ರೈಲ್ವೆ ಹಳಿಯ ಬಳಿ ಇರುವ ಹುಲ್ಲಿನ ಪೊದೆಯಲ್ಲಿ ಶವ ಪತ್ತೆಯಾಗಿದ್ದು, ಸಾವನ್ನಪ್ಪಿರುವ ಯುವಕನ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ. ಮೃತ ಯುವಕ ಸುಮಾರು 35 ರಿಂದ 40 ವರ್ಷ ವಯಸ್ಸಿನವನಾಗಿದ್ದಾನೆ.

ಹುಲ್ಲಿನ ಪೊದೆ ಯಲ್ಲಿ ಶವ ಬಿದ್ದಿರುವುದನ್ನು ಸ್ಥಳೀಯರು ಗಮನಿಸಿದ್ದು, ಬಳಿಕ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಮೃತ ಯುವಕನ ತಲೆ ಭಾಗದಲ್ಲಿ ಗಾಯಗಳಾಗಿದ್ದು, ರೈಲು ಡಿಕ್ಕಿ ಹೊಡೆದಿದೆಯಾ ಎಂಬುದರ ಬಗ್ಗೆ ಸ್ಪಷ್ಟವಾಗಿಲ್ಲ. ಇಳಿಜಾರು ಇರುವ ಕಾರಣ ಕಾಲು ಜಾರಿ ಬಿದ್ದು ತಲೆಗೆ ಪೆಟ್ಟಾಗಿ ಸಾವನ್ನಪ್ಪಿರಬಹುದು. ಉಳಿದಂತೆ ಮೈ ಮೇಲೆ ಯಾವುದೇ ಗಾಯಗಳಾಗಿರುವುದು ಕಂಡು ಬಂದಿಲ್ಲ. ಒಳಪೆಟ್ಟುಗಳಾಗಿರಬಹುದು ಎಂದು ರೈಲ್ವೇ ಪೊಲೀಸರು ತಿಳಿಸಿದ್ದಾರೆ.

# ಲೈಂಗಿಕ ದೌರ್ಜನ್ಯಕ್ಕೆ ಯತ್ನ : ಶಿಕ್ಷೆ

ದಾವಣಗೆರೆ, ಸೆ.24- ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಲು ಯತ್ನಿಸಿದ ಆರೋಪಿಗೆ 10 ವರ್ಷ ಕಠಿಣ ಶಿಕ್ಷೆ ಮತ್ತು 20 ಸಾವಿರ ರೂ. ದಂಡ ವಿಧಿಸಿ ಇಲ್ಲಿನ 2ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ ಆದೇಶಿಸಿದೆ. 6 ವರ್ಷದ ಅಪ್ರಾಪ್ತ ಬಾಲಕಿಯು ಏಪ್ರಿಲ್ 15, 2019 ರಂದು ಮಧ್ಯಾಹ್ನ ನಗರದ ಎಸ್.ಜೆ.ಎಂ. ನಗರ 9ನೇ ಕ್ರಾಸ್‌ನಲ್ಲಿರುವ ವಾಸದ ಮನೆ ಮುಂಭಾಗದಲ್ಲಿ, ಆರೋಪಿತನ ಮನೆ ಮುಂದಿನ ಬಾಗಿಲ ಬಳಿ ಆಟವಾಡುತ್ತಿದ್ದ ಸಂದರ್ಭದಲ್ಲಿ ಆರೋಪಿ ತನ್ನ ಮನೆಯಲ್ಲಿ ಈ ಕೃತ್ಯ ನಡೆಸಿದ್ದನೆಂದು ದೂರಲಾಗಿತ್ತು.

ಆರೋಪ ಸಾಬೀತಾಗಿದ್ದರಿಂದ ನ್ಯಾಯಾಧೀಶರಾದ ಎನ್. ಶ್ರೀಪಾದ ಅವರು ಆರೋಪಿಗೆ ಈ ಶಿಕ್ಷೆ ವಿಧಿಸಿದ್ದಾರೆ. ದಂಡದ ಹಣದಲ್ಲಿ 15 ಸಾವಿರ ರೂ.ಗಳನ್ನು ನೊಂದ ಬಾಲಕಿಗೆ ಪರಿಹಾರವಾಗಿ ನೀಡಬೇಕೆಂದು ಆದೇಶಿಸಿದ್ದಾರೆ. ಸರ್ಕಾರದಿಂದ ಸಂತ್ರಸ್ಥೆಗೆ 3 ಲಕ್ಷ ರೂ. ಪರಿಹಾರ ನೀಡಲು ಹಾಗೂ ಈಗಾಗಲೇ ಸಂತ್ರಸ್ಥೆಗೆ ಮಧ್ಯಂತರವಾಗಿ ನೀಡಿದ ಪರಿಹಾರ ಹಣ 1 ಲಕ್ಷದ 50 ಸಾವಿರ ರೂ.ಗಳನ್ನು ಕಳೆದು ಉಳಿದ ಹಣವನ್ನು ಸಂತ್ರಸ್ಥೆಗೆ ನೀಡಲು ಇಂದು ತೀರ್ಪು ನೀಡಿದ್ದಾರೆ.

ಪ್ರಕರಣದ ತನಿಖೆಯನ್ನು ನಗರ ಡಿವೈಎಸ್ಪಿ ಎಸ್.ಎಮ್. ನಾಗರಾಜ್ ಮಾಡಿದ್ದು, ಸರ್ಕಾರದ ಪರವಾಗಿ ಕೆ. ನಾಗರಾಜ್ ಸಾಕ್ಷಿ ವಿಚಾರಣೆ ನಡೆಸಿದ್ದು, ಸರ್ಕಾರಿ ಅಭಿಯೋಜಕ ಕೆ.ಜಿ. ಜಯಪ್ಪ ವಾದ ಮಂಡಿಸಿದ್ದಾರೆ.

# ಬೀರ್ ಮಾರಾಟದಲ್ಲಿ ಕೂಟ ಯುಬಿಎಲ್‌ಗೆ 752 ಕೋಟಿ ರೂ. ದಂಡ

ನವದೆಹಲಿ, ಸೆ. 24 – ಬೀರ್ ಪೂರೈಕೆಯಲ್ಲಿ ಕೂಟ ರಚಿಸಿಕೊಂಡ ಕಾರಣಕ್ಕಾಗಿ ಯುನೈಟೆಡ್ ಬ್ರೇವರೀಸ್, ಕಾರ್ಲ್ಸ್‌ಬರ್ಗ್ ಇಂಡಿಯಾ, ಆಲ್ ಇಂಡಿಯಾ ಬ್ರೂವರ್ಸ್ ಅಸೋಸಿಯೇಷನ್ ಹಾಗೂ 11 ವ್ಯಕ್ತಿಗಳಿಗೆ ಸ್ಪರ್ಧಾ ಆಯೋಗ (ಸಿ.ಸಿ.ಐ.) 873 ಕೋಟಿ ರೂ.ಗಳ ದಂಡ ವಿಧಿಸಿದೆ.

ನಾಲ್ಕು ವರ್ಷಗಳ ಹಿಂದೆ ವಿವರವಾದ ತನಿಖೆಗೆ ಆದೇಶಿಸಲಾಗಿತ್ತು. ತನಿಖೆಯ ನಂತರ 231 ಪುಟಗಳ ಆದೇಶ ಹೊರಡಿಸಿರುವ ಆಯೋಗ, ಕಂಪನಿಗಳು, ಸಹವರ್ತಿಗಳು ಹಾಗೂ ವ್ಯಕ್ತಿಗಳು ಸ್ಪರ್ಧಾ ವಿರೋಧಿ ಪದ್ಧತಿಗಳಿಂದ ದೂರವಿರಬೇಕು ಎಂದು ತಿಳಿಸಿದೆ.

ಯು.ಬಿ.ಎಲ್., ಅನ್ಹೂಸರ್ ಬಸ್ಚ್ ಇನ್‌ಬೆವ್ ಇಂಡಿಯಾ ಲಿಮಿಟೆಡ್ ಹಾಗೂ ಕಾರ್ಲ್ಸ್ ಬರ್ಗ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ಗಳ ವಿರುದ್ಧ ಆದೇಶ ಹೊರಡಿಸಲಾಗಿದೆ.


ಅಬ್ ಇನ್‌ಬೆವ್‌ಗೆ ಯಾವುದೇ ದಂಡ ವಿಧಿಸಿಲ್ಲ. ಕೆಲವರ ವಿರುದ್ಧ ಕಡಿಮೆ ಪ್ರಮಾಣದ ದಂಡ ವಿಧಿಸಲಾಗಿದೆ. ಹಲವಾರು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೂಟ ರಚಿಸಿ ಕೊಂಡು ಬೀರ್ ಮಾರಾಟ ಹಾಗೂ ಪೂರೈಕೆ ನಡೆಸಲಾಗುತ್ತಿದೆ. ಇದರಲ್ಲಿ ಆಲ್ ಇಂಡಿಯಾ ಬ್ರೂವರ್ಸ್ ಅಸೋಸಿಯೇಷನ್ ಸೇರಿದೆ ಎಂದು ಸಿಸಿಐ ತಿಳಿಸಿದೆ.

ಯುಬಿಎಲ್ ಹಾಗೂ ಕಾರ್ಲ್ಸ್‌ಬರ್ಗ್‌ಗಳ ವಿರುದ್ಧ ಕ್ರಮವಾಗಿ 752 ಕೋಟಿ ರೂ. ಹಾಗೂ 121 ಕೋಟಿ ರೂ.ಗಳ ದಂಡ ವಿಧಿಸಲಾಗಿದೆ. ಎ.ಐ. ಬಿ.ಎ.ಗೆ 6.25 ಲಕ್ಷ ರೂ. ದಂಡ ವಿಧಿಸಲಾಗಿದೆ. 2009ರಿಂದ ಅಕ್ಟೋಬರ್ 10, 2018ರ ನಡುವಿನ ಅವಧಿಯಲ್ಲಿ ಕೂಟ ರಚಿಸಿಕೊಂಡು ಕಾರ್ಯ ನಿರ್ವಹಿಸಲಾಗಿತ್ತು ಎಂದು ತಿಳಿಸಲಾಗಿದೆ.

# ಶೈಕ್ಷಣಿಕ ಶುಲ್ಕ ಮರುಪಾವತಿ ಅರ್ಜಿ ಸಲ್ಲಿಕೆಗೆ ಅವಧಿ ವಿಸ್ತರಣೆ

ದಾವಣಗೆರೆ, ಸೆ.24 - ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಅಧಿಕೃತ ರಾಷ್ಟ್ರೀಯ ಕ್ರೀಡಾ ಸಂಸ್ಥೆಗಳು ಆಯೋಜಿಸುವ ರಾಷ್ಟ್ರ ಮಟ್ಟ ಮತ್ತು ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳ ಶೈಕ್ಷಣಿಕ ಶುಲ್ಕ ಮರುಪಾವತಿಸುವ ಯೋಜನೆಗಾಗಿ ಅರ್ಹ ಕ್ರೀಡಾಪಟುಗಳಿಂದ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಅವಧಿಯನ್ನು ಅಕ್ಟೋಬರ್ 25 ರವರೆಗೆ ವಿಸ್ತರಿಸಲಾಗಿದೆ. ಮಾಹಿತಿಗಾಗಿ 08192-237480 ಕ್ಕೆ ಸಂಪರ್ಕಿಸಬಹುದು..

## ಮೋಹನ್ ಕುಮಾರ್ ಎಂ.ಎ. ನಿಧನ



ದಾವಣಗೆರೆ ನಿಟುವಳ್ಳಿ ಹೊಸ ಬಡಾವಣೆ ವಾಸಿ
ಶ್ರೀ ಶಾಂಭವಿ ಜ್ಯೂವೆಲ್ಲರ್ಸ್ ಮಾಲೀಕರಾದ
**ಮೋಹನ್ ಕುಮಾರ್ ಎಂ.ಎ** (71)
ಇವರು ದಿನಾಂಕ 24.09.2021ರ ಶುಕ್ರವಾರ ಬೆಳಗ್ಗೆ 11.10 ಕ್ಕೆ ನಿಧರಾದರು. ಪತ್ನಿ, ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತಕ್ರಿಯೆಯು ದಿನಾಂಕ 24.09.2021ರ ಶುಕ್ರವಾರ ಸಂಜೆ 6.30ಕ್ಕೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಿತು.

ಇಂತಿ ದುಃಖಿತಪ್ತ ಕುಟುಂಬ ವರ್ಗ: ಪತ್ನಿ: ತಾರಾ ಮೋಹನ್, ಪುತ್ರ : ಕಾರ್ತಿಕ್
**ಮೊ: 78925 81597, 99642 22714**

## 4ನೇ ವರ್ಷದ ಪುಣ್ಯಸ್ಮರಣೆ



**ದಿ॥ ಶ್ರೀಮತಿ ಪಿ.ಡಿ. ಕಮಲಮ್ಮನವರು (ಗಂಗಮ್ಮ)**
ಜನನ : 01.01.1949, ನಿಧನ : 25.09.2017
ನೀವು ನಮ್ಮನ್ನು ಅಗಲಿ ಇಂದಿಗೆ ನಾಲ್ಕು ವರ್ಷಗಳಾದವು.
ನಿಮ್ಮ ಮಾರ್ಗದರ್ಶನ ಹಾಗೂ ನೆನೆಪಿನಲ್ಲಿ ಮುನ್ನಡೆಯುತ್ತಿರುವ,
ನಿಮ್ಮ ಪತಿ ಪಿ. ದೊಡ್ಡನಾಯ್ಕ, ನಿವೃತ್ತ ಡಿವೈಎಸ್‌ಪಿ
ಶ್ರೀ ಪಿ.ಡಿ. ಕುಮಾರ್, ಡಾ॥ ಪಿ.ಡಿ. ಮುರುಳೀಧರ್,
ಶ್ರೀ ಪಿ.ಡಿ. ಚಿದಾನಂದ
ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು.
9ನೇ ಕ್ರಾಸ್, 'ಎ' ಬ್ಲಾಕ್, ದೇವರಾಜ್ ಅರಸ್ ಬಡಾವಣೆ, ದಾವಣಗೆರೆ.

**ಪುಣ್ಯಸ್ಮರಣೆ :**
ದಿ. 25.09.2021, ಶನಿವಾರ ಸಮಯ: ಬೆಳಗ್ಗೆ 11.30 ಕ್ಕೆ
ಸ್ಥಳ : ಹರಪನಹಳ್ಳಿ ತಾಲ್ಲೂಕಿನ
ಯರಬಳ್ಳಿ ತಾಂಡಾದ ಮೃತರ ಸ್ವಗೃಹದಲ್ಲಿ
Mob: 96063 27018, 98452 49646, 94484 15444

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 18.09.2021ರಂದು
ನಿಧನರಾದ ಸಿವಿಜಾನ್ ಕನ್‌ಸ್ಟ್ರಕ್ಷನ್
ಮತ್ತು ಪ್ರತೀಕ್ ಕನ್ಸಲ್ಟೆನ್ಸಿ ಸರ್ವೀಸಸ್‌ನಲ್ಲಿ
ತರಗಾರ ಮೇಸ್ತ್ರಿಯಾಗಿದ್ದ
**ರಿಯಾಜ್ ಅಹಮದ್**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಷಣ್ಮುಖರಾಜು ಗುಜ್ಜರ್
ಶ್ರೀ ಮಾರುತಿ ಚಿಟ್‌ಫಂಡ್ಸ್ (ರಿ) ಮತ್ತು ಸಿಬ್ಬಂದಿ ವರ್ಗ, ದಾವಣಗೆರೆ.

॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥



## ಕೈಲಾಸ ಶಿವಗಣಾರಾಧನೆಯ ಆಹ್ವಾನ ಪತ್ರಿಕೆ






ದಾವಣಗೆರೆ ಜಿ॥ ಹರಿಹರ ತಾ॥ ಹನಗವಾಡಿ ಗ್ರಾಮದ ವಾಸಿ
**ಶ್ರೀಮತಿ ಗಂಗಮ್ಮ ದೊಡ್ಡಮನಿ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 17.09.2021ನೇ ಶುಕ್ರವಾರ ಸಂಜೆ 5.00ಕ್ಕೆ ನನ್ನ ಪೂಜ್ಯ ಪತಿಯವರಾದ
**ಶ್ರೀ ರುದ್ರಪ್ಪ ದೊಡ್ಡಮನಿ**
ಇವರು ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆ** ಯನ್ನು
**ದಿನಾಂಕ 25.09.2021ನೇ ಶನಿವಾರ ಬೆಳಗ್ಗೆ 10.30ಕ್ಕೆ ಹನಗವಾಡಿ ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ**
ನೆರವೇರಿಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖಿತಪ್ತರು: **ಶ್ರೀಮತಿ ವನಜಾಕ್ಷಮ್ಮ ಶ್ರೀ ದೊಡ್ಡಮನಿ ವಿರೂಪಾಕ್ಷಪ್ಪ ಮತ್ತು ಸಹೋದರರು, ದೊಡ್ಡಮನಿ ವಂಶಸ್ಥರು,ಹನಗವಾಡಿ ಹಾಗೂ ಬಂಧು-ಮಿತ್ರರು.**

## ನಾಗನೂರು ಬಿಂದಪ್ಪರ ಮರುಳಸಿದ್ದಪ್ಪ ನಿಧನ



ದಾವಣಗೆರೆ ತಾಲ್ಲೂಕು ನಾಗನೂರು ಗ್ರಾಮದ ವಾಸಿ ಬಿಂದಪ್ಪ ಮರುಳಸಿದ್ದಪ್ಪ (59) ಇವರು ದಿನಾಂಕ 24.09.2021ರ ಶುಕ್ರವಾರ ಸಂಜೆ 6.45ಕ್ಕೆ ನಿಧನರಾದರು. ಪತ್ನಿ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 25.09.2021ರ ಶನಿವಾರ ಮಧ್ಯಾಹ್ನ 1 ಗಂಟೆಗೆ ದಾವಣಗೆರೆ ತಾಲ್ಲೂಕು ನಾಗನೂರು ಗ್ರಾಮದಲ್ಲಿ ನೆರವೇರಲಿದೆ.



## ಡಾ. ಶ್ರೀಗಳವರಿಂದ ಧ್ವಜಾರೋಹಣ

ಸಿರಿಗೆರೆ, ಸೆ.24- 29ನೇ ಶ್ರದ್ಧಾಂಜಲಿ ಸಮಾರಂಭದ ಅಂಗವಾಗಿ ಶುಕ್ರವಾರ ಬೆಳಗ್ಗೆ 5.30ಕ್ಕೆ ಭಕ್ತಾದಿಗಳಿಂದ ರುದ್ರಾಭಿಷೇಕ, 9.30ಕ್ಕೆ ಲಿಂ. ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಹಾಗೂ ಶ್ರೀ ಗುರುಶಾಂತೇಶ್ವರ ರಾಜ ದೇಶೀಕೇಂದ್ರ ಸ್ವಾಮೀಜಿ ಪ್ರತಿಮೆಗಳಿಗೆ ಹಾಗೂ ಕರ್ತೃ ಗದ್ದುಗೆಗೆ ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ಪುಷ್ಪ ಅರ್ಪಿಸಿ ಮಾಲಾರ್ಪಣೆ ಮಾಡಿದರು.

ನಂತರ ಶ್ರೀಗಳು, ಶಿವಧ್ವಜಾರೋಹಣ ನೆರವೇರಿಸಿದ ಸಂದರ್ಭದಲ್ಲಿ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ಧ್ವಜಗೀತೆ ಹಾಡಿದರು. ಲತಾ ಮಂಟಪದಲ್ಲಿ ಪೂಜ್ಯರು ಭಕ್ತಾದಿಗಳಿಗೆ ಆಶೀರ್ವದಿಸಿದರು. ನೇರವಾಗಿ ಶ್ರೀ ಗುರುಶಾಂತೇಶ್ವರ ದಾಸೋಹ ಮಂಟಪಕ್ಕೆ ಭೇಟಿ ನೀಡಿ ವರ್ಚ್ಯುವಲ್ ಮಾಧ್ಯಮ ಬಿತ್ತರಗೊಂಡಿದ್ದನ್ನು ನೋಡಿ ಸಂತೋಷ ವ್ಯಕ್ತಪಡಿಸಿದರು.

## ಸಿದ್ಧಗಂಗೆಗೂ-ಸಿರಿಗೆರೆಗೂ ಅವಿನಾಭಾವ ಸಂಬಂಧ




**ಸಿದ್ಧಗಂಗಾ ಹಾಗೂ ಸಿರಿಗೆರೆಯ ಹಿಂದಿನ ಲಿಂ.ಶ್ರೀಗಳಿಬ್ಬರೂ ಸಮಕಾಲೀನ ಶ್ರೀಗಳು. ನಾಡಿನಲ್ಲಿ ಕ್ರಾಂತಿ ಮಾಡಿ ಶೈಕ್ಷಣಿಕ ಸೇವೆಯನ್ನು ನಾಡಿಗೆ ಅತ್ಯುತ್ತಮವಾಗಿ ಸಲ್ಲಿಸಿದ ಕೀರ್ತಿ ಇಬ್ಬರಿಗೂ ಸಲ್ಲುತ್ತದೆ. ಅವರಿಬ್ಬರ ಒಡನಾಟವೂ ಉತ್ತಮವಾಗಿತ್ತು. ತಮ್ಮ ಕಷ್ಟ, ನೋವುಗಳನ್ನು ಪರಸ್ಪರ ಹಂಚಿಕೊಂಡು ಸಲಹೆ-ಸಮಾಧಾನ ನೀಡುತ್ತಿದ್ದರು. ಇಂದಿಗೂ ಸಹ ಆ ಭಾವನೆ ಸಿರಿಗೆರೆ ಹಾಗೂ ಸಿದ್ಧಗಂಗೆಯಲ್ಲಿದೆ ಎಂದು ತುಮಕೂರು ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮೀಜಿ ನುಡಿದರು.**

**ಹಿರಿಯ ಲಿಂ.ಜಗದ್ಗುರುಗಳು ಕರ್ನಾಟಕದ ಕೋಟೆಯಾದರೆ, ಇಂದಿನ ಜಗದ್ಗುರುಗಳು ಪ್ರಪಂಚವನ್ನೇ ತಮ್ಮ ಕೋಟೆಯನ್ನಾಗಿಸಿಕೊಂಡಿದ್ದಾರೆ. ಆ ಮೂಲಕ ವಿಶ್ವಕ್ಕೇ ಧರ್ಮವನ್ನು ಬಿತ್ತುತ್ತಿರುವ ಕೀರ್ತಿಗೆ ಪಾತ್ರರಾಗಿದ್ದಾರೆ ಎಂದು ಹೇಳಿದರು.**

# ಶಿಕ್ಷಣ ಕ್ರಾಂತಿಯನ್ನೇ ಮಾಡಿದ ಲಿಂ. ಶಿವಕುಮಾರ ಶ್ರೀಗಳು

## 29ನೇ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ



ಸಿರಿಗೆರೆ, ಸೆ.24- ಜನ ಸಾಮಾನ್ಯರ ಜೊತೆ ಬೆರೆತು ಸಮಸ್ಯೆಗಳಿಗೆ ಸ್ಪಂದಿಸಿದ, ವಿಶೇಷವಾಗಿ ಹರಿಜನ-ಗಿರಿಜನ ಬಂಧುಗಳ ವಿಶ್ವಾಸ ಗಳಿಸಿ ಅವರಲ್ಲಿರುವ ಕೀಳರಿಮೆ ದೂರ ಮಾಡಿ ಆತ್ಮಸ್ಥೈರ್ಯ ಕೊಟ್ಟ ಶ್ರೇಷ್ಠ ಜಗದ್ಗುರುಗಳು ಲಿಂ.ಶಿವಕುಮಾರ ಶಿವಾಚಾರ್ಯ ಮಹಾ ಸ್ವಾಮೀಜಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸಿರಿಗೆರೆಯಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ಶ್ರೀ ತರಳಬಾಳು ಜಗದ್ಗುರು ಲಿಂ.ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಯವರ 29ನೇ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಅಂತರ್ಜಾಲದ ಮೂಲಕ ಅವರು ಮಾತನಾಡಿದರು.

ಅಸಾಮಾನ್ಯ ಗುಣಧರ್ಮ ಇದ್ದ ಶ್ರೇಷ್ಠ ಸ್ವಾಮೀಜಿಗಳೂ, ಸಮಾಜದಲ್ಲಿ ಜನಪರವಾಗಿ ನಿಲ್ಲಬಹುದು ಎಂದು ರಾಜ್ಯದಲ್ಲಿ ಪ್ರಥಮ ಬಾರಿಗೆ ತೋರಿಸಿಕೊಟ್ಟವರು ಲಿಂ.ಹಿರಿಯ ಜಗದ್ಗುರುಗಳು ಎಂದು ಬಣ್ಣಿಸಿದರು.

ಅಗತ್ಯ ಬಿದ್ದಾಗ ಬಡವರ, ದೀನ ದಲಿತರ ಧ್ವನಿಯಾಗಿ ನಿಂತು ಇಡೀ ಸಮಾಜವನ್ನೇ ಎದುರು ಹಾಕಿಕೊಂಡವರು. ನಿರಂತರ ಹೋರಾಟವೇ ಅವರ ಬದುಕಾಗಿತ್ತು. ಅವರು ನಂಬಿಕೆ ಇಟ್ಟ ಸಿದ್ಧಾಂತಗಳು, ಮರುಳಸಿದ್ಧನ, ಬಸವಣ್ಣನ ವಿಚಾರಗಳನ್ನು ಗಟ್ಟಿಯಾಗಿ ಪ್ರತಿಪಾದಿಸುತ್ತಾ, ನಿಷ್ಠೂರ ಮತ್ತು ಜನಪರ ನ್ಯಾಯ ಕೊಡುತ್ತಿದ್ದರು ಎಂದು ಹೇಳಿದರು.

ಗ್ರಾಮೀಣ ಪ್ರದೇಶದಲ್ಲಿ ವಿದ್ಯೆಯಿಂದ ವಂಚಿತರಾದವರಿಗೆ ಶಾಲೆಗಳನ್ನು ಆರಂಭಿಸುವ ಮೂಲಕ ಲಿಂ. ಶ್ರೀಗಳು ದೊಡ್ಡ ಕ್ರಾಂತಿಯನ್ನೇ ಮಾಡಿದ್ದರು. ಮುಖ್ಯವಾಗಿ ಸಿರಿಗೆರೆ ಮಠದ ವ್ಯಾಪ್ತಿಯ ರೈತರ ಮೇಲೆ ಶ್ರೀಮಠದ ಬಹು ದೊಡ್ಡ ಆಶೀರ್ವಾದವೇ ಇತ್ತು. ಲಿಂ. ಹಿರಿಯ ಶ್ರೀಗಳ ಮಾರ್ಗದರ್ಶನದಲ್ಲಿ, ಅವರ ಶೇ.ನೂರರಷ್ಟು ವಿಚಾರಗಳನ್ನು ಪ್ರತಿಪಾದಿಸುತ್ತಾ ಸಾಗುತ್ತಿರುವ ಇಂದಿನ ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಯವರು ನಮ್ಮೆಲ್ಲರಿಗೂ ಹೆಮ್ಮೆ ಎಂದರು.

ಹಿರಿಯ ಗುರುಗಳಷ್ಟೇ ಸ್ಪಷ್ಟತೆ, ದಿಟ್ಟತನ, ಜನಪರ ಕಾಳಜಿ, ಮಾತೃಹೃದಯಿಯಾದ ಇಂದಿನ ಜಗದ್ಗುರುಗಳು ಭಕ್ತರಿಗೆ ನ್ಯಾಯ, ಸಾಂತ್ವನ, ಪರಿಹಾರ ಕೊಡುವ ಕೆಲಸ ಮಾಡುತ್ತಾ, ವಿಶೇಷವಾಗಿ ಚಿತ್ರದುರ್ಗ ದಾವಣಗೆರೆ, ಶಿವಮೊಗ್ಗ ಜಿಲ್ಲೆಗಳ ಕೆರೆಗಳನ್ನು ತುಂಬಿಸುವ ಯೋಜನೆ ಪ್ರಾರಂಭಿಸಿದ್ದುದು ರೈತರಿಗೆ ಬಹುದೊಡ್ಡ ಅನುಕೂಲವಾಗಿದೆ. ಬೆಳೆ ವಿಮೆಯ ತಾಂತ್ರಿಕ ವಿಧಾನಗಳನ್ನು ಸರಳೀಕರಣ ಮಾಡಿ ಸರ್ಕಾರಕ್ಕೂ ಮಾರ್ಗದರ್ಶನ ಮಾಡಿದ್ದಾರೆ ಎಂದರು.

ರಾಜ್ಯದ ಮುಖ್ಯಮಂತ್ರಿಯಾಗಿ ಹಿಂದಿನ ಹಾಗೂ ಇಂದಿನ ಜಗದ್ಗುರುಗಳ ಆಚಾರ, ವಿಚಾರ, ನಡೆದು ಬಂದ ದಾರಿಯನ್ನು ಮೈಗೂಡಿಸಿಕೊಂಡು ಜನ ಕಲ್ಯಾಣ ಕೆಲಸವನ್ನು ಮಾಡುವುದಾಗಿ ಮುಖ್ಯಮಂತ್ರಿಗಳು ಹೇಳಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಾತನಾಡುತ್ತಾ, ಲಿಂ. ಶಿವಕುಮಾರ ಶ್ರೀಗಳು ಬಸವ ಜಯಂತಿಯಂದೇ ಜನಿಸಿ, ಬಸವಣ್ಣನವರ ನಡೆ-ನುಡಿಗಳ ಪಡಿಯಚ್ಚಿನಂತೆಯೇ ಕಾಣುತ್ತಿದ್ದರು. ಸರ್ವೇಜನೋ ಸುಖೀನೋಭವಂತು ಎಂದು ಜಗತ್ತಿಗೆ ಹೇಳಿ ಕೊಟ್ಟ ಪ್ರಮುಖ ಶರಣರಲ್ಲಿ ಲಿಂ. ಶ್ರೀಗಳು ಪ್ರಮುಖ ಸಾಲಿನಲ್ಲಿದ್ದಾರೆ ಎಂದರು.

ಧರ್ಮ ಎಂದರೆ ಬರೀ ಉಪದೇಶ ಮಾಡುವುದಲ್ಲ. ನಡೆದು ತೋರಿಸುವಂತಹದ್ದು. ಸರ್ವರ ಏಳಿಗೆಗಾಗಿ ಸರ್ವರ ಶಾಂತಿಗಾಗಿ ಪ್ರಾರ್ಥಿಸುವುದು ಎಂಬುದು ಅವರ ಧ್ಯೇಯವಾಗಿತ್ತು ಎಂದರು.

ಸುತ್ತೂರು ವೀರಸಿಂಹಾಸನ ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡುತ್ತಾ, ಶ್ರೀಮಠದ ಚರಿತ್ರೆಯಲ್ಲಿ ಲಿಂ. ಶ್ರೀ ಶಿವಕುಮಾರ ಮಹಾಸ್ವಾಮಿಯವರ ಸಾಧನೆ ಅಸಾಮಾನ್ಯವಾಗಿದೆ. ಶ್ರೀಗಳು ಇಟ್ಟ ದಿಟ್ಟ ಹೆಜ್ಜೆಗಳು ಅಚ್ಚರಿ ಮೂಡಿಸುತ್ತವೆ. ಮಠದ ಆರ್ಥಿಕ ಪರಿಸ್ಥಿತಿ, ಸಾಮಾಜಿಕ ಗೊಂದಲಗಳನ್ನು ಪರಿಹರಿಸಿಕೊಂಡು ಮುನ್ನಡೆದ ನಡೆ ಪೀಠಾಧಿಪತಿಗಳಿಗೆ ಮಾರ್ಗದರ್ಶಕವಾಗಿದೆ ಎಂದರು.

ಪರಂಪರೆಯಿಂದ ಬಂದ ಧಾರ್ಮಿಕ ಆಚರಣೆಗಳು, ಆಯಾ ಕಾಲಘಟ್ಟದ ಸಮಾಜಮುಖಿ ಚಿಂತನೆಗಳನ್ನು ಮೇಳೈಸಿಕೊಂಡ ಶ್ರೀಗಳು, ನಿಜ ಅರ್ಥದಲ್ಲಿ ಮಠವನ್ನು ಬೃಹನ್ಮಠವಾಗಿಸಿದ್ದರ ಹಿಂದೆ ಬಹುದೊಡ್ಡ ಸಾತ್ವಿಕ ಛಲ ಕಂಡು ಬರುತ್ತದೆ. ಇಂದಿನ ಜಗದ್ಗುರುಗಳ ಮೂಲಕ ಹಿರಿಯ ಶ್ರೀಗಳ ಕನಸು ಸಾಕಾರಗೊಳ್ಳುತ್ತಿದೆ. ಯೋಜನೆಗಳು ಅನುಷ್ಠಾನಗೊಳ್ಳುತ್ತಿವೆ. ಶ್ರೀಮಠದ ಕಾರ್ಯವ್ಯಾಪ್ತಿ ಜಗದ್ವಿಖ್ಯಾತಗೊಳ್ಳುತ್ತಿದೆ ಎಂದರು.

ತುಮಕೂರು ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮೀಜಿ ಮಾತನಾಡುತ್ತಾ, ತಮ್ಮ ಬದುಕಿನ ತುಂಬಾ ನೋವು, ಸಂಕಟ ಅನುಭವಿಸಿ ನಾಡಿಗೆ (4ನೇ ಪುಟಕ್ಕೆ)

**ಇಂದಿನ ಜಾಗತಿಕ, ತಾಂತ್ರಿಕ ದಿನಮಾನಗಳಲ್ಲಿ ಭಾರತ ದೇಶ ಹಾಗೂ ಭಾರತೀಯರು ಜಗತ್ತಿನಾದ್ಯಂತ ಗೌರವಿಸಲ್ಪಡುತ್ತಿದ್ದಾರೆ ಎಂದರೆ ಅದಕ್ಕೆ ಕಾರಣ ಮಠ ಮಾನ್ಯಗಳು, ಪರಮಪೂಜ್ಯರು, ಸಂತರು ಜನರಿಗೆ ಬೋಧಿಸಿದ ಸಂಸ್ಕೃತಿ ಸಂಸ್ಕಾರದ ಪಾಠಗಳೇ ಕಾರಣ.**

**- ಬಿ.ಎಸ್. ಯಡಿಯೂರಪ್ಪ, ಮಾಜಿ ಸಿಎಂ**

## ದಲ್ಲಾಲಿ ಅಂಗಡಿ ತೆರೆಯಿಸಿ ವ್ಯಾಪಾರಿಗಳಿಗೆ ಬುದ್ದಿ ಕಲಿಸಿದ್ದ ಲಿಂ.ಶ್ರೀಗಳು: ಎಸ್ಸೆಸ್



ಸಿರಿಗೆರೆಯ ಮಠಕ್ಕೆ ಬೃಹನ್ಮಠ ಎಂದು ಹೆಸರಿತ್ತು. ಆದರೆ ಆರ್ಥಿಕವಾಗಿ ಸದೃಢವಾಗಿರಲಿಲ್ಲ. ಹಿರಿಯ ಲಿಂ.ಜಗದ್ಗುರುಗಳು ಅಧಿಕಾರ ವಹಿಸಿಕೊಂಡಾಗ ಸಾಧು ವೀರಶೈವರನ್ನು ಜಾಗೃತಗೊಳಿಸಿದರು. ಹಳ್ಳಿ ಹಳ್ಳಿಗೂ ತೆರಳಿ ರೈತಾಪಿ ವರ್ಗವನ್ನು ನೀವು ನಮ್ಮವರೆಂದು ಹೇಳುತ್ತಾ, ಸಮಾಜ ಸಂಘಟಿಸಿದ ಕೀರ್ತಿ ಶ್ರೀಗಳಿಗೆ ಸಲ್ಲುತ್ತದೆ ಎಂದರು. ನಮ್ಮ ರೈತರು ಅವಿದ್ಯಾವಂತರಾಗಿದ್ದನ್ನು ಮನಗಂಡ ಶ್ರೀಗಳು ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ, ಪ್ರೌಢಶಾಲೆಗಳನ್ನು ಪ್ರಾರಂಭಿಸಿ ಶಿಕ್ಷಣ ನೀಡಲು ಅಡಿಗಲ್ಲು ಹಾಕಿದರು.

ಅಲ್ಲದೆ, ರೈತರು ಬೆಳೆದ (4ನೇ ಪುಟಕ್ಕೆ)

# ಅನುಮತಿ ರಹಿತ ಬಡಾವಣೆಗೆ ಕ್ರಿಮಿನಲ್ ಕೇಸ್



ಬೆಂಗಳೂರು, ಸೆ. 24 - ರಾಜ್ಯದಲ್ಲಿ ಯೋಜನಾ ಪ್ರಾಧಿಕಾರದಿಂದ ಅನುಮತಿ ಪಡೆಯದೇ ಕಾನೂನು ಬಾಹಿರವಾಗಿ ಬಡಾವಣೆಗಳನ್ನು ನಿರ್ಮಿಸಿದರೆ, ಅವುಗಳನ್ನು ರದ್ದುಪಡಿಸಿ, ಅಂಥವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸುವ ಬಗ್ಗೆ ಚಿಂತನೆ ನಡೆಸಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್ ವಿಧಾನಸಭೆಗೆ ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಅಮೃತದೇಸಾಯಿ ಪ್ರಶ್ನೆಗೆ ಉತ್ತರಿಸಿದ ಅವರು, ಈಗಾಗಲೇ ಇಲಾಖೆಯಿಂದ ಈ ಸಂಬಂಧ ಸುತ್ತೋಲೆ ಹೊರಡಿಸಲಾಗಿದೆ, ರಾಜ್ಯದ ಯಾವ ಭಾಗಗಳಲ್ಲಿ ಅನಧಿಕೃತ ಬಡಾವಣೆಗಳನ್ನು ನಿರ್ಮಾಣ ಮಾಡಿದ್ದಾರೆ ಎಂಬ ಬಗ್ಗೆ ಪಟ್ಟಿ ತಯಾರಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಒಂದು ವೇಳೆ ಸ್ಥಳೀಯ ಪ್ರಾಧಿಕಾರ ಇಲ್ಲವೇ ಯೋಜನಾ ಪ್ರಾಧಿಕಾರದ ಅನುಮತಿ ಪಡೆಯದೇ ನಿರ್ಮಿಸಿದ್ದರೆ, ಅವುಗಳನ್ನು ರದ್ದುಪಡಿಸಲಾಗುವುದು. ಇದರಲ್ಲಿ ಅಧಿಕಾರಿಗಳು ಭಾಗಿಯಾಗಿದ್ದರೆ, ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಜರುಗಿಸುವುದಾಗಿ ಎಚ್ಚರಿಸಿದರು.

ಇಲಾಖೆ ಜವಾಬ್ದಾರಿ ವಹಿಸಿಕೊಂಡ ಮೇಲೆ ಅಧಿಕಾರಿಗಳ ಸಭೆ ನಡೆಸಿ ಅನಧಿಕೃತ ಬಡಾವಣೆಗಳಿಗೆ ಅನುಮತಿ ನೀಡದಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಯಾವುದೇ ಒತ್ತಡ, ಮುಲಾಜಿಗೆ ಒಳಗಾಗದಂತೆ ನಿರ್ದೇಶಿಸಲಾಗಿದೆ, ಆದಾಗ್ಯೂ ಅಧಿಕಾರಿಗಳು ಭಾಗಿಯಾಗಿದ್ದರೆ ಶಿಸ್ತು ಕ್ರಮ ಖಚಿತ.

ಅನಧಿಕೃತ ಬಡಾವಣೆಗಳಿಗೆ ಮೂಲಸೌಕರ್ಯಗಳಾದ ವಿದ್ಯುತ್, ನೀರು, ರಸ್ತೆ, ಚರಂಡಿ ಸೇರಿದಂತೆ ಯಾವುದೇ ಕನಿಷ್ಠ ಸೌಲಭ್ಯ ಕೊಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಎ.ಟಿ.ರಾಮಸ್ವಾಮಿ ಮಾತನಾಡಿ, ರಾಜ್ಯದಲ್ಲಿ ಅನಧಿಕೃತವಾಗಿ ಸಾವಿರಾರು ಬಡಾವಣೆ ನಿರ್ಮಿಸಿದ್ದಾರೆ. ಹೇಳುವವರು-ಕೇಳುವವರೂ ಇಲ್ಲವಾಗಿದೆ, ನಿವೇಶನ ನೀಡುವುದಾಗಿ ಹಣ ಪಡೆಯುತ್ತಾರೆ, ಕನಿಷ್ಠ ಮೂಲಸೌಲಭ್ಯವನ್ನೂ ಕಲ್ಪಿಸುವುದಿಲ್ಲ. ಕೊನೆಗೆ ಒಂದು ದಿನ ಹಣದೊಂದಿಗೆ ಪರಾರಿಯಾಗುತ್ತಾರೆ. ಕೃಷಿ ಜಮೀನನಲ್ಲೇ ಬಡಾವಣೆ ಮಾಡಿದ್ದಾರೆ, ಎಷ್ಟು ಜನರ ಮೇಲೆ ಕ್ರಮ ಕೈಗೊಂಡಿದ್ದೀರಿ? ಪ್ರತಿ ಅಧಿವೇಶನದಲ್ಲೂ ಇದೇ ಉತ್ತರ ಕೊಡುತ್ತೀರಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಚಿವರು ಮಾತನಾಡಿ, ನಿರ್ದಿಷ್ಟ ಪ್ರಕರಣಗಳಿದ್ದರೆ, ಗಮನಕ್ಕೆ ತಂದರೆ ಕಾನೂನು ಕ್ರಮ ಜರುಗಿಸಲಾಗುವುದು ಎಂದರು.

## ಇಂದು ಬಿಜೆಪಿ ಕಾರ್ಯಕರ್ತರಿಗೆ ಅಭಿನಂದನಾ ಸಮಾರಂಭ

ರಾಜ್ಯ ಬಿಜೆಪಿ ಕಾರ್ಯಕಾರಿಣಿಗೆ ಪ್ರಬಂಧಕರಾಗಿ ಕೆಲಸ ಮಾಡಿದ ಕಾರ್ಯಕರ್ತನ್ನು ಅಭಿನಂದಿಸುವ ಸಮಾರಂಭವು ಇಂದು ಸಂಜೆ 5.30 ಗಂಟೆಗೆ ತ್ರಿಶೂಲ್ ಕಲಾಭವನದಲ್ಲಿ ನಡೆಯಲಿದೆ.

ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾಧ್ಯಕ್ಷ ಎಸ್.ಎಂ ವೀರೇಶ್ ಹನಗವಾಡಿ ವಹಿಸಲಿದ್ದು, ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸಂಘಟನಾ ಪ್ರಧಾನ ಕಾರ್ಯದರ್ಶಿ ಅರುಣ್ ಜಿ, ರಾಜ್ಯ ಉಪಾಧ್ಯಕ್ಷರು ವಿಭಾಗ ಪ್ರಭಾರಿಗಳಾದ ನಂದೀಶ್, ಜಿಲ್ಲಾ ಉಸ್ತವಾರಿ ಸಚಿವ ಭೈರತಿ ಬಸವರಾಜ್, ಜಿಲ್ಲೆಯ ಲೋಕಸಭಾ ಸದಸ್ಯ ಜಿ. ಎಂ.ಸಿದ್ದೇಶ್ವರ, ಶಾಸಕರುಗಳಾದ ಎಸ್.ಎ. ರವೀಂದ್ರನಾಥ್, ಎಂ.ಪಿ. ರೇಣುಕಾಚಾರ್ಯ, ಮಾಡಾಳ್ ವಿರುಪಾಕ್ಷಪ್ಪ, ಎಸ್. ವಿ. ರಾಮಚಂದ್ರಪ್ಪ, ಪ್ರೊ. ಲಿಂಗಪ್ಪ ಮತ್ತಿತರರು ಭಾಗವಹಿಸಲಿದ್ದಾರೆ.

## ಭರಮಸಾಗರಕ್ಕೆ ಇಂದು ಬಿಜೆಪಿ ರಾಜ್ಯ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್



ಶ್ರೀ ಪಂಡಿತ್ ದೀನದಯಾಳ್ ಉಪಾಧ್ಯಾಯರವರ 105ನೇ ವರ್ಷದ ಜನ್ಮದಿನದ ಪ್ರಯುಕ್ತ ಇಂದು ಮಧ್ಯಾಹ್ನ 3 ಗಂಟೆಗೆ ಪಂಡಿತ್ ದೀನದಯಾಳ್‌ರವರ ಬಗ್ಗೆ, ಪಕ್ಷದ ಸಂಘಟನೆಯ ಬಗ್ಗೆ ಶ್ರೀ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಸಭೆಯನ್ನುದ್ದೇಶಿಸಿ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಮಾತನಾಡುವರು.

ಸಭೆಯಲ್ಲಿ 105 ದೀಪ ಹಚ್ಚುವ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಆರೋಗ್ಯ ಮೇಳ ಮತ್ತು ಲಸಿಕಾ ಅಭಿಯಾನವನ್ನು ಹಳೇ ಮಾಧ್ಯಮಿಕ ಶಾಲಾ ಆವರಣದಲ್ಲಿ ಏರ್ಪಡಿಸಲಾಗಿದೆ. ಬಿಜೆಪಿ ಯುವ ಮುಖಂಡ ರಘುಚಂದ್ರನ್ ಎಂ.ಸಿ. ತಿಳಿಸಿದ್ದಾರೆ.

# ದೆಹಲಿ ನ್ಯಾಯಾಲಯದಲ್ಲಿ ಭೂಗತನ ಹತ್ಯೆ

**ಪೊಲೀಸ್ ಕಾರ್ಯಾಚರಣೆಯಲ್ಲಿ ಇಬ್ಬರು ಹತ**

ನವದೆಹಲಿ, ಸೆ. 24 – ಜೈಲಿನಲ್ಲಿದ್ದ ಭೂಗತ ಜಿತೇಂದ್ರ ಗೋಗಿಯನ್ನು ದೆಹಲಿಯ ರೋಹಿಣಿ ನ್ಯಾಯಾಲಯದಲ್ಲಿ ಇಬ್ಬರು ಬಂದೂಕುಧಾರಿಗಳು ಹತ್ಯೆಗೈದಿದ್ದಾರೆ. ವಕೀಲರ ದಿರಿಸಿನಲ್ಲಿ ದಾಳಿ ನಡೆಸಿದ ಈ ಇಬ್ಬರನ್ನು ಪೊಲೀಸ್ ಕಾರ್ಯಾಚರಣೆಯಲ್ಲಿ ಹೊಡೆದುರುಳಿಸಿದ್ದಾರೆ.

ಎದುರಾಳಿ ಗುಂಪುಗಳ ವೈಷಮ್ಯದಿಂದಾಗಿ ಈ ಘಟನೆ ನಡೆದಿದೆ ಎಂದು ಹೇಳಲಾಗುತ್ತಿದೆ. ಗುಂಡಿನ ದಾಳಿಯ ಸದ್ದು ಕೇಳುತ್ತಿದ್ದಂತೆ ನ್ಯಾಯಾಲಯದಲ್ಲಿ ಆತಂಕದ ವಾತಾವರಣ ಉಂಟಾಗಿತ್ತು.

ವಿಚಾರಣಾಧೀನ ಗೋಗಿ ಹತ್ಯೆ ಮಾಡಿದ ಇಬ್ಬರನ್ನು ಹೊಡೆದುರುಳಿಸಲಾಗಿದೆ. ಗೋಗಿ ದೆಹಲಿಯ ಕುಖ್ಯಾತ ಭೂಗತರಲ್ಲಿ ಒಬ್ಬನಾಗಿದ್ದಾನೆ ಎಂದು ದೆಹಲಿ ಪೊಲೀಸರು ಹೇಳಿದ್ದಾರೆ.

ಪೊಲೀಸರು ತ್ವರಿತವಾಗಿ ಪ್ರತಿ ಕಾರ್ಯಾಚರಣೆ ನಡೆಸಿದ್ದು, ಇಬ್ಬರನ್ನು ಹೊಡೆದುರುಳಿಸಿದ್ದಾರೆ. ವಕೀಲರ ದಿರಿಸಿನಲ್ಲಿ ಗೋಗಿ ಮೇಲೆ ದಾಳಿ ನಡೆಸಲಾಗಿತ್ತು ಎಂದು ದೆಹಲಿ ಪೊಲೀಸ್ ವಕ್ತಾರ ಚಿನ್ಮಯ್ ಬಿಸ್ವಾಲ್ ಹೇಳಿದ್ದಾರೆ.

ರೋಹಿಣಿ ನ್ಯಾಯಾಲಯದಲ್ಲಿ ನಾಲ್ಕೈದು ಬಾರಿ ಇಂಥದೇ ಘಟನೆಗಳು ನಡೆದಿವೆ. ಆದರೆ, ಇದುವರೆಗೂ ಪರಿಸ್ಥಿತಿ ಸುಧಾರಿಸಿಲ್ಲ ಎಂದು ವಕೀಲ ರಾಜೀವ್ ಅಗ್ನಿಹೋತ್ರಿ ಹೇಳಿದ್ದಾರೆ.

ಜಿತೇಂದ್ರ ಮಾನ್ ಅಲಿಯಾಸ್ ಗೋಗಿ ತಲೆಗೆ 6.5 ಲಕ್ಷ ರೂ. ಬಹುಮಾನವಿತ್ತು. ಮೂವರು ಸಹಚರರ ಜೊತೆ ಆತನನ್ನು ಗುರ್ಗಾಂವ್‌ನಲ್ಲಿ ಕಳೆದ ವರ್ಷ ಮಾರ್ಚ್‌ನಲ್ಲಿ ಬಂಧಿಸಲಾಗಿತ್ತು.

# ನಾಡಿದ್ದು ರಾಣೇಬೆನ್ನೂರು ಬಂದ್‌ಗೆ ಕರೆ

ರಾಣೇಬೆನ್ನೂರು, ಸೆ.24- ಇದೇ ದಿನಾಂಕ 27 ರ ಸೋಮವಾರ ವಿವಿಧ ಬೇಡಿಕೆಗಳಿಗೆ ಒತ್ತಾಯಿಸಿ, ರೈತ ಹಾಗೂ ಇನ್ನಿತರೆ ಸಂಘಟನೆಗಳು ಒಂದಾಗಿ ಭಾರತ ಬಂದ್‌ಗೆ ಕರೆ ನೀಡಲಾಗಿದೆ ಎಂದು ಮುಖಂಡ ರವೀಂದ್ರಗೌಡ ಪಾಟೀಲ ಪ್ರವಾಸಿ ಮಂದಿರದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕೃಷಿ ಕ್ಷೇತ್ರಕ್ಕೆ ಮಾರಕವಾದ ಮೂರು ಕೃಷಿ ಕಾಯ್ದೆಗಳನ್ನು ರದ್ದುಪಡಿಸಬೇಕು. ರೈತರ ಮೇಲೆ ಹಣಕಾಸು ಸಂಸ್ಥೆಗಳು ನಡೆಸುವ ದಬ್ಬಾಳಿಕೆ ತಡೆಯಬೇಕು, ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತ್ರಿ ಕಾನೂನು ಜಾರಿಯಾಗಬೇಕು, ಖರೀದಿ ಕೇಂದ್ರ ತೆರೆಯಬೇಕು. ಅಗತ್ಯ ವಸ್ತುಗಳ ಬೆಲೆ, ಅಡುಗೆ ಅನಿಲ, ಡೀಸೆಲ್, ಪೆಟ್ರೋಲ್ ಬೆಲೆ ಇಳಿಸಬೇಕು ಇತ್ಯಾದಿ ಬೇಡಿಕೆಗಳೊಂದಿಗೆ ಈ ಬಂದ್ ನಡೆಯಲಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಕಿಸಾನ್ ಸೆಲ್, ರೈತ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು, ಕನ್ನಡ ಪರ ಸಂಘಟನೆಗಳ ಪ್ರತಿನಿಧಿಗಳಾದ ವೀರನಗೌಡ ಪೊಲೀಸ್‌ಗೌಡ, ಈರಣ್ಣ ಹಲಗೇರಿ, ಬಸವರಾಜ ಕೊಂಗಿ, ಕೊಟ್ರೇಶಪ್ಪ ಎಮ್ಮಿ, ಮಂಜಪ್ಪ ದುಗ್ಗತ್ತಿ, ರೇಣುಕಾ ಲಮಾಣಿ, ಎಸ್.ಡಿ. ಹಿರೇಮಠ, ಉಮಾ ಹಿರೇಮಠ, ಹನುಮಂತ ಕಬ್ಬಾರ, ನಿತ್ಯಾನಂದ ಕುಂದಾಪುರ ಇನ್ನಿತರರು ಪಾಲ್ಗೊಂಡಿದ್ದರು.

### ಗುಲಾಬಿ ನೀಡಿ ಮನವಿ

ವರ್ತಕರು, ಆಟೋ ಸೇರಿದಂತೆ ವಿವಿಧ ವಾಹನ ಚಾಲಕರು, ಮಾಲೀಕರು, ಶಾಲಾ - ಕಾಲೇಜು ವಿದ್ಯಾರ್ಥಿಗಳಿಗೆ ಒತ್ತಡ ಹಾಕುವುದಿಲ್ಲ. ರೈತರನ್ನು ಅವಲಂಬಿಸಿರುವ ಮತ್ತು ನಮ್ಮ ಬಗ್ಗೆ ಅನುಕಂಪ ಇರುವ ಪ್ರತಿಯೊಬ್ಬರೂ ನಮ್ಮ ಬಂದ್ ಕಾರ್ಯಕ್ರಮಕ್ಕೆ ಸಹಕಾರ ಕೊಡುತ್ತಾರೆ ಎನ್ನುವ ನಂಬಿಕೆ ನಮಗಿದೆ. ಬಂದ್ ಅಂಗವಾಗಿ ನಾಡಿದ್ದು ದಿನಾಂಕ 26 ರ ಭಾನುವಾರ ಬೈಕ್ ರ್‍ಯಾಲಿ ಮೂಲಕ ನಗರದಾದ್ಯಂತ ಸಂಚರಿಸಿ ಪ್ರತಿ ವರ್ತಕರಿಗೆ ಗುಲಾಬಿ ಹೂ ನೀಡಿ ಮನವಿ ಮಾಡುತ್ತೇವೆ ಎಂದು ಈರಣ್ಣ ಹಲಗೇರಿ ಹೇಳಿದರು.

## ದಾವಣಗೆರೆ ಕ್ಲಬ್‌ನಲ್ಲಿ ಇಂದು

ದಾವಣಗೆರೆ ಕ್ಲಬ್ಬಿನ ಟೆನ್ನಿಸ್ ಕೋರ್ಟ್‌ನಲ್ಲಿ ಅಳವಡಿಸಿರುವ ಹೊನಲು ಬೆಳಕಿನ ದೀಪಗಳನ್ನು ಪೂರ್ವ ವಲಯ ಪೊಲೀಸ್ ಮಹಾನಿರೀಕ್ಷಕ ಎಸ್. ರವಿ ಅವರು ಇಂದು ಸಂಜೆ 6.30ಕ್ಕೆ ಉದ್ಘಾಟಿಸಲಿದ್ದಾರೆ. ಪಂದ್ಯಾವಳಿಗಳನ್ನು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಉದ್ಘಾಟಿಸಲಿದ್ದು, ಕ್ಲಬ್ ಅಧ್ಯಕ್ಷ ಮತ್ತಿಹಳ್ಳಿ ವೀರಣ್ಣ, ಉಪಾಧ್ಯಕ್ಷ ಎ.ಬಿ.ಚಂದ್ರಶೇಖರ್, ಕಾರ್ಯದರ್ಶಿ ರವಿಶಂಕರ್ ಪಲ್ಲಾಗಟ್ಟಿ, ಸಹ ಕಾರ್ಯದರ್ಶಿ ಉಳವಯ್ಯ ಮತ್ತಿತರರು ಉಪಸ್ಥಿತರಿರುವರು.


ನೋಂದಣಿ ಸಂಖ್ಯೆ : ಎ.ಆರ್.31/ಸೌಹಾರ್ದ/ಆರ್.ಜಿ.ಎನ್./601-2003-04 ಸ್ಥಾಪನೆ : 23-11-2000

# ಕರಾವಳಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ.,

# 2688/2, 'ಕರಾವಳಿ ಸೌಧ', ಡಾ. ಶ್ಯಾಮಸುಂದರ ಶೆಟ್ಟಿ ಬಂಟರ ಭವನದ ಹತ್ತಿರ, ಕುಂದುವಾಡ ರಸ್ತೆ, ದಾವಣಗೆರೆ-577 006. ಫೋ. : 08192-296516


ಶ್ರೀ ಸಿ.ಎ. ಉಮೇಶ್ ಶೆಟ್ಟಿ
ಅಧ್ಯಕ್ಷರು


ಶ್ರೀ ದಿನೇಶ್ ಕೆ. ಶೆಟ್ಟಿ
ನಿರ್ದೇಶಕರು


ಶ್ರೀ ರವೀಂದ್ರ ಎಸ್. ಶೆಟ್ಟಿ
ನಿರ್ದೇಶಕರು


ಶ್ರೀ ಡಾ. ಸುಬೋಧ್ ಶೆಟ್ಟಿ
ನಿರ್ದೇಶಕರು


ಶ್ರೀ ಕೆ. ಮೋಹನದಾಸ್ ಶೆಟ್ಟಿ
ನಿರ್ದೇಶಕರು


ಶ್ರೀ ಸೀತಾರಾಮ್ ಶೆಟ್ಟಿ
ನಿರ್ದೇಶಕರು


ಶ್ರೀಮತಿ ಆಶಾ ಕುಶಾಲಶೆಟ್ಟಿ
ನಿರ್ದೇಶಕರು


ಶ್ರೀಮತಿ ವಿಮಲಾ ಎಸ್. ಶೆಟ್ಟಿ
ನಿರ್ದೇಶಕರು


ಶ್ರೀ ವೆಂಕಟೇಶ್ ಹೆಚ್.ಎಲ್.
ನಿರ್ದೇಶಕರು


ಶ್ರೀ ಖಲೀಲ್ ಅಹಮದ್
ಮುಖ್ಯ ಕಾರ್ಯನಿರ್ವಾಹಕಾಧಿಕಾರಿ


ಶ್ರೀ ಮಹೇಶ್ ಆರ್. ಶೆಟ್ಟಿ
ಉಪಾಧ್ಯಕ್ಷರು

## 21ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ನೋಟೀಸು

ಕರಾವಳಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ದಾವಣಗೆರೆ ಇದರ 21ನೇ ವಾರ್ಷಿಕ ಮಹಾಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಸಿ.ಎ. ಉಮೇಶ್ ಶೆಟ್ಟಿ ಇವರ ಘನ ಅಧ್ಯಕ್ಷತೆಯಲ್ಲಿ **ದಿನಾಂಕ : 25.09.2021ರ ಶನಿವಾರ ಬೆಳಿಗ್ಗೆ 11.30 ಗಂಟೆಗೆ ಸರಿಯಾಗಿ ಸ್ಥಳ : ಡಾ. ಬಿ. ಶ್ಯಾಮಸುಂದರ್ ಶೆಟ್ಟಿ ಭಂಟರ ಭವನ, ಕುಂದವಾಡ ರಸ್ತೆ, ದಾವಣಗೆರೆ** ಇಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕ್ರೀಯವಾಗಿ ಪಾಲ್ಗೊಳ್ಳಲು ವಿನಂತಿ.

### ಸಭೆಯ ಕಾರ್ಯಕಲಾಪಗಳು :

1) ಪ್ರಾರ್ಥನೆ 2) ದಿವಂಗತ ಸದಸ್ಯರಿಗೆ ಶ್ರದ್ಧಾಂಜಲಿ ಸಮರ್ಪಣೆ 3) ಸ್ವಾಗತ 4) 2019-20ನೇ ಸಾಲಿನ ಮಹಾಸಭೆಯ ನಡುವಳಿಕೆಗಳನ್ನು ಓದಿ ದಾಖಲು ಮಾಡುವುದು. 5) ಉದಯ್ ಶೆಟ್ಟಿ & ಕೋ. ಸನ್ನದು ಲೆಕ್ಕ ಪರಿಶೋಧಕರು, ಹುಬ್ಬಳ್ಳಿ, ಇವರಿಂದ ಪರಿಶೋಧಿಸಲ್ಪಟ್ಟ 2020-21ನೇ ಸಾಲಿನ ಲಾಭ-ನಷ್ಟ ತಃಖ್ತೆಗಳ ಮತ್ತು ಅಢಾವೆ ಪತ್ರಗಳನ್ನು ಅಂಗೀಕರಿಸುವುದು ಹಾಗೂ 2020-21ನೇ ಸಾಲಿನ ಲಾಭಾಂಶ ವಿಂಗಡಣೆಗೆ ಮಂಜೂರಾತಿ ನೀಡುವುದು. 6) 2020-21ನೇ ಸಾಲಿನಲ್ಲಿ ಮಂಜೂರಾದ ಮುಂಗಡ ಪತ್ರಕ್ಕಿಂತ ಹೆಚ್ಚುವರಿಯಾದ ಖರ್ಚುಗಳನ್ನು ಪರಿಶೀಲಿಸಿ ಮಂಜೂರು ಮಾಡುವುದು ಹಾಗೂ 2021-22ನೇ ಸಾಲಿನ ಮತ್ತು ಮುಂದೆ ಮಹಾಸಭೆಯು ಆಗುವವರೆಗೆ ಸಹಕಾರಿಯ ಬಜೆಟ್‌ನ್ನು ಮಂಜೂರು ಮಾಡುವುದು. 7) 2021-22ನೇ ಸಾಲಿಗೆ ಸಹಕಾರಿಯ ಶಾಸನಬದ್ಧ ಲೆಕ್ಕ ಪರಿಶೋಧನೆ ಮಾಡಲು ಸನ್ನದು ಲೆಕ್ಕ ಪರಿಶೋಧಕರನ್ನು ನೇಮಕ ಮಾಡುವ ಬಗ್ಗೆ. 8) ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು. 9) ಅಧ್ಯಕ್ಷರ ಭಾಷಣ 10) ವಂದನಾರ್ಪಣೆ.

ಆಡಳಿತ ಮಂಡಳಿ ಪರವಾಗಿ

**ಸಹಿ/– ಶ್ರೀ ಖಲೀಲ್ ಅಹಮದ್,** ಮುಖ್ಯಕಾರ್ಯನಿರ್ವಹಣಾಧಿಕಾರಿ

## ಎಸ್.ಪಿ.ಬಿ...



ಮೌನವಾಗಿದೆ ಗಾನ
ಸುಧೆಯು
ಎಲ್ಲರ ಸ್ವರದಲ್ಲೀಗ ವ್ಯಥೆಯು
ಹಾಡು ಮುಗಿಸಿದ ಸಂಗೀತ
ಲೋಕದ ವಿರಾಟ
ಸಾವಿರಾರು ಹಾಡುಗಳ ಸಾಮ್ರಾಟ

ನಗುವ ನಯನ ದ ಮಧುರ ಗಾನವು
ಕಳೆದುಕೊಂಡಿತು ಜಗವು
ಯಾರಿಗೂ ಸಾಟಿಯಾಗದ ಸ್ವರವು
ತಣಿಸುತ್ತಿತ್ತು ಎಲ್ಲರ ನೋವು

ಹುಟ್ಟಿ ಬಾ ಓ ಗಾನ ಕೋಗಿಲೆ
ನವ ವಸಂತಕೆ ನಿಮ್ಮದೇ ಸ್ವರಮಾಲೆ
ತೂಗುತ್ತಿದೆ ಸಪ್ತ ಸ್ವರಗಳ ಉಯ್ಯಾಲೆ
ಹರಡಿಸು ಎಲ್ಲೆಡೆ ಸಂಗೀತದ ಜ್ವಾಲೆ.

- ಬಸವರಾಜ್ ಕರುವಿನ
ಬಸವನಾಳು

## ಚಿತ್ರಮಂದಿರ 100% ಭರ್ತಿ

**(1ನೇ ಪುಟದಿಂದ)** 3 ರಿಂದ ಪಬ್ ಗಳನ್ನು ತೆರೆಯಲಾಗುವುದು ಎಂದು ತಿಳಿಸಿದರು.ಚಿತ್ರ ಮಂದಿರಗಳಲ್ಲಿ ಕನಿಷ್ಠ ಒಂದು ಡೋಸ್ ಲಸಿಕೆ ಹಾಕಿಸಿಕೊಂಡವರಿಗೆ ಮಾತ್ರ ಪ್ರವೇಶ ಇರಲಿದೆ. ಗರ್ಭಿಣಿ ಮಹಿಳೆಯರು ಮತ್ತು ಮಕ್ಕಳಿಗೆ ಅವಕಾಶ ನೀಡದಿರಲು ತೀರ್ಮಾನಿಸಲಾಗಿದೆ ಎಂದವರು ಹೇಳಿದ್ದಾರೆ.

ರಾಜ್ಯದ 25 ಜಿಲ್ಲೆಗಳಲ್ಲಿ ಪ್ರಸಕ್ತ ಪಾಸಿಟಿವ್ ದರ ಶೇ.1ಕ್ಕಿಂತ ಕಡಿಮೆ ಇದೆ. ಹೀಗಾಗಿ ಇಲ್ಲಿ ಶೇ.100ರಷ್ಟು ಚಿತ್ರಮಂದಿರ ಭರ್ತಿಗೆ ಅವಕಾಶ ನೀಡಲಾಗುವುದು ಎಂದು ಬೊಮ್ಮಾಯಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದಾರೆ.

ರಾತ್ರಿ ಕರ್ಫ್ಯೂವನ್ನು ರಾತ್ರಿ 10 ರಿಂದ ಬೆಳಿಗ್ಗೆ 5 ರ ವರೆಗೆ ನಿಗದಿ ಪಡಿಸಲಾಗುವುದು. ಆರರಿಂದ ಹನ್ನೆರಡನೇ ತರಗತಿ ವರೆಗೆ ಶೇ. 100 ರಷ್ಟು ಹಾಜರಾತಿಗೆ ಅವಕಾಶ ಕಲ್ಪಿಸಲಾಗುವುದು. ವಾರದಲ್ಲಿ ಐದು ದಿನ ಶಾಲಾ ಕಾಲೇಜುಗಳನ್ನು ನಡೆಸಲು ನಿರ್ಧರಿಸಲಾಗಿದೆ ಎಂದು ಬೊಮ್ಮಾಯಿ ಮಾಹಿತಿ ನೀಡಿದರು.

ದಸರಾ ಬಗ್ಗೆ ಪ್ರತ್ಯೇಕ ಮಾರ್ಗಸೂಚಿ ಹೊರಡಿಸಲಾಗುವುದು. ಗಡಿ ಭಾಗದಲ್ಲಿ ಹೆಚ್ಚು ನಿಗಾ ವಹಿಸಲಾಗುವುದು ಎಂದು ತಿಳಿಸಿದರು.

ಯಾದಗಿರಿ, ರಾಯಚೂರು, ಕಲಬುರಗಿ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಲಸಿಕೆ ಪ್ರಮಾಣ ಕಡಿಮೆ ಇದೆ. ಇಲ್ಲಿ ಲಸಿಕಾ ಅಭಿಯಾನ ತೀವ್ರಗೊಳಿಸಲು, ಜನರಲ್ಲಿ ಅರಿವು ಮೂಡಿಸಲು ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಕಂದಾಯ ಸಚಿವ ಆರ್. ಅಶೋಕ್, ಆರೋಗ್ಯ ಸಚಿವ ಡಾ. ಕೆ. ಸುಧಾಕರ್, ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷ ಡಾ. ಸುದರ್ಶನ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಮತ್ತು ಇತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ತನ್ನ ಮೇಲ್‌ನಿಂದ ಮೋದಿ ಚಿತ್ರ, ಘೋಷಣೆ ತೆಗೆಯಲು ಸುಪ್ರೀಂ ಸೂಚನೆ

ನವದೆಹಲಿ, ಸೆ. 24 – ಸುಪ್ರೀಂ ಕೋರ್ಟ್‌ನ ಅಧಿಕೃತ ಇ-ಮೇಲ್‌ಗಳ ಅಡಿ ಟಿಪ್ಪಣಿಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಚಿತ್ರ ಹಾಗೂ 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಘೋಷಣೆಯನ್ನು ತೆಗೆದು ಹಾಕಿ ಅಲ್ಲಿ ಸುಪ್ರೀಂ ಕೋರ್ಟ್‌ನ ಚಿತ್ರ ಪ್ರಕಟಿಸುವಂತೆ ಸರ್ವೋನ್ನತ ನ್ಯಾಯಾಲಯ ಎನ್.ಐ.ಸಿ.ಗೆ ತಿಳಿಸಿದೆ.

ನ್ಯಾಷನಲ್ ಇನ್‌ಫಾರ್ಮೆಟಿಕ್ಸ್ ಸೆಂಟರ್ (ಎನ್.ಐ.ಸಿ.) ಸುಪ್ರೀಂ ಕೋರ್ಟ್‌ಗೆ ಇ-ಮೇಲ್ ಸೇವೆ ಒದಗಿಸುತ್ತದೆ. ಆಕಸ್ಮಿಕವಾಗಿ ಪ್ರಧಾನಿ ಚಿತ್ರ ಹಾಗೂ ಘೋಷಣೆ ಇ-ಮೇಲ್‌ನಲ್ಲಿ ಸೇರ್ಪಡೆಯಾಗಿದೆ ಎಂದು ಸುಪ್ರೀಂ ಕೋರ್ಟ್ ಮೂಲಗಳು ತಿಳಿಸಿವೆ.

ಈ ಲೋಪದಿಂದ ವಿವಾದ ಉಂಟಾಗಿತ್ತು. ಈ ವಿಷಯವನ್ನು ನಿನ್ನೆ ಸುಪ್ರೀಂ ಕೋರ್ಟ್ ರಿಜಿಸ್ಟ್ರಿ ಗಮನಕ್ಕೆ ತರಲಾಗಿತ್ತು. ನಂತರ ಸುಪ್ರೀಂ ಕೋರ್ಟ್ ಕಾರ್ಯನಿರ್ವಹಣೆಗೆ ಯಾವುದೇ ರೀತಿಯ ಸಂಬಂಧ ಇರದ ಘೋಷಣೆ ಹಾಗೂ ಚಿತ್ರವನ್ನು ತೆಗೆದು ಹಾಕಲು ನಿರ್ಧರಿಸಲಾಗಿದೆ.

# ಕೊಕ್ಕನೂರು: ಕೊರೊನಾ ವಾರಿಯರ್‌ಗಳಿಗೆ ಸನ್ಮಾನ



ಮಲೇಬೆನ್ನೂರು, ಸೆ.24- ಕೊಕ್ಕನೂರು ಗ್ರಾಮದಲ್ಲಿ ಶ್ರೀ ರಾಜಾ ವೀರ ಮದಕರಿ ನಾಯಕ ಸಂಘದಿಂದ ಪ್ರತಿಷ್ಠಾಪಿಸಿದ್ದ ಗಣೇಶೋತ್ಸವ ಕಾರ್ಯಕ್ರಮದಲ್ಲಿ ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್ ಸೇರಿದಂತೆ ಗ್ರಾಮದ ಕೊರೊನಾ ವಾರಿಯರ್‌ಗಳನ್ನು ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಖಾದರ್ ಅವರು, ಕೊರೊನಾ ಬಗ್ಗೆ ನಿರ್ಲಕ್ಷ್ಯ ಮಾಡಬೇಡಿ. ಕೊರೊನಾ ಸಂಪೂರ್ಣವಾಗಿ ಹೋಗುವುದಿಲ್ಲ. ಅದರ ಜೊತೆಗೆ ನಾವು ಜೀವನ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ಪ್ರತಿಯೊಬ್ಬರೂ ಲಸಿಕೆ ಹಾಕಿಸಿಕೊಳ್ಳಬೇಕು. ಮಾಸ್ಕ್, ಸ್ಯಾನಿಟೈಸ್ ಬಳಕೆ ಹಾಗೂ ಸಾಮಾಜಿಕ ಅಂತರಕ್ಕೆ ಹೆಚ್ಚು ಒತ್ತು ನೀಡಬೇಕೆಂದರು.

ಗ್ರಾ.ಪಂ. ಪಿಡಿಒ ಶಾಂತಪ್ಪ ಮಾತನಾಡಿ, ಜಗತ್ತಿನಲ್ಲಿರುವ ಸೂಪರ್ ಪವರ್ ದೇಶಗಳಲ್ಲೇ ಕೋವಿಡ್ ಲಸಿಕೆ ಸಾಕಷ್ಟು ಪ್ರಮಾಣದಲ್ಲಿ ಸಿಗುತ್ತಿಲ್ಲ. ಆದರೆ ನಮ್ಮ ದೇಶದಲ್ಲಿ ಬಹುತೇಕ ಜನರಿಗೆ ಲಸಿಕೆ ನೀಡಿದ್ದು, ಸಾಕಷ್ಟು ಲಸಿಕೆ ಲಭ್ಯವಿದ್ದು, ಎಲ್ಲರೂ ತಪ್ಪದೇ ಲಸಿಕೆ ಹಾಕಿಸಿಕೊಂಡು ಜಾಗೃತರಾಗಿರಬೇಕೆಂದರು.

ಗ್ರಾ.ಪಂ. ಕಾರ್ಯದರ್ಶಿ ಹೊನ್ನಪ್ಪ, ಆಶಾ ಕಾರ್ಯಕರ್ತೆ ರಾಧಮ್ಮ, ಮೆಡಿಕಲ್ ಶಾಪ್ ಮಾಲೀಕ ಶಿವಣ್ಣ ಮಾತನಾಡಿ, ಜನರು ಜಾಗೃತರಾಗದ ಹೊರತು ಯಾವ ಕಾಯಿಲೆಗಳನ್ನು ನಿರ್ಮೂಲನೆ ಮಾಡಲು ಸಾಧ್ಯವಿಲ್ಲ. ಜನರು ಸ್ವಚ್ಛತೆಗೆ ಆದ್ಯತೆ ನೀಡಬೇಕೆಂದು ಕೋರಿದರು.

ಸನ್ಮಾನಿತರಾದ ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್ ಮಾತನಾಡಿ, ಕೊರೊನಾ 3ನೇ ಅಲೆ ಬಗ್ಗೆ ನಿರ್ಲಕ್ಷ್ಯ ಬೇಡ, ಕೊರೊನಾ ವಾರಿಯರ್ಸ್ ದೇವರಿಗೆ ಸಮಾನರಾಗಿದ್ದು, ಅವರನ್ನು ಪ್ರತಿಯೊಬ್ಬರೂ ಗೌರವಿಸಬೇಕು. ಗ್ರಾಮದಲ್ಲಿರುವ ಯುವಕರು ವಾರಿಯರ್‌ಗಳಾಗಿ ಕೆಲಸ ಮಾಡುವ ಮೂಲಕ ಗ್ರಾಮಗಳನ್ನು ರೋಗಮುಕ್ತ ಮಾಡಲು ಶ್ರಮಿಸಬೇಕೆಂದು ಕಿವಿ ಮಾತು ಹೇಳಿದರು.

ಪತ್ರಕರ್ತ ಜಿಗಳಿ ಪ್ರಕಾಶ್ ಮಾತನಾಡಿ, ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸಂಘದ ಅಧ್ಯಕ್ಷ ಎಂ. ಹನುಮಂತಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಮುಖಂಡರಾದ ಡಿ. ಸೋಮಶೇಖರ್, ದಾಸರ ನಾಗರಾಜ್, ಹೆಚ್. ನಾಗರಾಜ್, ಗ್ರಾ.ಪಂ. ಸದಸ್ಯ ಬಿ.ಹೆಚ್. ಶಿವರಾಜ್, ಶಿಕ್ಷಕ ಹೆಚ್. ಶಾಂತರಾಜ್, ಖಾಸಗಿ ವೈದ್ಯ ಡಾ. ವೆಂಕನಗೌಡ, ಡಾ. ಪ್ರಶಾಂತ್, ಮೆಡಿಕಲ್ ಶಾಪ್‌ನ ಚಂದ್ರಶೇಖರ್, ಶರತ್, ನಂದಿಗಾವಿ ಶ್ರೀನಿವಾಸ್ ಅಭಿಮಾನಿ ಬಳಗದ ವಿಶ್ವ, ಪ್ರಭಾಕರ್, ವಿಜಿ. ಮಂಜು, ಹರಳಹಳ್ಳಿ ಮಂಜು, ಭಾನುವಳ್ಳಿ ಶಿವು, ಪ್ರದೀಪ್ ಇನ್ನಿತರರು ಹಾಜರಿದ್ದರು.

## ಯುಪಿಎಸ್‌ಸಿಯಲ್ಲಿ ಶುಭಂ ಪ್ರಥಮ



ನವದೆಹಲಿ, ಸೆ. 24 – ಬಿಹಾರದ ಶುಭಮ್ ಕುಮಾರ್ ಅವರು ಯು.ಪಿ.ಎಸ್.ಸಿ. ಪರೀಕ್ಷೆಯಲ್ಲಿ ಮೊದಲ ಸ್ಥಾನ ಪಡೆದಿದ್ದಾರೆ. ಶುಕ್ರವಾರ ಪ್ರಕಟಿಸಲಾದ ಫಲಿತಾಂಶದಲ್ಲಿ 761 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ.

545 ಪುರುಷರು ಹಾಗೂ 216 ಮಹಿಳೆಯರು ಯು.ಪಿ.ಎಸ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಇದು ಐಎಎಸ್ ಪರೀಕ್ಷೆ ಎಂದೇ ಹೆಸರಾಗಿದೆ.

24 ವರ್ಷದ ಕುಮಾರ್ ತಮ್ಮ ಮೂರನೇ ಪ್ರಯತ್ನದಲ್ಲಿ ಮೊದಲ ಸ್ಥಾನ ಪಡೆದಿದ್ದಾರೆ. 2019ರಲ್ಲಿ ಯು.ಪಿ.ಎಸ್.ಸಿ. ಪರೀಕ್ಷೆಗೆ ಅರ್ಹತೆ ಪಡೆದ ನಂತರ ಅವರು ಇಂಡಿಯನ್ ಡಿಫೆನ್ಸ್ ಅಕೌಂಟ್ಸ್ ಸರ್ವೀಸ್ (ಐ.ಡಿ.ಎ.ಎಸ್.)ಗೆ ಆಯ್ಕೆಯಾಗಿದ್ದರು. ಪ್ರಸಕ್ತ ಅವರು ಪುಣೆಯ ರಕ್ಷಣಾ ಹಣಕಾಸು ನಿರ್ವಹಣೆ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಮಧ್ಯ ಪ್ರದೇಶದ ಜಾಗೃತಿ ಅವಸ್ಥಿ ಪರೀಕ್ಷೆಯಲ್ಲಿ ಎರಡನೇ ಸ್ಥಾನ ಪಡೆದಿದ್ದಾರೆ. ಅವರು ಎರಡನೇ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಅಂಕಿತಾ ಜೈನ್ ಮೂರನೇ ಸ್ಥಾನದಲ್ಲಿದ್ದಾರೆ.

ಉತ್ತೀರ್ಣರಾದವರಲ್ಲಿ 263 ಅಭ್ಯರ್ಥಿಗಳು ಸಾಮಾನ್ಯ, 86 ಆರ್ಥಿಕವಾಗಿ ಹಿಂದುಳಿದ, 220 ಒ.ಬಿ.ಸಿ, 122 ಪರಿಶಿಷ್ಟ ಜಾತಿ ಹಾಗೂ 61 ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದಾರೆ.

## ಅ.1ರಂದು ನಗರಗಳ ಸ್ವಚ್ಛ ಭಾರತ ಮಿಷನ್ 2.0 ಉದ್ಘಾಟನೆ

ನವದೆಹಲಿ, ಸೆ. 24 – ಅಕ್ಟೋಬರ್ 1ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸ್ವಚ್ಛ ಭಾರತ ಮಿಷನ್ ಅರ್ಬನ್ 2.0 ಉದ್ಘಾಟಿಸಲಿದ್ದಾರೆ ಎಂದು ಕೇಂದ್ರ ವಸತಿ ಹಾಗೂ ನಗರಾಭಿವೃದ್ಧಿ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸ್ವಚ್ಛ ಭಾರತದ ಎರಡನೇ ಯೋಜನೆಯಲ್ಲಿ ತ್ಯಾಜ್ಯ ಹಾಗೂ ಕೊಳಚೆ ನೀರಿನ ನಿರ್ವಹಣೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

ಅಮೃತ್ ಯೋಜನೆಯ ಮೂಲಕ ಪ್ರತಿಯೊಂದು ಮನೆಗೂ ನೀರು ಪೂರೈಸುವ ಮಹತ್ವದ ಜಲ ಜೀವನ್ ಮಿಷನ್ ಯೋಜನೆಗೂ ಸಹ ಇದೇ ದಿನ ಚಾಲನೆ ನೀಡಲಾಗುವುದು.

# ಶಿಕ್ಷಣ ಕ್ರಾಂತಿಯನ್ನೇ ಮಾಡಿದ ಲಿಂ. ಶ್ರೀ

**(3ನೇ ಪುಟದಿಂದ)** ಜ್ಞಾನದ ಬೆಳಕು ನೀಡಿದ ಕೀರ್ತಿ ಲಿಂ. ಶಿವಕುಮಾರ ಜಗದ್ಗುರುಗಳಿಗೆ ಸಲ್ಲುತ್ತದೆ ಎಂದು ಹೇಳಿದರು.

ಗ್ರಾಮೀಣ ಮಕ್ಕಳ ಬದುಕು ಹಸನು ಮಾಡಲು ಶಾಲೆ ತೆರೆದು ಅಜ್ಞಾನ ಹೋಗಲಾಡಿಸಿ, ಸುಜ್ಞಾನ ಮತ್ತು ಸುಪ್ರಜೆಗಳನ್ನಾಗಿ ರೂಪಿಸಿದ ಶ್ರೀಗಳು, ಬೆಂಕಿಯ ಮಧ್ಯೆ ಬದುಕಿದ್ದರೂ ಸಮಾಜಕ್ಕೆ ತಂಪೆರೆಯುವ ಕೆಲಸ ಮಾಡಿದ್ದಾರೆ. ಮರವೊಂದು ಬಿಸಿಲು ಹೀರಿ ಬಂದವರಿಗೆ ನೆರಳು ನೀಡಿದಂತೆ ಮಹಾತ್ಮರೆಲ್ಲರೂ ತಮ್ಮ ಜೀವನದಲ್ಲಿ ಕಷ್ಟ, ನೋವುಂಡು ಬೇರೆಯವರಿಗೆ ಅದರಿಂದ ಮುಕ್ತಿ ಕೊಡುವ ಕೆಲಸ ಮಾಡಿದ ಪರಂಪರೆ ನಮ್ಮ ನಾಡಿನಲ್ಲಿದೆ ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡುತ್ತಾ, ಕುಗ್ರಾಮವಾಗಿದ್ದ ಸಿರಿಗೆರೆ ಲಿಂ.ಶ್ರೀಗಳ ಶ್ರಮ ಹಾಗೂ ತಪಸ್ಸಿನ ಫಲವಾಗಿ ವಿಶ್ವ ವಿಖ್ಯಾತಿ ಪಡೆದಿದೆ. ಸ್ವಾತಂತ್ರ್ಯ ಪೂರ್ವದಲ್ಲಿಯೇ ಹಳ್ಳಿ ಮಕ್ಕಳಿಗೆ ಶಿಕ್ಷಣಕ್ಕಾಗಿ ವಿದ್ಯಾಸಂಸ್ಥೆಗಳನ್ನು ನಿರ್ಮಿಸಿದ ಫಲವಾಗಿ ಇಂದು ರಾಜ್ಯದ ತುಂಬೆಲ್ಲಾ ವಿದ್ಯಾಸಂಸ್ಥೆಗಳಿವೆ. ಶಿಕ್ಷಣದ ಜೊತೆ ವಸತಿ, ಪ್ರಸಾದದ ವ್ಯವಸ್ಥೆಯನ್ನೂ ಕಲ್ಪಿಸುತ್ತಿರುವುದು ಶ್ಲಾಘನೀಯ ಕಾರ್ಯ ಎಂದರು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿ, ಸಚಿವರುಗಳಾದ ಕೆ.ಎಸ್. ಈಶ್ವರಪ್ಪ, ಬಿ.ಸಿ. ಪಾಟೀಲ್, ವಿ.ಸೋಮಣ್ಣ, ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್. ಶಂಕರ್ ಮಾತನಾಡಿದರು.

### ರೋಂನಲ್ಲಿ ಅಂತರರಾಷ್ಟ್ರೀಯ ಸಮ್ಮೇಳನ

**ಅಕ್ಟೋಬರ್ 4 ರಂದು ರೋಂನಲ್ಲಿ ಪರಿಸರದ ಬಗ್ಗೆ ಅಂತರರಾಷ್ಟ್ರೀಯ ಸಮ್ಮೇಳನವಿದೆ. ಅದರಲ್ಲಿ ಜಗತ್ತಿನಾದ್ಯಂತ 37 ಜನರನ್ನು ಆಯ್ಕೆ ಮಾಡಲಾಗಿದೆ. ರೋಂನ ಪೋಪ್ ರವರು ನಮ್ಮನ್ನೂ ಸಮ್ಮೇಳನಕ್ಕೆ ಆಯ್ಕೆಮಾಡಿದ್ದಾರೆ. ಕೊರೊನಾ ಮುಂದುವರಿಯುತ್ತಿರುವುದರಿಂದ ಡೋಲಾಯಮಾನ ಸ್ಥಿತಿಯಲ್ಲಿದ್ದೇವೆ. ಅಂತರ್ಜಾಲದಲ್ಲಿ ಮಾತನಾಡುವ ಅವಕಾಶ ಇದೆ ಎಂದು ಶ್ರೀಗಳು ಹೇಳಿದರು.**

**ಅಕ್ಟೋಬರ್ 4ರ ಒಳಗಾಗಿ ಭರಮಸಾಗರ ಕೆರೆಗೆ ನೀರು ಬಂದರೆ ಈ ದೃಶ್ಯವನ್ನು ಅಂತರ್ಜಾಲದ ಮೂಲಕ ಪ್ರಸ್ತುತಪಡಿಸಲಾಗುವುದು ಎಂದು ಇದೇ ಸಂದರ್ಭದಲ್ಲಿ ಶ್ರೀಗಳು ನುಡಿದರು.**

### ವ್ಯಾಪಾರಿಗಳಿಗೆ ಬುದ್ದಿ ಕಲಿಸಿದ್ದ ಲಿಂ.ಶ್ರೀಗಳು

**(3ನೇ ಪುಟದಿಂದ)** ಬೆಳೆಗಳನ್ನು ಪೇಟೆಗೆ ತಂದು ಮಾರಾಟ ಮಾಡುವ ವೇಳೆ ಅಲ್ಲಿದ್ದ ವ್ಯಾಪಾರಸ್ಥರು ರೈತರಿಗೆ ನೀರು ಕೊಡಬೇಕಾದರೂ ಅಸ್ಪೃಶ್ಯರಂತೆ ಕಾಣುತ್ತಿದ್ದರು. ಇದನ್ನು ಮನ ಗಂಡ ಶ್ರೀಗಳು, ಆರ್ಥಿಕವಾಗಿ ಸಬಲರಾಗಿದ್ದವರಿಂದ ಮಾರುಕಟ್ಟೆಯಲ್ಲಿ ದಲ್ಲಾಲಿ ಅಂಗಡಿಗಳನ್ನು ತೆರೆಸಿ ಅವರಿಗೆ ಬುದ್ದಿ ಕಲಿಸಿದರು. ಇದರಿಂದ ರೈತರಿಗೂ ಅನುಕೂಲವಾಗಿತ್ತು ಎಂದು ನೆನಪಿಸಿಕೊಂಡರು.

ರಾಜ್ಯದಲ್ಲಿ ಲಿಂ.ಶ್ರೀಗಳು ಹೇಳಿದಂತೆ ಕೇಳುವ 10-15 ಸಾಧು ವೀರಶೈವ ಶಾಸಕರಿದ್ದರು. ಸರ್ಕಾರವೇ ಅವರು ಹೇಳಿದಂತೆ ಕೇಳುತ್ತಿತ್ತು. ಅಂತಹ ಶಕ್ತಿ ಲಿಂ.ಜಗದ್ಗುರುಗಳದ್ದಾಗಿತ್ತು ಎಂದು ಎಸ್ಸೆಸ್ ಹೇಳಿದರು.

## ರೇಷ್ಮೆ ಕೃಷಿ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ದಾವಣಗೆರೆ, ಸೆ.24- ರೇಷ್ಮೆ ಇಲಾಖೆಯ ವತಿಯಿಂದ ಪ್ರಸಕ್ತ ಸಾಲಿನ ರೇಷ್ಮೆ ಕೃಷಿ ಪ್ರಶಸ್ತಿಗಾಗಿ ಉತ್ತಮ ಪ್ರಗತಿ ಸಾಧಿಸಿರುವ ಜಿಲ್ಲೆಯ ರೇಷ್ಮೆ ಬೆಳೆಗಾರರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಇದೇ ದಿನಾಂಕ 30 ರ ಒಳಗೆ ಕಚೇರಿಗೆ ಸಲ್ಲಿಸಬೇಕು. ಮಾಹಿತಿಗಾಗಿ ರೇಷ್ಮೆ ಬೆಳೆಗಾರರು ರೇಷ್ಮೆ ವಿಸ್ತರಣಾಧಿಕಾರಿಗಳು, ರೇಷ್ಮೆ ಸಹಾಯಕ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದು ಎಂದು ರೇಷ್ಮೆ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


**TO-LET**
First Floor for Commercial/office Puropse, 25x45=1125sqft with attched Toilets, 3rd main, P.J.Extension, Near Chetana Hotel, Davanagere.
94484 81238, 63618 16497

**ಸಿದ್ದವೀರಪ್ಪ ಬಡಾವಣೆ ಸೈಟ್ ಮಾರಾಟಕ್ಕಿದೆ**
ಸಿದ್ದವೀರಪ್ಪ ಬಡಾವಣೆ ಉತ್ತರ 30x40, ದಕ್ಷಿಣ 30x58, ಆಂಜನೇಯ ಬಡಾವಣೆ ಉತ್ತರ 30x40 S.S. Mall ಎದುರು ರಸ್ತೆ, ದಕ್ಷಿಣ 30x39
ಐಗೂರು ವಿಜಯಕುಮಾರ್
99457 02495

**ಮನೆಗಳು ಮಾರಾಟಕ್ಕಿವೆ**
ಬಸವೇಶ್ವರ ಲೇಔಟ್ ದಕ್ಷಿಣ 30x40 ಡೂಪ್ಲೆಕ್ಸ್, 30x40, 30x47, ಪೂರ್ವ, 30x40 ಡೂಪ್ಲೆಕ್ಸ್, ಪಶ್ಚಿಮ 30x40 ಕೆಳಗೆ ಮನೆ ಮೇಲೆ ಮನೆ ಮತ್ತೆ ಮೇಲೆ ಅಟ್ಯಾಚ್ ರೂಂ
ಐಗೂರು ವಿಜಯಕುಮಾರ್
99457 02495

**ಬೇಕಾಗಿದ್ದಾರೆ**
Diploma in Hardware Networking / Software
ಅನುಭವವುಳ್ಳಂತಹ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುತ್ತದೆ.
ಸ್ಥಳ: ಎ.ಕೆ. ಫಾರ್ಮಾ
ತರಳಬಾಳು ಶಾಲೆ ಎದುರು, ಹದಡಿ ರಸ್ತೆ, ದಾವಣಗೆರೆ.

**ಮನೆ ಬಾಡಿಗೆಗೆ**
ಶಕ್ತಿ ನಗರದಲ್ಲಿ 17x36 ಸೈಜಿನ ಸಿಂಗಲ್ ಬೆಡ್ ರೂಂ, ಪೂರ್ವ ದಿಕ್ಕಿನಲ್ಲಿರುವ ಮನೆ ಬಾಡಿಗೆಗೆ ದೊರೆಯುತ್ತದೆ. ಸಂಪರ್ಕಿಸಿ
94484 39639

**ಸೈಟ್ ಬೇಕಾಗಿರುತ್ತದೆ**
KHB ದಾವಣಗೆರೆ 30x40, 30x50 ಪೂರ್ವ ಸೈಟ್ ಬೇಕಾಗಿರುತ್ತದೆ.
(Immediate Registration)
74112 50447

**ಬೇಕಾಗಿದ್ದಾರೆ**
ELTHOR ಎಲೆಕ್ಟ್ರಿಕ್ ಸ್ಕೂಟರ್ ಶೋ ರೂಂನಲ್ಲಿ ಕೆಲಸ ಮಾಡಲು ಆಸಕ್ತ ಯುವಕರು ಬೇಕಾಗಿದ್ದಾರೆ.
ವಿದ್ಯಾನಗರ ಕೊನೆ ಬಸ್ ನಿಲ್ದಾಣದ ಹತ್ತಿರ, ದಾವಣಗೆರೆ.
ಮೊ: 90367 14507

**ಉದ್ಯೋಗಾವಕಾಶ**
ಯಾವುದೇ ವಿದ್ಯಾರ್ಹತೆ ಇದ್ದರೂ ಕೂಡ ಪಾರ್ಟ್ ಟೈಮ್ ಹಾಗೂ ಫುಲ್ ಟೈಮ್‌ನಲ್ಲಿ ಮನೆಯಲ್ಲಿ ಕುಳಿತು ಕೆಲಸ ಮಾಡಿ ತಿಂಗಳಿಗೆ 10 ರಿಂದ 15 ಸಾವಿರ ಗಳಿಸಲು ಸುವರ್ಣಾವಕಾಶ. ಯಾವುದೇ ವಯೋಮಿತಿ ಇರುವುದಿಲ್ಲ. ಸಂಪರ್ಕಿಸಿ :
72592 22590, 73532 68518
88921 17279

**ಸರ್ಕಾರಿ ನೌಕರರ ಲೇಔಟ್ ಮತ್ತು ಕುಂದವಾಡ ಕೆರೆ ಪಕ್ಕ ಸೈಟ್ ಮಾರಾಟಕ್ಕಿವೆ**
ಸರ್ಕಾರಿ ನೌಕರರ ಲೇಔಟ್ (ಬೈಪಾಸ್) ಸರ್ಕಲ್ ಹತ್ತಿರ ಉತ್ತರ 40x60, ಕುಂದವಾಡ ಕೆರೆ ಪಕ್ಕ ಕುಂದವಾಡ ರಸ್ತೆ, ಪೂರ್ವ 30x55, 30x47, ಪಶ್ಚಿಮ 30x40 ಉತ್ತರ ಪಶ್ಚಿಮ ಕಾರ್ನರ್ 25x47
ಐಗೂರು ವಿಜಯಕುಮಾರ್
99457 02495

**ಜೆ.ಹೆಚ್ ಪಟೇಲ್ ಮತ್ತು ಭೂಮಿಕ ಬಡಾವಣೆ 20x30 ಮನೆಗಳು ಮಾರಾಟಕ್ಕಿವೆ**
ಜೆ.ಹೆಚ್ ಪಟೇಲ್ ಪೂರ್ವ 20x30, ಉತ್ತರ, 20x30 ಮೇಲೆ ಕೆಳಗೆ, ಭೂಮಿಕ ಬಡಾವಣೆ ದಕ್ಷಿಣ 20x30 ಮೇಲೆ ಕೆಳಗೆ
ಐಗೂರು ವಿಜಯಕುಮಾರ್
99457 02495

**ಸೈಟು ಮಾರಾಟಕ್ಕಿದೆ**
ಸಿದ್ದಗಂಗಾ ಬಡಾವಣೆ H.Tech ಆಸ್ಪತ್ರೆ ಹಿಂಭಾಗ ಉತ್ತರ face 30×40 Aproval 2 ಸೈಟುಗಳು ಮಾರಾಟಕ್ಕಿವೆ. ಕಡೇ ಕೊಪ್ಪ ರೈಸ್ ಮಿಲ್ ಹಿಂಭಾಗ 30×40 ಪಶ್ಚಿಮಕ್ಕೆ 2 ಸೈಟುಗಳು ಮಾರಾಟಕ್ಕಿವೆ. ಅಲಿನೇಷನ್ ಡೋರ್ ನಂಬರ್.
96636 66870

**ಬಾಡಿಗೆಗಿದೆ**
ಕೆ.ಬಿ. ಬಡಾವಣೆ 11ನೇ ಕ್ರಾಸ್ ತ್ರಿಶೂಲ್ ಟಾಕೀಸ್ ರಸ್ತೆ, ಜನ ಮಿಡಿತ ಪತ್ರಿಕೆ ಹತ್ತಿರ ಮೊದಲನೇ ಮಹಡಿಯಲ್ಲಿ ಆಫೀಸ್‌ಗೆ ರೂಂ ಬಾಡಿಗೆಗಿದೆ.
94483 39231
77951 49297

**2 BHKಮನೆ ಬಾಡಿಗೆಗಿದೆ**
#1947/74, "ಸಪ್ತಗಿರಿ" ನಿಲಯ, 8ನೇ ಮೇನ್, 5ನೇ ಕ್ರಾಸ್ ಸ್ವಾಮಿ ವಿವೇಕಾನಂದ ಬಡಾವಣೆ, ದಾವಣಗೆರೆ-4
ಫೋ.: 98802 93321

**ಮನೆ ಬಾಡಿಗೆಗೆ ಇದೆ**
ಸ್ವಾಮಿ ವಿವೇಕಾನಂದ ಬಡಾವಣೆ 1ನೇ ಮೇನ್, 5ನೇ ಕ್ರಾಸ್‌ನಲ್ಲಿ ಪುಷ್ಪ ಮಹಾಲಿಂಗಪ್ಪ ಶಾಲೆಯ ಗೇಟ್ ಎದುರು ಪೂರ್ವ ದಿಕ್ಕಿನ ಬೋರ್‌ವೆಲ್ ಕಾರ್ಪೊರೇಷನ್ ನೀರಿನ ವ್ಯವಸ್ಥೆ ಇರುವ 1 BHK, 2ನೇ ಮಹಡಿಯ ಮನೆ ಬಾಡಿಗೆಗೆ ಇದೆ.
99028 49718,80736 35862

**ಬೇಕಾಗಿದ್ದಾರೆ**
ಪೈಪ್ ಡಿಸ್ಟ್ರಿಬ್ಯೂಷನ್ ನಲ್ಲಿ ಕೆಲಸ ಮಾಡಲು Sales Executive ಬೇಕಾಗಿದ್ದಾರೆ. ಬೈಕ್ ಉಳ್ಳವರು ಮಾತ್ರ ಸಂಪರ್ಕಿಸಿ
74063 96332
74067 40635

**ಶಿಕ್ಷಕಿ/ಶಿಕ್ಷಕರು ಬೇಕಾಗಿದ್ದಾರೆ**
PCM- 1, Hindi B.Ed-1, CBZ-1, B.Ed English-1
ಆಂಗ್ಲ ಮಾಧ್ಯಮ ಪ್ರೌಢಶಾಲೆಗೆ ಬೋಧಿಸಲು ಅನುಭವಿ ಅರ್ಹ ಶಿಕ್ಷಕಿಯರು/ಶಿಕ್ಷಕರು ಬೇಕಾಗಿದ್ದಾರೆ.
ಸಂಪರ್ಕಿಸಿ: SMS ಕಾನ್ವೆಂಟ್, ದಾವಣಗೆರೆ.
98447 35946, 96631 95531

**ಮನೆ ಬಾಡಿಗೆಗೆ ಇದೆ**
ತರಳಬಾಳು ಬಡಾವಣೆ, 1ನೇ ಮುಖ್ಯರಸ್ತೆ, 12ನೇ ಅಡ್ಡ ರಸ್ತೆ, # 2000/53, 1ನೇ ಮಹಡಿ, ಸುಮಾರು 14 ಚದುರದ ಸದಾ ನೀರಿನ ಸೌಲಭ್ಯವುಳ್ಳ ಮನೆ ಖಾಲಿ ಇದೆ. ಸಸ್ಯಹಾರಿಗಳಿಗೆ ಮಾತ್ರ
98448 04084, 94486 67016

**WANTED FEMALE**
Data Entry- 1, Office Work- 1, Computer faculty- 2, Salary 6,000+ , Incentive (1 year computer Course)
95910 78215
80886 65187

**ಬೇಕಾಗಿದ್ದಾರೆ**
ಪಟಾಕಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
98453 52367
72591 33339

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. Two wheelar Bike ಇರಬೇಕು, Petrol ಭತ್ಯೆ ಕೊಡಲಾಗುವುದು.
94807 95548, 98800 42597, 95354 48742 (whatsapp / call Resume)

**ಬೇಕಾಗಿದ್ದಾರೆ**
ದಾವಣಗೆರೆ ನಗರದ ಸಸ್ಯಹಾರಿ ಊಟದ ಹೋಟೆಲ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ
94489 80070
78991 90070

**ಮಾರಾಟಕ್ಕಿದೆ**
ಭವಾನಿ ರಾಗಿ ಕ್ಲೀನಿಂಗ್ ಮಿಷನ್ ಮಾರಾಟಕ್ಕಿದೆ
(1 ಗಂಟೆಗೆ 500 kg)
98449 37527

**WANTED FEMALE**
We need female for Teach English Grammar and Spoken(live class) Salary 8,000+
97392 30843

**CAR FOR SALE**
Hundai Verna model - 2018 Diesel -Automatic gear car for sale. Very good condition and Top end Model, Doctor owned
Contact-98452 36274
Prize 13 lakhs (slightly negotiable)

**ಜಮೀನು ಮಾರಾಟಕ್ಕಿದೆ**
ತೋಳಹುಣಸೆ ಗ್ರಾಮದಲ್ಲಿ ರೇಷ್ಮೆ ಇಲಾಖೆಗೆ ಹೋಗುವ ದಾರಿಯಲ್ಲಿ ಒಂದು ಎಕರೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ
87674 87922

**ಮನೆ ಬಾಡಿಗೆಗೆ ಇದೆ**
ಜೆ.ಹೆಚ್.ಪಿ ನಗರ (ಜೆ.ಹೆಚ್. ಪಟೇಲ್) ನಗರದಲ್ಲಿ D. No. 273, 1ನೇ ಮೇನ್, 6ನೇ ಕ್ರಾಸ್, ಮೇಲಿನ (1st floor) ಮನೆ ಎಲ್ಲಾ ಸೌಕರ್ಯ ಇರುವ, AEH, 24 hours ನೀರು ಇರುವ ಮನೆ ಬಾಡಿಗೆಗೆ ಇದೆ. ಆಸಕ್ತಿಯುಳ್ಳವರು ಕೆಳಗಿನ ಮೊಬೈಲ್ ನಂ. ಸಂಪರ್ಕಿಸಿ
98442 06514

**ಮನೆ /ಸೈಟ್ ಮಾರಾಟಕ್ಕೆ**
3BHK , 20x30 ಡೂಪ್ಲೆಕ್ಸ್, ದೂಡಾ, ಮುನ್ಸಿಪಾಲಿಟಿ ಅಪ್ರೂವ್ಡ್ ಮನೆ ಜಯನಗರದಲ್ಲಿ ಮತ್ತು ಕರ್ನಾಟಕ ಗೃಹ ಮಂಡಳಿಯಲ್ಲಿ 30x40 ಪಶ್ಚಿಮ ಸೈಟ್ ಮಾರಾಟಕ್ಕಿದೆ.
80505 33389/6

**REQUIRED**
GENTS AND LADIES WARDEN FOR HOSTEL
Location : DAVANGERE
CONTACT :
78999 17593

**MR VENTURES**
Out source security guard and man power agency. Poen, security guard, Computer operator, Daily wages labour.
Contact: 78929 94944

**ತೂಕದ ಲೆಕ್ಕದ ಬಟ್ಟೆ ಅಂಗಡಿ**
ಸೇಲ್... ಸೇಲ್... ಸೇಲ್...
ಮಲಬಾರ್ ಕಾಟನ್‌ನಲ್ಲಿ
Limited Offer Only
1 ಕೆ.ಜಿ ~~799~~ ಈಗ 599/-,
2 ಕೆ.ಜಿ ~~1600~~ ಈಗ 999 ಮಾತ್ರ
97420 90612

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮನೆ ಬಾಡಿಗೆಗೆ ಇದೆ**
#2285/30, B/1, LIC ಕ್ವಾಟ್ರರ್ಸ್ ವಿದ್ಯಾನಗರ ಪಾರ್ಕ್ ಹತ್ತಿರ, ವಿದ್ಯಾನಗರದಲ್ಲಿ ಮೊದಲನೇ ಮಹಡಿಯಲ್ಲಿ ಪೂರ್ವ ದಿಕ್ಕಿನ 2BHK ಮನೆ ಹಾಗೂ ಸಿಂಗಲ್ ರೂಂ ಬಾಡಿಗೆಗೆ ಇದೆ.
94480 47581
(ಸಸ್ಯಹಾರಿಗಳಿಗೆ, ನೌಕರರಿಗೆ ಮಾತ್ರ ಮಾತ್ರ)

**ನೆಲ ಬಾಡಿಗೆಗೆ ಇದೆ**
ವಾಣಿಜ್ಯ ಉದ್ದೇಶಗಳಿಗೆ ಜಾಗ ಖಾಲಿ ಇದೆ. ದಾವಣಗೆರೆ, ಮುದ್ದಳ್ಳಿ ತೋಟ, ಪೊಲೀಸ್ ಪೆರೇಡ್ ಗ್ರೌಂಡ್ ಎದುರು 6577 ಅಡಿ (ಅಗಲ 28, ಉದ್ದ 233)
87109 64433

**ಬೇಕಾಗಿದ್ದಾರೆ**
KAKE Walk ಕೌಂಟರ್ ಸರ್ವೀಸ್, ಕ್ಲೀನರ್, ಲೇಡಿಸ್ ಕ್ಲೀನರ್, ಸ್ಟೋರ್ ಕ್ಲೀನರ್
8792187661

**20 ಎಕರೆ (ಹೊಳೆ ಪಂಪ್‌ಸೆಟ್) ನೀರಾವರಿ ಜಮೀನು ಮಾರಾಟಕ್ಕಿದೆ**
@ Rs 20 Laks/ Acer
(ಹರಿಹರದಿಂದ 15 ಕಿ.ಮೀ)
Contact Buyers only
74112 50447

**COMMERCIAL BUILDING FOR RENT**
ground floor 2000 Sqft, 1st/2nd floor 2750 Sqft. Car Parking Available. @591/2, KB Extenstions, Opp Prem daba, Near Lawyer Road, Davangere.
94493 19814, 91645 05045

**ಸೈಟುಗಳು ಮಾರಾಟಕ್ಕಿವೆ**
ಹರಿಹರ ನಗರದಲ್ಲಿ ದೂಡಾ ಅಪ್ರೂವ್ಡ್ ಸೈಟುಗಳು ವಿಶೇಷ ರಿಯಾಯಿತಿಯಲಿ ಮಾರಾಟಕ್ಕಿವೆ. Rs.899sqft ಹಾಗೂ ಸುಲಭ ಕಂತಿನಲ್ಲಿ ಲಭ್ಯ.
86603 11021
94481 55202
93431 10009

**WANTED**
Marketing Manager/ Executives
www.nextstepz.in
89700 66666
99645 46667

**ಖಾಲಿ ಜಾಗ ಬಾಡಿಗೆಗೆ ಇದೆ**
ಜಗಳೂರು ರಸ್ತೆಯ ಎಲೆಬೇತೂರಿನಲ್ಲಿ ಡಾಬಾ ಹಾಗೂ ಹೋಟೆಲ್‌ಗಳಿಗೆ ಖಾಲಿ ಜಾಗ ಬಾಡಿಗೆಗೆ ಇದೆ. ಸೈಟುಗಳಿಗೆ ಸಂಪರ್ಕಿಸಿ
98440 67940

**ಸೈಟ್‌ಗಳು ಮನೆ ಮಾರಾಟಕ್ಕಿವೆ**
ಬನಶಂಕರಿ, ಶಿವ ಪಾರ್ವತಿ, ವಿದ್ಯಾನಗರ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ ಹಾಗೂ ದಾವಣಗೆರೆ ನೂತನ ಲೇಔಟ್‌ನಲ್ಲಿ ಸೈಟುಗಳು ಮಾರಾಟಕ್ಕಿವೆ. ಕಮರ್ಷಿಯಲ್ ಸೈಟ್, ಅಪಾರ್ಟ್‌ಮೆಂಟ್ ಸೈಟು ಹಾಗೂ ಹೊಲಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ.
ಏಜೆಂಟ್ : Abhishek Aller
97315 12365

**CHANGE OF NAME**
I Sunita Chandra Resident of # 556/1, N.R. Road, Davanagere-577001, have changed my Name Sinita Chandra (old Name) to SUNITHA CHADRA (New Name) affidavit dated 24.09.2021 sworn before Davanagere Notary
- SUNITHA CHANDRA

**WANTED**
private tutors for home tuition with teaching experience mathematics and science, interested people can contact.
99459 88776
98862 11600

**FOR SALE**
**Commercial property for sale**
infront of aralimara bus stop 15x35 ground and 2bhk at 1st floor
92417 50559

**Space For Rent**
Suitable for Corporate Office, Coachaing center, yoga Therapy, poly clinic etc. First & Second Floor Each 1600 sqft Prime location, 3rd main, P.J. Extn, Near Chethana hotel
98807 65683
97422 73362

**ಬೇಕಾಗಿದ್ದಾರೆ**
1) ಅಡುಗೆ ಕೆಲಸಕ್ಕೆ-1 (ಮಹಿಳೆ)
2) ಆಸ್ಪತ್ರೆಯಲ್ಲೇ ಇದ್ದು ಅಡುಗೆ ಮಾಡಲು ಮಹಿಳಾ ಸಿಬ್ಬಂದಿ-1
3) ಚಿಕಿತ್ಸಾ ಥೆರಪಿಸ್ಟ್-2
(ಉಚಿತವಾಗಿ 45 ದಿನ ಟ್ರೈನಿಂಗ್ ಕೊಟ್ಟು ನಮ್ಮಲ್ಲೇ ಕೆಲಸಕ್ಕೆ ಸೇರಿಸಿಕೊಳ್ಳಲಾಗುವುದು)
ದಾವಣಗೆರೆಯ ಪ್ರತಿಷ್ಠಿತ ಆಸ್ಪತ್ರೆಗೆ ಮೇಲೆ ತಿಳಿಸಿದ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ
86186 42929
08192-252228

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಜಾಗ ಮಾರಾಟಕ್ಕಿದೆ**
ಹೊಂಡದ ಸರ್ಕಲ್ ಹತ್ತಿರ 22×40 ಕಮರ್ಷಿಯಲ್ ಜಾಗ ಮಾರಾಟಕ್ಕಿದೆ.
93807 13883

**ಬೇಕಾಗಿದ್ದಾರೆ**
ಪಿಯುಸಿ ಪಾಸಾದ 25 ವರ್ಷದೊಳಗಿನ ಯುವಕರು ಸಹಾಯಕರಾಗಿ ಬೇಕಾಗಿದ್ದಾರೆ. ತರಬೇತಿ ಸಹಿತ ಆಕರ್ಷಕ ಸಂಬಳ.
ಆಸಕ್ತರು ಸಂಪರ್ಕಿಸಿ :
ನ್ಯೂರೋಥೆರಪಿ ವೆಲ್‌ನೆಸ್ ಸೆಂಟರ್
3ನೇ ಮೇನ್, 2ನೇ ಕ್ರಾಸ್, MCC B ಬ್ಲಾಕ್ ಸುರಭಿ ಆಸ್ಪತ್ರೆ ಹತ್ತಿರ, ದಾವಣಗೆರೆ.
99726 00713

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ಸಮೀಪದ ಐಗೂರು ಗ್ರಾಮದಲ್ಲಿ 2 ಎಕರೆ ಜಮೀನು ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ.
86609 72049

**ಪೇಪರ್ ಕಪ್ ಮಷಿನ್ ಮಾರಾಟಕ್ಕಿವೆ**
ಉತ್ತಮ ಚಾಲೂ ಸ್ಥಿತಿಯಲ್ಲಿರುವ ಪೇಪರ್ ಕಪ್ ಮೇಕಿಂಗ್ ಮಷಿನ್ ಮಾರಾಟಕ್ಕಿವೆ. ಸಂಪರ್ಕಿಸಿ. ಬೆಳಿಗ್ಗೆ 10 ರಿಂದ ಸಂಜೆ 5.00ರವರೆಗೆ ಮಾತ್ರ
95916 64448

**CHANGE OF NAME**
I Dinesh C.G Resident of 2000/83, 13th Cross, Taralabalu Badavane, Davangere-577 005 have changed my daughter's name **SIRI DINESH** (old name) to **SIRI YASHA DINESH** (new name) vide Affidavit dated 24.09.2021 Davangere. Sworn before notary
DINESH C.G

**GENERATOR FOR SALE**
25KVA Diesel, Kirloskar make Running in good condition.
Contact
94484 65800

**ಸಕ್ಕರೆ ಕಾಯಿಲೆ ಗುಣಮುಖ ಖಚಿತ**
* ಸಕ್ಕರೆ ಕಾಯಿಲೆ * ಪಾದದ ಹುಣ್ಣು
* ಬಂಜೆತನ * ಬೊಜ್ಜು
* ಹೃದಯಾಘಾತಗಳ ತಡೆ
* ಬೊಜ್ಜು ಮತ್ತು ಸಕ್ಕರೆ ಕಾಯಿಲೆ ಸಂಬಂಧಿತ 14 ವಿಧದ ಕ್ಯಾನ್ಸರ್‌ಗಳು ಒಳಗೊಂಡಿರುತ್ತವೆ
* ಸ್ವಯಂ ನಿರೋಧಕ ರೋಗಗಳು.
ಗುಣಪಡಿಸಲು ವಿಫಲವಾದರೆ 10 ಲಕ್ಷ ರೂ. ದಂಡವಿದೆ
ಸಮಯ : 1.30 ರಿಂದ 3.30 pm
ಡಾ|| ಬಸವರಾಜ್ ಮುದೇಗೌಡ್ರ
MBBS, DVD, MD.,
99005 61014 ,+9 74502 24550

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 94837 64859
87620 58369, 90080 67049

**ಉಚಿತ ಭವಿಷ್ಯ ಖಚಿತ ಪರಿಹಾರ**
**ನಂ. 1 ವಶೀಕರಣ ಸ್ಪೆಷಲಿಸ್ಟ್**
ನೀವು ಇಷ್ಟಪಟ್ಟವರು, ನಿಮ್ಮಂತಾಗಲು, ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಅತ್ತೆ, ಸೊಸೆ ಕಿರಿಕಿರಿ. 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ:
96068 18273

**ಡೀಲರ್‌ಶಿಪ್ ಅವಕಾಶ**
ಚನ್ನಗಿರಿ, ಜಗಳೂರು ಮತ್ತು ಹೊನ್ನಾಳಿ ನಗರದಲ್ಲಿ ಕೇವಲ 4 ಲಕ್ಷ ಬಂಡವಾಳದೊಂದಿಗೆ ಅಧಿಕ ಲಾಭ ಹೊಂದಿರುವಂತಹ ಗೋ ಗ್ಯಾಸ್ ಕಮರ್ಷಿಯಲ್/ ವಾಣಿಜ್ಯ ಬಳಕೆಯ ಸಿಲಿಂಡರ್ ಡೀಲರ್‌ಶಿಪ್ ಲಭ್ಯವಿದೆ.
74831 76531

**ಗೃಹ ಸಾಲಗಳಿಗಾಗಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಮಾರ್ಟ್‌ಗೇಜ್ ಸಾಲಗಳಿಗಾಗಿ ಸಂಪರ್ಕಿಸಿ :
81472 61158

**ನೇರ ಪರೀಕ್ಷೆಗಳು**
SSLC- 7,8,9, 10Fail, PUC - Sci/ Arts/ Comm, NTC- ನರ್ಸರಿ ಟೀಚರ್ಸ್, B.A., B.Com., M.A., M.Com., MBBS-For Abroad regular
ಶ್ರೀ ಗಂಗೋತ್ರಿ ಕಮ್ಯುನಿಟಿ ಕಾಲೇಜು
ಲಾಯರ್ ರೋಡ್, ಕಲಾ ಲೇಡಿಸ್ ಟೈಲರ್ ಪಕ್ಕ, ದಾವಣಗೆರೆ.
86602 35013

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

**REQUIREMENT**
Job Requirement for Accounting with Tally minimum Experince of 2-3 years. salary 14,000 Karuru Industrial Area Near D.C Office, Davangere.
78999 13123

# ಲಿಂ. ಶಿವಕುಮಾರ ಶ್ರೀಗಳಿಗೆ ಶ್ರದ್ಧಾಂಜಲಿ



**ಹೊನ್ನಾಳಿ**

ಹೊನ್ನಾಳಿ, ಸೆ.24- ತಾಲ್ಲೂಕಿನ ಗೊಲ್ಲರಹಳ್ಳಿಯಲ್ಲಿ ತರಳಬಾಳು ಸಮುದಾಯ ಭವನದಲ್ಲಿ ತರಳಬಾಳು ಜಗದ್ಗುರು ಲಿಂಗೈಕ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಾಹಾಸ್ವಾಮೀಜಿಗಳವರ 29ನೇ ಶ್ರದ್ಧಾಂಜಲಿ ಸಭೆಯನ್ನು ಸಾಧು ವೀರಶೈವ ಸಮಾಜ ಹಾಗು ಶಿವ ಕ್ರೆಡಿಟ್ ಸೊಸೈಟಿ ಆಶ್ರಯದಲ್ಲಿ ನಡೆಸಲಾಯಿತು.

ಸಮಾಜದ ಮುಖಂಡರೂ, ಜಿಲ್ಲಾ ಸಹಕಾರ ಬ್ಯಾಂಕ್ ಮಾಜಿ ನಿರ್ದೇಶಕರೂ ಆದ ಡಿ.ಎಸ್. ಸುರೇಂದ್ರ ಮಾತನಾಡಿ, 2 ವರ್ಷಗಳಿಂದ ಶ್ರೀಗಳ ಸಾನ್ನಿಧ್ಯದಲ್ಲಿ ತಾಲ್ಲೂಕಿನಲ್ಲಿ ನಡೆಯುತ್ತಿದ್ದ ಅಕ್ಕಿ ವಿತರಣಾ ಸಮಾರಂಭವು ಕೋವಿಡ್ ನಿಯಮ ಪಾಲನೆ ಹಾಗು ಶ್ರೀಗಳ ಆದೇಶ ದೊರೆಯದ ಕಾರಣ ನಡೆಸಲು ಸಾಧ್ಯವಾಗಿಲ್ಲ ಎಂದರು.

ಸಾಧು ಸಮಾಜದ ಹೊನ್ನಾಳಿ ಪಟ್ಟಣದ ಅಧ್ಯಕ್ಷ ಶೈಲೇಶ್ ಮಾತನಾಡಿ. ಪ್ರತಿ ವರ್ಷ ತಾಲ್ಲೂಕು ಸಮಾಜದ ಬಂಧುಗಳು ಸೇರಿ 101 ಕ್ವಿಂಟಾಲ್ ಅಕ್ಕಿಯನ್ನು ಶ್ರದ್ಧಾಂಜಲಿ ಕಾರ್ಯಕ್ರಮಕ್ಕೆ, ಸಭೆ ನಡೆಸುವ ಮೂಲಕ ಕಳಿಸಿಕೊಡುತ್ತಿದ್ದ ವಿಷಯವನ್ನು ಸ್ಮರಿಸಿದರು.

ಈ ಸಂದರ್ಭದಲ್ಲಿ ಸಾಧು ವೀರಶೈವ ಸಮಾಜದ ಉಪಾಧ್ಯಕ್ಷ ಹುಣಸಘಟ್ಟ ಗದುರ್ಗೇಶ್, ಕೂಲಂಬಿ ಹಾಲೇಶಪ್ಪ, ಸಿದ್ದಲಿಂಗಪ್ಪ, ಸಂಘದ ಕಾರ್ಯದರ್ಶಿ ಅರಬಗಟ್ಟೆ ಸಣ್ಣಬಸಪ್ಪ, ಶಿವ ಕ್ರೆಡಿಟ್ ಸೊಸೈಟಿ ಮಾಜಿ ಅಧ್ಯಕ್ಷ ಬಸಲಿಂಗಪ್ಪ, ಕುಂದೂರು ಗುರುರಾಜ, ನಿರ್ದೇಶಕರಾದ ಶೈಲೇಶ್, ನಾಗೇಂದ್ರಪ್ಪ, ಕುಂದೂರು ನಾಗರಾಜಪ್ಪ, ಬಿದರಗಡ್ಡೆ ನಾಗೇಂದ್ರಪ್ಪ, ಬ್ಯಾಂಕ್ ಕಾರ್ಯದರ್ಶಿ ರುದ್ರೇಶ್, ಸಮಾಜದ ಮುಖಂಡರಾದ ಎ.ಜಿ. ಪ್ರಕಾಶ್, ಅರಬಗಟ್ಟೆ ರಮೇಶ್, ಕುಂದೂರು ಆಂಜನೇಯ, ಇಂಜಿನಿಯರ್ ಸೋಮಪ್ಪ, ಕಮ್ಮಾರಗಟ್ಟೆ ಶಿವಕುಮಾರ, ಬೆನಕನಹಳ್ಳಿ ಮಹೇಶ್ವರಪ್ಪ, ಮರಿಗೊಂಡನಹಳ್ಳಿ ಧನಂಜಯ ಇನ್ನಿತರರಿದ್ದರು.

# ಅಂಗನವಾಡಿ - ಆಶಾ ಕಾರ್ಯಕರ್ತೆಯರಿಂದ ಪ್ರತಿಭಟನೆ



**ಹರಪನಹಳ್ಳಿ**

ಹರಪನಹಳ್ಳಿ, ಸೆ.24- ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕಾರ್ಮಿಕ ಸಂಘಟನೆಗಳ ಸಮಿತಿಯ ನೇತೃತ್ವದಲ್ಲಿ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಕಾರ್ಮಿಕ ಸಂಘಟನೆಯ ಮುಖಂಡ ಗುಡಿಹಳ್ಳಿ ಹಾಲೇಶ್ ಮಾತನಾಡಿ, ಎಲ್ಲಾ ಮುಂಚೂಣಿ ಯೋಜನೆಗಳಿಗೂ ಸೇವಾ ಖಾಯಮಾತಿ, ಕನಿಷ್ಟ ವೇತನ ಮತ್ತು ಪಿಂಚಣಿ ಹಾಗೂ ಕೊರೊನಾ ಸಮಯದಲ್ಲಿ ಸುರಕ್ಷಾ ಸಾಮಗ್ರಿಗಳು ಹಾಗೂ ಕೋವಿಡ್-19 ಅಪಾಯ ಭತ್ಯೆ ಮತ್ತು ಮರಣ ಪರಿಹಾರ ನೀಡಬೇಕು. ಸೇವಾವಧಿಯಲ್ಲಿ ಮೃತಪಟ್ಟ ಎಲ್ಲಾ ಮುಂಚೂಣಿ ನೌಕರರಿಗೆ 50 ಲಕ್ಷ ರೂಪಾಯಿಗಳ ವಿಮಾ ಸುರಕ್ಷೆ ಒದಗಿಸಬೇಕು ಎಂದು ಒತ್ತಾಯಿಸಿದರು.

ಆಶಾ ಕಾರ್ಯಕರ್ತೆಯರ ಸಂಘದ ಅಧ್ಯಕ್ಷರಾದ ಗೀತಾ ಮಾತನಾಡಿ, ಈಗಿರುವ ವಿಮಾ ಯೋಜನೆಗಳನ್ನು ಸರಿಯಾಗಿ ಜಾರಿಗೆ ತರಬೇಕು. ಎಲ್ಲಾ ಯೋಜನೆಗಳ ಕೆಲಸಗಳಿಗೆ ಅದರ ಪ್ರಯೋಜನ ಸಿಗುವಂತಾಗಬೇಕು ಎಂದು ಆಗ್ರಹಿಸಿದರು.

ಅಂಗನವಾಡಿ ಕಾರ್ಯಕರ್ತೆಯರ ತಾಲ್ಲೂಕು ಅಧ್ಯಕ್ಷೆ ಬಸಮ್ಮ ಮಾತನಾಡಿ, ಸೇವಾ ಅವಧಿಯಲ್ಲಿ ಸೋಂಕಿತರಾದ ಪ್ರತಿಯೊಬ್ಬರಿಗೂ ಕನಿಷ್ಟ ಹತ್ತು ಲಕ್ಷ ರೂಪಾಯಿಗಳ ಪರಿಹಾರ ಒದಗಿಸಿ ಮತ್ತು ಕಾರ್ಮಿಕ ವಿರೋಧಿ ಕಾರ್ಮಿಕ ಸಂಹಿತೆಗಳನ್ನು ಹಿಂಪಡೆಯಿರಿ ಎಂದು ಒತ್ತಾಯಿಸಿದರು.

ಕಾರ್ಯದರ್ಶಿ ಕೆ. ಅಂಜಿನಮ್ಮ ಮಾತನಾಡಿ, ಕೇಂದ್ರೀಯ ಪ್ರಾಯೋಜಿತ ಯೋಜನೆಗಳನ್ನು ಖಾಯಂಗೊಳಿಸಿ ಹಾಗೂ ಬಜೆಟ್‌ನಲ್ಲಿ ಸಮರ್ಪಕ ನಿಧಿಯನ್ನು ಒದಗಿಸಿ.

ಐಸಿಡಿಎಸ್ ಮತ್ತು ಎಂಡಿಎಂಎಸ್ ಫಲಾನುಭವಿಗಳಿಗೆ ಈ ಕೂಡಲೇ ಉತ್ತಮ ಗುಣಮಟ್ಟದ ಹೆಚ್ಚುವರಿ ಪಡಿತರ ವಿತರಿಸಿ, ವಲಸಿಗರನ್ನೂ ಈ ಯೋಜನೆಗೆ ಸೇರಿಸಿಕೊಳ್ಳಿ ಮತ್ತು ಡಿಜಿಟಲೀಕರಣದ ಹೆಸರಲ್ಲಿ ಫಲಾನುಭವಿಗಳಿಗೆ ತೊಂದರೆ ಕೊಡುವುದನ್ನು ನಿಲ್ಲಿಸಿ. ಪೋಷಣ್ ಟ್ರ್ಯಾಕರ್, ಪೋಷಣ್ ವಟಿಕಾ, ಇತ್ಯಾದಿಗಳ ಹೆಸರಿನಲ್ಲಿ ಅಂಗನವಾಡಿ ನೌಕರರಿಗೆ ಕಿರುಕುಳ ಕೊಡುವುದನ್ನು ನಿಲ್ಲಿಸಿ ಎಂದರು.

ಪ್ರತಿಭಟನೆಯಲ್ಲಿ ಮಂಜುಳಾ, ರತ್ನವ್ವ, ರಮೇಶ್ ನಾಯ್ಕ, ಹೆಚ್. ಚಂದ್ರನಾಯ್ಕ, ಕೊಟ್ರೇಶ್ ಬಳಿಗಾನೂರು, ವಿಶಾಲಾಕ್ಷಮ್ಮ, ಗಂಗಮ್ಮ, ನಿಂಗಮ್ಮ, ಜಯಮ್ಮ, ಹೆಚ್. ರಾಧಾ, ಅನ್ನಪೂರ್ಣ, ಹೆಚ್. ವೀರಮ್ಮ, ಗೀತಮ್ಮ, ನಿರ್ಮಲ, ಭಾಗ್ಯ ಇನ್ನಿತರರಿದ್ದರು.

## ತೇನ್‌ಸಿಂಗ್ ನೋರ್ಗೆ ಅಡ್ವೆಂಚರ್ ಕ್ಲಬ್‌ಗೆ ಪದಾಧಿಕಾರಿಗಳ ಆಯ್ಕೆ



ದಾವಣಗೆರೆ, ಸೆ.24- ನಗರದ ತೇನ್‌ಸಿಂಗ್ ನೋರ್ಗೆ ಅಡ್ವೆಂಚರ್, ಟ್ರೆಕ್ಕಿಂಗ್ ಅಂಡ್ ನೇಚರ್ ಎಕ್ಸ್‌ಪಿಡೇಷನ್ ಕ್ಲಬ್ (ಟ್ಯಾಟ್‌ನೆಕ್) ದಾವಣಗೆರೆ ಸಂಸ್ಥೆಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಶಾಂತಕುಮಾರ್ ಜೆ.ಎಂ, ಉಪಾಧ್ಯಕ್ಷರಾಗಿ ಚೇತನ್ ಕೆ.ಎಸ್, ಗಿರೀಶ್ ಬಾಬು ಸಿ.ಎನ್ ಹಾಗೂ ಕಾರ್ಯದರ್ಶಿಯಾಗಿ ಕೊಟ್ರೇಶಿ ಎಸ್.ಎನ್. ಮತ್ತು ಜ್ಞಾನೇಶ್ವರ್ ಜವಳಿಯವರನ್ನು ಖಜಾಂಚಿಯಾಗಿ ಆಯ್ಕೆ ಮಾಡಲಾಯಿತು. ಉಳಿದಂತೆ ನಿರ್ದೇಶಕರಾಗಿ ವೀರೇಶ್ ಬಾಬು ಎಸ್, ಫಣಿರಾಜ್ ಬಿ, ಮಂಜು ಎಂ, ವಿರುಪಾಕ್ಷ ಜೆ, ಕೃಷ್ಣಸಾ ಪಿ.ಆರ್, ವೀರೇಶ್ ಎಸ್.ಎನ್, ರುದ್ರಮುನಿ ಜೆ.ಟಿ., ಗುರುಮೂರ್ತಿ ಟಿ.ಎಸ್. ಮುಂದುವರೆದಿದ್ದಾರೆ.

# ಸಿರಿಗೆರೆಯ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ

**(1ನೇ ಪುಟದಿಂದ)** ಎಂದರು. ಭರಮಸಾಗರ ಏತ ನೀರಾವರಿ ಯೋಜನೆಗೆ ಎಲ್ಲಾ ಪಕ್ಷದ ಮುಖ್ಯಮಂತ್ರಿಯವರು, ಮುಖಂಡರು ಶ್ರಮಿಸಿದ್ದಾರೆ. ಇದು ಬಹಳ ಅಪರೂಪದ ಯೋಜನೆಯಾಗಿದೆ. ಇದರಿಂದ ಭರಮಸಾಗರ ಕೆರೆ ಸಮುದ್ರೋಪಾದಿಯಲ್ಲಿ ತುಂಬಿ ಹರಿಯಲಿದೆ. ಈಗಿನ ಬೊಮ್ಮಾಯಿ ಸೇರಿದಂತೆ ಕುಮಾರಸ್ವಾಮಿ, ಸಿದ್ದರಾಮಯ್ಯ, ಯಡಿಯೂರಪ್ಪ ನವರನ್ನು ಕರೆಸಿ ಉದ್ಘಾಟನೆ ಮಾಡಿಸುವ ಸಂಕಲ್ಪ ಹೊಂದಲಾಗಿದೆ. ಈ ಮೂಲಕ ಪಕ್ಷಾತೀತವಾಗಿ ಅವರನ್ನು ವೇದಿಕೆಯಲ್ಲಿ ಕಾಣುವ ಆಸೆ ಇದೆ ಎಂದು ಆಕಾಂಕ್ಷೆ ವ್ಯಕ್ತಪಡಿಸಿದರು.

ಶಿಷ್ಯರೊಂದಿಗೆ ನೇರವಾಗಿ ಸಂವಾದ ಮಾಡಲು ವೆಬ್ ಅಪ್ಲಿಕೇಶನ್ ರೂಪಿಸಲಾಗಿದೆ. ನೇರವಾಗಿ ಈ ಜಾಲತಾಣದಲ್ಲಿ ಸಂಪರ್ಕಿಸಬಹುದು ಮಠದ ಸೂಚನೆಗಳು, ಚಟುವಟಿಕೆ ವೀಕ್ಷಿಸಬಹುದು ಎಂದರು.

ನಿವೃತ್ತ ಪ್ರಾಂಶುಪಾಲ ನಾ.ಲೋಕೇಶ್ ಒಡೆಯರ್ ಪ್ರಾಸ್ತಾವಿಕವಾಗಿ ಮಾತನಾಡಿ, ವೈಚಾರಿಕ ನೆಲಗಟ್ಟಿನ ಮೇಲೆ ರೂಪಿಸಿ ಕಂದಾಚಾರಗಳನ್ನು ಮೂಢನಂಬಿಕೆಗಳನ್ನು ಮೂಲೆ ಸೇರಿಸಿ ಬೃಹನ್ಮಠದ ಇತಿಹಾಸದಲ್ಲಿ ಅತ್ಯಂತ ಮುಖ್ಯ ಪಾತ್ರ ವಹಿಸಿದ್ದವರಲ್ಲಿ ಮೊದಲನೆಯವರು ಲಿಂಗೈಕ್ಯ ಗುರುಶಾಂತ ದೇಶಿಕೇಂದ್ರ ಸ್ವಾಮಿಗಳು, ಅವರು ಸಿರಿಗೆರೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಅಕಾಲಿಕ ಮರಣಕ್ಕೆ ಒಳಗಾದವರು. ಅವರ ದಿವ್ಯ ದೃಷ್ಟಿ ಫಲವಾಗಿ ಲಿಂ.ಶಿವಕುಮಾರ ಶಿವಾಚಾರ್ಯಸ್ವಾಮಿಗಳು ಮಠಕ್ಕೆ ಬಂದು, ಸವಾಲುಗಳನ್ನು ಎದುರಿಸಿ ಮಠ ಹೇಗಿರಬೇಕು ಎನ್ನುವುದನ್ನು ತೋರಿಸಿದ್ದರು ಎಂದು ಹೇಳಿದರು.

ಮಾಜಿ ಸಚಿವ ಹೆಚ್.ಆಂಜನೇಯ ಮಾತನಾಡಿದರು. ನಿವೃತ್ತ ಪೊಲೀಸ್ ಮಹಾನಿರ್ದೇಶಕ ಶಂಕರ್ ಬಿದರಿ 'ಜೀವನ ಚರಿತ್ರೆ' ಎಂಬ ಎರಡನೇ ಆವೃತ್ತಿಯ ಪುಸ್ತಕ ಬಿಡುಗಡೆ ಮಾಡಿದರು. ಸಾಣೇಹಳ್ಳಿ ಶಾಖಾ ಮಠದ ಡಾ.ಪಂಡಿತಾರಾಧ್ಯ ಸ್ವಾಮೀಜಿ, ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ, ಜಿ.ಮಂಜುನಾಥ್, ಎಸ್.ಬಿ ರಂಗನಾಥ್ ಇತರರು ಉಪಸ್ಥಿತರಿದ್ದರು.

## ಅಡಿಕೆ ವರ್ತಕರಿಂದ ಶಿವಕುಮಾರ ಶಿವಾಚಾರ್ಯ ಶ್ರೀಗಳಿಗೆ ಶ್ರದ್ಧಾಂಜಲಿ



**ಎಲೆಬೇತೂರು**

ದಾವಣಗೆರೆ, ಸೆ. 24- ನಗರದ ಅಡಿಕೆ ವರ್ತಕರಿಂದ ಲಿಂಗೈಕ್ಯ ಹಿರಿಯ ಜಗದ್ಗುರು ತರಳಬಾಳು ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳ 29ನೇ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಎಲೆಬೇತೂರಿನಲ್ಲಿ ಇಂದು ಆಚರಿಸಲಾಯಿತು.

ಅಡಿಕೆ ವರ್ತಕರು ತರಳಬಾಳು ಶ್ರೀಗಳ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.


ಮುದೇಗೌಡ್ರ ಗಿರೀಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಿಕಟಪೂರ್ವ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಬಿ.ವಾಮದೇವಪ್ಪ, ಮಠದ ಪರಂಪರೆ ಶ್ರೀಗಳ ಬಗ್ಗೆ ಮಾತನಾಡಿದರು. ಈ ಸಂದರ್ಭದಲ್ಲಿ ವರ್ತಕರಾದ ನಂದಿ ಬಸವರಾಜಪ್ಪ, ಪಿ.ಬಿ. ಪರಮೇಶ್ವರಪ್ಪ, ರಾಮ ಗೊಂಡನಹಳ್ಳಿ ಬಸವರಾಜ್, ಬನಶಂಕರಿ ಸದಾನಂದ, ರಾಮಗೊಂಡನಹಳ್ಳಿ ಜಯಣ್ಣ , ಬನಶಂಕರಿಯ ಶಂಕ್ರಣ್ಣ, ಕುಕ್ಕುವಾಡ ಸುರೇಂದ್ರಪ್, ಬಿ.ಕೆ.ಬಿ. ಸೋಮಣ್ಣ, ಪಾಂಡುಮಟ್ಟಿ ರವಿ, ವಿಠಲಾಪುರ ಕಿರಣ್, ಬೇತೂರು ಷಡಕ್ಷರಪ್ಪ, ದೊಗ್ಗಳ್ಳಿ ಶಿವಕುಮಾರ್ ಇನ್ನೂ ಮುಂತಾದ ಅಡಿಕೆ ವರ್ತಕರು ಉಪಸ್ಥಿತರಿದ್ದರು

# ‘ಸ್ವರ ಸಾಮ್ರಾಟ ಎಸ್.ಪಿ.ಬಾಲಸುಬ್ರಹ್ಮಣ್ಯಂ’ ಪುಸ್ತಕ ಲೋಕಾರ್ಪಣೆ

ದಾವಣಗೆರೆಯ ಪತ್ರಿಕೋದ್ಯಮದಲ್ಲಿ ಹಿರಿಯ ಪತ್ರಕರ್ತರೊಬ್ಬರು ಈಗಲೂ ಪುಸ್ತಕಗಳನ್ನು ಓದುತ್ತಿದ್ದಾರೆ ಹಾಗು ಬರೆಯು ತ್ತಿದ್ದಾರೆಂದರೆ ಅವರು ನಿಸ್ಸಂಶಯವಾಗಿ 'ಜಿಲ್ಲೆ ಸಮಾಚಾರ' ದಿನಪತ್ರಿಕೆಯ ಸಂಪಾದಕ ವಿ.ಹನುಮಂತಪ್ಪನವರು.

ಈ ಹಿಂದೆ 2017 ರಿಂದ ವರ್ಷಕ್ಕೊಂದರಂತೆ ಸತತವಾಗಿ ನಾಲ್ಕು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಈಗ ಲೋಕಾರ್ಪಣೆಗೆ ಸಿದ್ದಗೊಂಡಿರುವ ಪುಸ್ತಕ 'ಸ್ವರ ಸಾಮ್ರಾಟ ಎಸ್. ಪಿ. ಬಾಲಸುಬ್ರಹ್ಮಣ್ಯಂ'. ಎಸ್ಪಿಬಿ ಯಾರಿಗೆ ತಾನೇ ಗೊತ್ತಿಲ್ಲ. ಅಂದಿನ ದಿನ ಮಾನಗಳಲ್ಲಿ ಆಕಾಶವಾಣಿಯ ಮೂಲಕವೇ ಗಡಿನಾಡುಗಳನ್ನು ದಾಟಿದ ಅವರ ಧ್ವನಿ. ಅವರ ಕೊನೆ ಉಸಿರಿರುವ ತನಕವೂ ಏರಿಳಿತವನ್ನು ಕಾಣದೆ ಪಂಚಭಾಷೆಗಳಲ್ಲಿ ಧ್ವನಿ ಸಾಮ್ರಾಜ್ಯಕ್ಕೆ ಅಧಿಪತಿಯಾದವರು. ಗಾಯನದಲ್ಲಷ್ಟೇ ಅಲ್ಲದೆ, ನಟನೆ, ಸಂಗೀತ ಸಂಯೋಜನೆ, ಚಲನಚಿತ್ರ ನಿರ್ಮಾಣ, ಧ್ವನಿದಾನ, ಸಂಗೀತ ಕಾರ್ಯಕ್ರಮಗಳ ನಿರ್ವಹಣೆ ಮುಂತಾದವುಗಳಲ್ಲಿ ಅವರು ನಿರಂತರವಾದ ಸಾಧನೆ ಮಾಡಿದ್ದಾರೆ. ನಾಲ್ಕು ಭಾಷೆಗಳ ಗಾಯನಕ್ಕಾಗಿ ರಾಷ್ಟ್ರ ಪ್ರಶಸ್ತಿ ಪಡೆದ ಏಕೈಕ ವ್ಯಕ್ತಿ. ಶಾಸ್ತ್ರೀಯ ಸಂಗೀತವನ್ನು ಕಲಿಯದೇ ಸಂಗೀತ ಕ್ಷೇತ್ರದ ಸರ್ವತೋಮುಖ ಬೆಳವಣಿಗೆಗೆ ಅವರು ಹಾಡಿರುವ ನಾನಾ ಹಾಡುಗಳೇ ಬುನಾದಿ ಎಂದರೂ ತಪ್ಪಾಗಲಾರದು.

ಎಸ್ಪಿಬಿಗೂ ದಾವಣಗೆರೆಗೂ ಅವಿನಾಭಾವ ಸಂಬಂಧವನ್ನು ಬೆಸೆಯುವಂತೆ ಮಾಡಿದ ಕೀರ್ತಿ ಡಾ. ಸುರೇಶ್ ಹನಗವಾಡಿ ಅವರದ್ದು. ಅವರ ಹಿಮೋಫಿಲಿಯಾ ಸೊಸೈಟಿಗೆ ಮಹಾಪೋಷಕರಾಗಿದ್ದ ಎಸ್ಪಿಬಿ ದಾವಣಗೆರೆಗೆ ಬಂದಾಗ ಅವರಿಂದಲೇ ಅವರ ಜೀವನ ಪರಿಚಯದ ಪುಸ್ತಕಕ್ಕೆ ಹಸಿರು ನಿಶಾನೆ ಪಡೆದುಕೊಂಡಿದ್ದರು ವಿ. ಹನುಮಂತಪ್ಪ. ಆದರೆ, ವಿಧಿ ಪುಸ್ತಕ ಪೂರ್ಣಗೊಳ್ಳುವ ಮುಂಚೆ ಗಾನಲೋಕದಿಂದ ದೂರವಾದರು. ಆದರೆ, ವಿ. ಹನುಮಂತಪ್ಪ ಅವರು ಅಂದುಕೊಂಡಿದ್ದನ್ನು ಸಾಧಿಸುವ ಛಲದಿಂದ 'ಸ್ವರ ಸಾಮ್ರಾಟ' ಪುಸ್ತಕ ವನ್ನು ಎಸ್ಪಿಬಿಯವರು ನಮ್ಮಿಂದ ದೂರವಾದ ಒಂದು ವರ್ಷಕ್ಕೆ ಸರಿಯಾಗಿ ಪ್ರಕಟಿಸುತ್ತಿದ್ದಾರೆ.




**ನಗರದಲ್ಲಿ ಇಂದು**

ಈ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದಿರುವ ಸಂಗೀತ ನಿರ್ದೇಶಕ ಹಂಸಲೇಖ ಅವರು ಎಸ್ಪಿಬಿ ಯವರ ಅನೇಕ ಗುಣಗಳನ್ನು ಮುಕ್ತವಾಗಿ ಬರೆದಿ ದ್ದಾರೆ. ಅಲ್ಲದೆ 'ಅವರೊಂದು ಭುವಿಯ ಭಂಡಾರ ! ಶೃತಿಯ ಝೇಂಕಾರ '! ಎಂಬ ತಮ್ಮದೇ ಸಾಲಿನಿಂದ ವರ್ಣಿಸಿರುವ ಬಗೆ ಅನನ್ಯ. ಈ ಪುಸ್ತಕದಲ್ಲಿ ಎಸ್ಪಿಬಿಯವರ ಜೀವನ ಚರಿತ್ರೆಯಿಂದ ಹಿಡಿದು ಗಾನ ಚರಿತ್ರೆಯವರೆಗೂ ಎಷ್ಟು ವಿಷಯಗಳು ದಕ್ಕುತ್ತವೋ ಅಷ್ಟನ್ನು ಬಾಚಿಕೊಂಡು ದಾಖಲಿಸಿ ರುವುದು ಗಮನಾರ್ಹ ಅಂಶ. ಎಸ್ಪಿಬಿಯವರಿಗೆ ಕನ್ನಡದ ಹಾಡಿಗಾಗಿ ರಾಷ್ಟ್ರೀಯ ಪ್ರಶಸ್ತಿಯನ್ನು ತಂದು ಕೊಡುವ ದಾಖಲೆಯನ್ನು ಸೃಷ್ಟಿಸಿರುವ ಪಂಚಾಕ್ಷರಿ ಗವಾಯಿ ಕುರಿತ ಸಿನಿಮಾದ ನಿರ್ಮಾಪ ಕರು ಮತ್ತು ನಿರ್ದೇಶಕರು ದಾವಣಗೆರೆಯವರೇ ಎಂಬುದನ್ನು ದಾಖಲಿಸಿರುವ ಅಧ್ಯಾಯವು ಈ ಪುಸ್ತಕದ ಮತ್ತೊಂದು ಹೈಲೈಟ್ಸ್ ಎನ್ನಬಹುದು.


ಹಾಗೆ ಚಿತ್ರಲೋಕದ ಚಿತ್ರ ದಿಗ್ಗಜರಿಗೆ ಕಳೆದ ಐದು ದಶಕಗಳಿಂದ ಧ್ವನಿಯಾಗಿದ್ದ ಮತ್ತು ಸ್ನೇಹಿತನಾಗಿದ್ದ ಎಸ್ಪಿಬಿಯವರ ಅಮೋಘ ಚಿತ್ರ ಗಳನ್ನು ಈ ಪುಸ್ತಕದಲ್ಲಿ ನೋಡುವುದೇ ಸೊಗಸು. ಅಂದ ಹಾಗೆ ಇನ್ನೊಂದು ಮಹತ್ವ ಪೂರ್ಣ ಹೆಜ್ಜೆ ಎಂದರೆ ಎಸ್ಪಿಬಿಯವರ ಎದೆ ತುಂಬಿ ಹಾಡುವೆನು ಕಾರ್ಯಕ್ರಮದಲ್ಲಿ ಜೊತೆಯಾಗಿದ್ದ ಕವಿ ಜಯಂತ್ ಕಾಯ್ಕಿಣಿ ಬೆನ್ನುಡಿಯಲ್ಲಿ ತಮ್ಮ ಹಸ್ತಾಕ್ಷರಗಳಲ್ಲಿ

'ನಮ್ಮ ಶ್ರವಣ ಸಂಸ್ಕೃತಿಯನ್ನು ರೂಪಿಸಿರುವ ಮೇರು ಧ್ವನಿ ಎಸ್ಪಿಬಿ' ಎನ್ನುತ್ತಲೇ ಈ ಕೃತಿಯ ಘನತೆಯನ್ನು ಎತ್ತಿಹಿಡಿದಿದ್ದಾರೆ. ಇಂತಹ ಅಪರೂಪದ ಕೃತಿಯೊಂದು ದಾವಣಗೆರೆಯಲ್ಲಿ ಓದುಗರಿಗೆ ಲಭ್ಯವಿದೆ. ಈ ಪುಸ್ತಕವನ್ನು ನಾವುಗಳು ಕೊಂಡು ಓದಿದರೆ, ನಮ್ಮ ಕರ್ಣಗಳಿಗೆ ನಾದವನ್ನು ಹದವಾಗಿ ಕಾಯಿಸಿ ಇಷ್ಟು ವರ್ಷಗಳಿಂದ ಹನಿಹನಿಯಾಗಿ ತೊಟ್ಟಿಕ್ಕಿಸಿದ ಆ ಮಹಾನ್ ಗಾಯಕನಿಗೆ ನಮಿಸಿದಂತಾಗುತ್ತದೆ.

ಇಂದು ಸಂಜೆ 5 ಕ್ಕೆ ಕುವೆಂಪು ಕನ್ನಡ ಭವನದಲ್ಲಿ 'ಸ್ವರ ಸಾಮ್ರಾಟ ಎಸ್ .ಪಿ. ಬಾಲಸುಬ್ರಹ್ಮಣ್ಯಂ' ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮವಿದೆ. ತಾವು ಬನ್ನಿ...

**- ಪಾಪು ಗುರು, ದಾವಣಗೆರೆ.**

## ಸಿದ್ಧಗಂಗಾ ಶ್ರೀಗಳಿಗೆ ಭಾರತ ರತ್ನ ನೀಡಿ



ದಾವಣಗೆರೆ, ಸೆ.23- ಕರ್ನಾಟಕ ಸರ್ಕಾರ ಶ್ರೀಗಳ ಹುಟ್ಟುಹಬ್ಬವನ್ನು ದಾಸೋಹ ದಿನವಾಗಿ ಪ್ರಕಟಿಸಿರುವುದಕ್ಕೆ ಶ್ರೀ ಸಿದ್ಧಗಂಗಾ ಮಕ್ಕಳ ಲೋಕದ ಸಂಸ್ಥಾಪಕ ಕೆ.ಎನ್. ಸ್ವಾಮಿ ಅಭಿನಂದನೆ ಸಲ್ಲಿಸಿದ್ದಾರೆ.

ಬಡಮಕ್ಕಳ ಕಾಮಧೇನು, ಕಲ್ಪವೃಕ್ಷವಾಗಿ 111 ವರ್ಷ ಶ್ರೀಮಠದ ಘನತೆ, ಗೌರವವನ್ನು ಹೆಚ್ಚಿಸಿದ ಲಕ್ಷ ಲಕ್ಷ ಮಕ್ಕಳ ಪಾಲಿಗೆ ನಡೆದಾಡುವ ದೇವರಾಗಿದ್ದ ಶ್ರೀಗಳ ಸಾಧನೆಯನ್ನು ಪಠ್ಯಪುಸ್ತಕದಲ್ಲಿ ಸೇರಿಸಬೇಕು ಎಂದು ಅವರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ ಹಾಗೂ ಸಿದ್ಧಗಂಗಾ ಶ್ರೀಗಳಿಗೆ ಭಾರತ ರತ್ನ ಪ್ರಶಸ್ತಿಗೆ ರಾಜ್ಯ ಸರ್ಕಾರ ಶಿಫಾರಸ್ಸು ಮಾಡುವಂತೆ ಮನವಿ ಮಾಡಿದ್ದಾರೆ.

# ಅವಿವಾಹಿತ ಮಹಿಳೆಯರು ರಕ್ಷಣಾ, ನೌಕಾ ಅಕಾಡೆಮಿ ಪರೀಕ್ಷೆಗೆ ಹಾಜರಾಗಲು ಅನುಮತಿ

ನವದೆಹಲಿ, ಸೆ. 24 – ಅವಿವಾಹಿತ ಮಹಿಳೆಯರು ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್.ಡಿ.ಎ.) ಹಾಗೂ ನೌಕಾ ಅಕಾಡೆಮಿ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಲಾಗಿದೆ ಎಂದು ಯು.ಪಿ.ಎಸ್.ಸಿ. ತಿಳಿಸಿದೆ.


ಸುಪ್ರೀಂ ಕೋರ್ಟ್ ಕಳೆದ ತಿಂಗಳು ಈ ಬಗ್ಗೆ ನಿರ್ದೇಶನ ನೀಡಿತ್ತು. ಮಹಿಳೆಯರು ಸೆಪ್ಟೆಂಬರ್ 24ರಿಂದ ಅಕ್ಟೋಬರ್ 6ರ ನಡುವೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ನವೆಂಬರ್ 14ರಂದು ಪರೀಕ್ಷೆ ನಡೆಯಲಿದೆ.

ರಕ್ಷಣಾ ಅಕಾಡೆಮಿ ಹಾಗೂ ನೌಕಾ ಅಕಾಡೆಮಿಗಳಿಗೆ ನಡೆಸಲಿರುವ ಪರೀಕ್ಷೆ ಹಂಗಾಮಿಯಾಗಿರಲಿದೆ. ನ್ಯಾಯಾಲಯಗಳಲ್ಲಿ ಬಾಕಿ ಇರುವ ಅರ್ಜಿಗಳ ವಿಲೇವಾರಿ ನಂತರ ಅಂತಿಮ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಲಾಗಿದೆ.

## ನಗರದಲ್ಲಿ ನಾಳೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಸಭೆ

ದಾವಣಗೆರೆ, ಸೆ.24- ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಕಾರ್ಯಕಾರಿ ಸಮಿತಿಯ ಮಾಸಿಕ ಸಭೆಯು ನಾಡಿದ್ದು ದಿನಾಂಕ 26ರ ಭಾನುವಾರ ಬೆಳಿಗ್ಗೆ 11 ಕ್ಕೆ ಭಾರತ ಸೇವಾದಳ ಭವನದಲ್ಲಿ ನಡೆಯಲಿದೆ ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಬಿ.ಪರಮೇಶ್ವರಪ್ಪ ತಿಳಿಸಿದ್ದಾರೆ.

# 60ರ ಸಂಭ್ರಮದಲ್ಲಿ ಆರ್.ಎಲ್. ಪ್ರಭಾಕರ್



ದಾವಣಗೆರೆ, ಸೆ. 24 - ನಗರದ ಆರ್ಯವೈಶ್ಯ ಮಹಾಸಭಾ ಪ್ರಧಾನ ಕಾರ್ಯದರ್ಶಿ, ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನದ ಸಂಘದ ಅಧ್ಯಕ್ಷರೂ, ಶ್ರೀ ಕನ್ನಿಕಾ ಪರಮೇಶ್ವರಿ ಕೋ - ಆಪ್ ಬ್ಯಾಂಕ್ ನಿರ್ದೇಶಕರೂ ಆದ ಆರ್.ಎಲ್. ಪ್ರಭಾಕರ್ ಅವರ 60ನೇ ವರ್ಷದ ಜನ್ಮದಿನವನ್ನು ಸಂಭ್ರಮದಿಂದ ಆಚರಿಸಲಾಯಿತು.

ಶ್ರೀ ಕನ್ನಿಕಾಪರಮೇಶ್ವರಿ ಬ್ಯಾಂಕ್‌ನ ಜ್ಞಾನದೇಗುಲ ಸಭಾಂಗಣದಲ್ಲಿ ಇಂದು ಏರ್ಪಾಡಾಗಿದ್ದ ಕಾರ್ಯಕ್ರಮದಲ್ಲಿ ಪ್ರಭಾಕರ್ ಹಾಗೂ ಜ್ಯೋತಿ ದಂಪತಿಯನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀ ಕನ್ನಿಕಾಪರಮೇಶ್ವರಿ ಬ್ಯಾಂಕ್ ಅಧ್ಯಕ್ಷ ಆರ್.ಜಿ. ಶ್ರೀನಿವಾಸ ಮೂರ್ತಿ, ಉಪಾಧ್ಯಕ್ಷರಾದ ಆರ್.ಎನ್. ಸುಜಾತ, ನಿರ್ದೇಶಕ ಕಾಸಲ್ ಎಸ್. ಸತೀಶ್, ಎನ್. ಕಾಶೀನಾಥ್, ಕೆ.ಎನ್. ಅನಂತರಾಮ ಶೆಟ್ಟಿ, ಎ.ಎಸ್. ಸತ್ಯನಾರಾಯಣ ಸ್ವಾಮಿ, ಕೆ.ವಿ. ಮಂಜುನಾಥ್, ಜೆ. ರವೀಂದ್ರ ಗುಪ್ತ, ಬಿ.ಎಸ್. ಶಿವಾನಂದ, ವೈ.ಬಿ. ಸತೀಶ್, ಬಿ.ಎಸ್. ರಾಘವೇಂದ್ರ ಶೆಟ್ಟಿ, ಕೆ.ಎಂ. ಗೀತಾರಾಂ, ಜಿ. ಶ್ರೀಧರ್, ಆರ್. ನಾಗರಾಜ ಶೆಟ್ಟಿ, ಪ್ರಧಾನ ವ್ಯವಸ್ಥಾಪಕ ಪ್ರಶಾಂತ್ ಪಡಗಲ್, ಸಹಾಯಕ ಪ್ರಧಾನ ವ್ಯವಸ್ಥಾಪಕ ಭೀಮಾನಂದ ಶೆಟ್ಟಿ, ಶಾಖಾ ವ್ಯವಸ್ಥಾಪಕ ಎಸ್.ಆರ್. ವಿಜಯ್ ಕುಮಾರ್, ಎನ್. ಪ್ರಸಾದ್, ಬ್ಯಾಂಕ್ ಇನ್ ಚಾರ್ಜ್ ಸಂದೇಶ್ ಟೀಕ, ಬ್ಯಾಂಕ್ ಸಲಹೆಗಾರ ಅಂಬಿಕಾಪತಿ ಶೆಟ್ಟಿ, ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನ ಸಂಘದ ಗೌರವಾಧ್ಯಕ್ಷ ಆರ್.ಎಸ್. ನಾರಾಯಣಸ್ವಾಮಿ, ಸಹ ಕಾರ್ಯದರ್ಶಿ ಸತ್ಯನಾರಾಯಣಸ್ವಾಮಿ, ಖಜಾಂಚಿ ವೆಂಕಟಾಚಲಪತಿ, ಛೇರ್ಮನ್ ಬಿ.ಎನ್. ಮಂಜುನಾಥ, ಆ.ಪೋ.ಪ. ಕಾರ್ಯದರ್ಶಿ ಕೆ.ಎನ್. ಗುಪ್ತ ಮತ್ತಿತರರು ಉಪಸ್ಥಿತರಿದ್ದರು.

## ಕುಂಬಳೂರು : ಲಿಂ. ಶ್ರೀಗಳ ಶ್ರದ್ಧಾಂಜಲಿ



ಮಲೇಬೆನ್ನೂರು, ಸೆ.24- ಕುಂಬಳೂರು ಗ್ರಾಮದಲ್ಲಿ ಶುಕ್ರವಾರ ಸಿರಿಗೆರೆ ತರಳಬಾಳು ಬೃಹನ್ಮಠದ ಲಿಂಗೈಕ್ಯ ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮೀಜಿ ಅವರ 29ನೇ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಆಚರಿಸಲಾಯಿತು. ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ವಿಶೇಷ ಪೂಜೆ ಸಲ್ಲಿಸಿದ ಗ್ರಾಮಸ್ಥರು ನಂತರ ಪ್ರಸಾದ ವಿತರಿಸಿದರು.

# ಮಲೇಬೆನ್ನೂರಿನ ಪ್ರೌಢಶಾಲೆ ಎಸ್‌ಡಿಎಂಸಿಗೆ ಆಯ್ಕೆ

ಮಲೇಬೆನ್ನೂರು, ಸೆ.24- ಹಿಂದಿನ ಎಲ್ಲಾ ಕಹಿ ಘಟನೆಗಳನ್ನು ಮರೆತು ಪಟ್ಟಣದ ಸರ್ಕಾರಿ ಪಿಯು ಕಾಲೇಜಿನ ಪ್ರೌಢಶಾಲಾ ವಿಭಾಗದ ನೂತನ ಎಸ್‌ಡಿಎಂಸಿ ಸದಸ್ಯರು ಆಯ್ಕೆಯಾಗಲು ಎಲ್ಲಾ ಪೋಷಕರು ಹಾಗೂ ಪರಿಷತ್ತಿನ ಸದಸ್ಯರು ಸಹಕರಿಸಿ ಮಾದರಿಯಾಗಿದ್ದಾರೆ ಎಂದು ಉಪ ಪ್ರಾಚಾರ್ಯ ಎಚ್. ಹನುಮಂತಪ್ಪ ಮೆಚ್ಚುಗೆ ವ್ಯಕ್ತ ಪಡಿಸಿದರು.

ಶಾಲೆಯ ಎಸ್‌ಡಿಎಂಸಿ ಸದಸ್ಯರ ಆಯ್ಕೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಹಿಂದೆ ಎಚ್. ವಿಶ್ವನಾಥ್ ಶಿಕ್ಷಣ ಸಚಿವರಾದಾಗ ಹಳ್ಳಿಯ ಸ್ಥಿತಿ ಕಂಡು ಶಾಲೆಗೆ ಪೋಷಕರೇ ಸದಸ್ಯರನ್ನು ಆಯ್ಕೆ ಮಾಡಿದರೆ, ಶಾಲೆಯ ಅಭಿವೃದ್ಧಿ ಸಾಧ್ಯವೆಂದು ಮನಗಂಡು ಆದೇಶ ಮಾಡಿದ್ದರ ಪರಿಣಾಮ ಈ ವ್ಯವಸ್ಥೆ ಜಾರಿಗೆ ಬಂದಿದೆ ಎಂದರು.

ಶಾಲೆಯಲ್ಲಿ ದಾಖಲಾದ ಎಂಟು, ಒಂಭತ್ತು ಮತ್ತು ಹತ್ತನೇ ತರಗತಿಯ ಒಟ್ಟು 334 ಕನ್ನಡ ಮತ್ತು ಆಂಗ್ಲ ಮಾಧ್ಯಮ ವಿದ್ಯಾರ್ಥಿಗಳಿದ್ದು, ಮೀಸಲಾತಿಯಂತೆ ಮಹಿಳೆ, ಪುರುಷ, ಅಲ್ಪಸಂಖ್ಯಾತರು, ಪ.ಜಾ. ಸೇರಿದಂತೆ ಎಲ್ಲರಿಗೂ ಆದ್ಯತೆ ನೀಡಿ ಸದಸ್ಯರು ಆಯ್ಕೆಯಾಗುವಂತೆ ಗಮನ ಹರಿಸಬೇಕೆಂದು ಸಭೆಯ ಆರಂಭದಲ್ಲಿ ಹನುಮಂತಪ್ಪ ತಿಳಿಸಿದರು.

ಶಿಕ್ಷಕರು ಕೊಠಡಿ ಹೊರಗೆ ತೆರಳಿದ ನಂತರ ಸುಮಾರು ಮೂರು ಗಂಟೆಗಳ ಕಾಲ ಎಲ್ಲಾ ಮಹಿಳಾ, ಅಲ್ಪಸಂಖ್ಯಾತರು, ಪುರುಷ ಪೋಷಕರು ಪ್ರತ್ಯೇಕ ಗುಂಪಿನಲ್ಲಿ ಚರ್ಚಿಸಿ ಅವಿರೋಧ ಆಯ್ಕೆಯಾದ ಒಂಭತ್ತು ಜನರ ಪಟ್ಟಿಯನ್ನು ಉಪ ಪ್ರಚಾರ್ಯರಿಗೆ ನೀಡಿದರು.

ಶಾಲೆಯ ಹಿರಿಯ ಶಿಕ್ಷಕ ಸುರೇಶ್ ಮೂಲಿಮನಿ, ಹಾಲಪ್ಪ, ರಾಮಪ್ಪ ಮತ್ತಿತರರು ಚುನಾವಣಾ ಪ್ರಕ್ರಿಯೆ ತಿಳಿಸಿದರು. ಆಯಿಷಾ, ಆಸ್ಮಾಬಾನು ವರದಿ ದಾಖಲಿಸಿದರು.

ಪಟ್ಟಣದ ಎಂ.ಬಿ. ರುಸ್ತುಂ ಅಲಿ, ಒ.ಜಿ. ಮಂಜುನಾಥ್, ಪಿ. ಬೀರಪ್ಪ, ಆಶಿಕ್‌ಅಲಿ, ಅಬುಸಾಲೇಹ, ಪವಿತ್ರಾ, ಲತಾ, ಕೆ.ಬಿ. ಚಂದ್ರಮ್ಮ ಮತ್ತು ಎಚ್.ಎಂ. ಸದಾನಂದ ಕುಂಬಳೂರು ಎಸ್‌ಡಿಎಂಸಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.


# ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ದಾವಣಗೆರೆ ಸಿಟಿ ಯಲ್ಲಮ್ಮನಗರ ಕಣಗಳ ನಿವೇಶನಗಳ ಪ್ರದೇಶದಲ್ಲಿ ಈ ಹಿಂದೆ ದಾವಣಗೆರೆ ನಗರಸಭೆಯವರು ವಿಂಗಡಿಸಿದ ಕಣ ಸಂಖ್ಯೆ 14ರ ಪಶ್ಚಿಮದ ಕಡೆಗೆ ಇರುವ ಸೊತ್ತನ್ನು ನನ್ನ ಕಕ್ಷಿಗಾರರಾದ **ಶ್ರೀ ಹೆಚ್.ಕೆ.ಅಣ್ಣಪ್ಪ,** ಇವರು ಕ್ರಯಪತ್ರದ ಮೂಲಕ ಮಾಲೀಕರಾದ **ಶ್ರೀ ಜಗದೀಶ್** ಇವರಿಂದ ಪಡೆದುಕೊಂಡಿರುತ್ತಾರೆ. ಸದರಿ ಕಣದ **ನಿವೇಶನ ಸಂಖ್ಯೆ 14ರ** ಪಶ್ಚಿಮಕ್ಕೆ ಇರುವ ನಿವೇಶನ ಸಂಖ್ಯೆ 13ರ ಮಾಲೀಕರುಗಳು ತಮ್ಮ ಸೊತ್ತು ದಾಖಲೆಗಳಲ್ಲಿ **100’ X 100’** ಇದ್ದರೂ ಸ್ಥಳದಲ್ಲಿ **125’ X100’** ವಿಸ್ತೀರ್ಣ ಹೊಂದಿದೆಯೆಂದು ಆಧಾರರಹಿತ ಹಕ್ಕು ಹಾಗೂ ಕಲ್ಪನಾಧಾರದಿಂದ ಕೂಡಿದ ಸುಳ್ಳು ಹಕ್ಕು ಸಾಧಿಸುತ್ತಾ, ಸದರಿ ಸೊತ್ತಿನ ಪೂರ್ವದ ಕಡೆಯ **25’ X 100’** ಆಸ್ತಿಯನ್ನು ತಮ್ಮ ಸೊತ್ತಿನ ಒಂದು ಭಾಗವೆಂದು ಅಕ್ರಮ, ಸುಳ್ಳು ಹಾಗೂ ಕಾನೂನು ಬಾಹಿರ ಹಕ್ಕು ಕೋರುತ್ತಾ ದೌರ್ಜನ್ಯದಿಂದ ತಮ್ಮ ಅಕ್ರಮ ಕೂಟದ ಅನುಚರರೊಂದಿಗೆ ಹಾಗೂ ರಾಜಕೀಯ ಬಲಾಢ್ಯರೊಂದಿಗೆ ಕಾನೂನು ವಿರೋಧಿ ಕೃತ್ಯಗಳನ್ನು ಎಸಗುವ ನಿಟ್ಟಿನಲ್ಲಿ ನಮ್ಮ ಕಕ್ಷಿದಾರರ ಪಶ್ಚಿಮ ಕಾಂಪೌಂಡ್ ಗೋಡೆಯನ್ನು ಈ ಹಿಂದೆ ದಿನಾಂಕ: 19-1-2019 ರ ಮಧ್ಯ ರಾತ್ರಿ ದೌರ್ಜನ್ಯದಿಂದ ಜೆಸಿಬಿ ಹಾಗೂ ಟಿಪ್ಪರ್ ಲಾರಿಗಳನ್ನು ತಂದು ಒಡೆದು ಹಾಕಿ ನನ್ನ ಕಕ್ಷಿಗಾರರಿಗೆ ಸಾವಿರಾರು ರೂಪಾಯಿ ನಷ್ಟವುಂಟು ಮಾಡಿ, ಇಲ್ಲದ ಹಕ್ಕನ್ನು ಸಾಧಿಸುವ ತರದೂದಿನಲ್ಲಿದ್ದರು. ಆಗ ನನ್ನ ಕಕ್ಷಿದಾರರಾದ **ಶ್ರೀಮತಿ ದೀಪಶ್ರೀ ಕೋಂ. ಹೆಚ್.ಎ. ಸಿದ್ದರಾಜು, ಮತ್ತು ಶ್ರೀ ಹೆಚ್.ಎ. ಸಿದ್ದರಾಜು, ಶ್ರೀ ಪಿ. ನಾಗರಾಜ್** ಹಾಗೂ **ಶ್ರೀ ಪಿ.ಎಸ್. ಜಗದೀಶ್** ಇವರುಗಳ ವಿರುದ್ಧ ದಾವಣಗೆರೆಯ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ **ಅಸಲು ದಾವೆ ಸಂಖ್ಯೆ: 124/2019** ಹೂಡಿ ಹಂಗಾಮಿ ನಿರ್ಬಂಧಕಾಜ್ಞೆಯನ್ನು ಪಡೆದುಕೊಂಡಿದ್ದು, ಸದರಿಯವರು ನ್ಯಾಯಾಲಯದಲ್ಲಿ ಹಾಜರಾಗಿದ್ದು, ಅದು ಇನ್ನೂ ಚಾಲ್ತಿಯಲ್ಲಿರುತ್ತದೆ. ಹೀಗಿದ್ದಾಗ್ಯೂ ಸದರಿ **ಶ್ರೀ ಪಿ. ನಾಗರಾಜ್ ಹಾಗೂ ಇತರೆಯವರು** ಈಗ್ಗೆ 2 ದಿವಸಗಳಿಂದ ನನ್ನ ಕಕ್ಷಿಗಾರರ ಸೊತ್ತಿನ ಪಶ್ಚಿಮಕ್ಕೆ ಇರುವ ತಮ್ಮದಲ್ಲದ ಸೊತ್ತನ್ನು ತಮ್ಮದೆಂದು ಅಕ್ರಮವಾಗಿ ಸಾರುತ್ತಾ, ಅದನ್ನು ಸ್ವಚ್ಛಗೊಳಿಸಿ ಬೇರೆಯವರಿಗೆ ಸುಳ್ಳು ದಾಖಲೆಗಳು ಹಾಗೂ ಅಳತೆಗಳನ್ನು ತೋರಿಸುತ್ತಾ ವಾಸ್ತವದಲ್ಲಿ ಅವರಿಗಿರುವ ಸೊತ್ತಿಗಿಂತ ಹೆಚ್ಚಿನ ಸೊತ್ತನ್ನು ತಮ್ಮದೆಂದು ಅಕ್ರಮವಾಗಿ ಹಾಗೂ ಕಾನೂನು ಬಾಹಿರವಾಗಿ ಹೇಳಿಕೊಳ್ಳುತ್ತಾ ಮಾರಾಟ ಮಾಡುವ ತರದೂದಿನಲ್ಲಿದ್ದಾರೆಂದು ತಿಳಿದು ಬಂದಿರುತ್ತದೆ. ಈ ರೀತಿ ಮಾಡಲು ಅವರಿಗೆ ಯಾವುದೇ ಹಕ್ಕು, ಸ್ವಾಧೀನ ಅಧಿಕಾರವಿರುವುದಿಲ್ಲ. ಕಾರಣ ಸಾರ್ವಜನಿಕರು ಯಾರೂ ಸದ್ರಿ **ಶ್ರೀ ಪಿ. ನಾಗರಾಜ್ ಬಿನ್ ಲೇಟ್ ಶ್ರೀ ಪಲ್ಲಾಗಟ್ಟೆ ಶಂಕರಪ್ಪ** ಹಾಗೂ ಅವರ ಸೋದರ ಸಂಬಂಧಿಗಳ ಜೊತೆಗೆ ಈ ಬಗ್ಗೆ ಯಾವುದೇ ವ್ಯವಹರಣೆಯನ್ನು ಮಾಡಬಾರದು.

ಮಾಡಿದಲ್ಲಿ ಅವರೇ ತಪ್ಪಿತಸ್ಥರು ಹಾಗೂ ಜವಾಬ್ದಾರರಾಗಿರುತ್ತಾರೆ ಹಾಗೂ ಅಂತಹ ಯಾವುದೇ ವ್ಯವಹರಣೆ ಅಕ್ರಮ ಮತ್ತು ಕಾನೂನುಬಾಹಿರ. ಹಾಗಾಗಿ ಅವು ನನ್ನ ಕಕ್ಷಿದಾರರಿಗೆ ಹಾಗೂ ಅವರ ಆಸ್ತಿಗಳಿಗೆ ಯಾವುದೇ ರೀತಿಯಿಂದಲೂ ಪ್ರತಿಬಂಧಿಸುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ. ಅಷ್ಟೇ ಅಲ್ಲದೇ, ಸದರಿ ನಿವೇಶನ ಸಂಖ್ಯೆ 13 ರ ಮಾಲೀಕರೆಂದು ಹೇಳಿಕೊಳ್ಳುವ ಅವರ ನಿವೇಶನದ ದಾಖಲೆಗಳ ಅಳತೆಗಿಂತ ಹೆಚ್ಚಿನ ಅಳತೆಯ ನಿವೇಶನವನ್ನು ತಮ್ಮದೆಂದು ಅಕ್ರಮವಾಗಿ ಬಿಂಬಿಸುತ್ತಾ ಸಾರ್ವಜನಿಕರನ್ನು ತಪ್ಪು ದಾರಿಗೆಳೆಯುತ್ತಿದ್ದಾರೆ. ಸದರಿ ನಿವೇಶನದ ಬಗ್ಗೆ ಈ ಹಿಂದೆಯೇ ಕರ್ನಾಟಕದ ಉಚ್ಚ ನ್ಯಾಯಾಲಯದ **ರಿಟ್ ಅರ್ಜಿ ಸಂಖ್ಯೆ 12739/08** ಹಾಗೂ **WA 536/2009** ರಲ್ಲಿ ತೀರ್ಮಾನವಾಗಿದ್ದರೂ ಸಹ ಕೇವಲ ಕಲ್ಪನೆಯಿಂದ, ಅಕ್ರಮವಾದ ಹಕ್ಕುಗಳನ್ನು ಮುಂದೊಡ್ಡಿದ ಕಾರಣ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಯಾರೂ ಸದರಿ ಕಣದ ನಿವೇಶನ ಸಂಖ್ಯೆ 13 ರ ಪೂರ್ವದ ಕಡೆಗೆ ಮೇಲೆ ಹೇಳಿದ ಮಾಲೀಕರು ಹೇಳುವಂತೆ **25’ X 100’** ಆಸ್ತಿಯನ್ನು ಅಳತೆಯ ಆಸ್ತಿ ಸ್ಥಳದಲ್ಲಿಲ್ಲದ್ದರ ಕಾರಣ ಸದರಿಯವರೊಂದಿಗೆ ವ್ಯವಹರಿಸಿ, ತೊಂದರೆಗೆ ಒಳಗಾಗಬಾರದೆಂದು ಈ ಮೂಲಕ ತಿಳಿಸುತ್ತಿದ್ದೇವೆ.

**ದಾವಣಗೆರೆ**
**ದಿನಾಂಕ: 24-09-2021**

**ಮಲ್ಲಿಕಾರ್ಜುನ ಕಣವಿ,** ಬಿ.ಎ, ಎಲ್ ಎಲ್ .ಎಂ.
**ವಕೀಲರು, ನಂ.5 & 6, 1ನೇ ಅಂತಸ್ತು, ದಾವಣಗೆರೆ ಆಟೋಮೊಬೈಲ್ ಸೊಸೈಟಿ ಕಾಂಪ್ಲೆಕ್ಸ್, ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ-577006.**

## ಪೋಷಣ ಅಭಿಯಾನದ ವಿನೂತನ ಕಾರ್ಯಕ್ರಮ 'ಸಮುದಾಯ ಜಾಗೃತಿ'



ದಾವಣಗೆರೆ, ಸೆ. 24- ಇಲ್ಲಿನ ವಿನೋಬನಗರ ಕ್ಲಸ್ಟರ್‌ನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರೀಯ ಪೋಷಣ ಅಭಿಯಾನ ಕುರಿತ ವಿನೂತನ ಕಾರ್ಯಕ್ರಮ 'ಸಮುದಾಯ ಜಾಗೃತಿ'ಗೆ ಚಾಲನೆ ನೀಡಲಾಯಿತು. ದಕ್ಷಿಣ ವಲಯದ ಕ್ಷೇತ್ರ ಸಮನ್ವಯಾಧಿಕಾರಿ ಶ್ರೀಮತಿ ಉಮಾದೇವಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮುಖ್ಯ ಶಿಕ್ಷಕರಾದ ಶ್ರೀಮತಿ ಎಸ್. ಶೋಭಾ, ಸಹ ಶಿಕ್ಷಕರುಗಳು, ಎಸ್‌ಡಿಎಂಸಿ ಅಧ್ಯಕ್ಷ ಹೆಚ್. ಎಂ. ರುದ್ರಪ್ಪ, ಉಪಾಧ್ಯಕ್ಷರಾದ ಉಷಾ ಮತ್ತಿತರರು ಉಪಸ್ಥಿತರಿದ್ದರು.

## ಪೌರ ಕಾರ್ಮಿಕರಿಗೆ ಸೀರೆ, ಊಟ



ದಾವಣಗೆರೆ, ಸೆ.24- ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹುಟ್ಟುಹಬ್ಬದ ಅಂಗವಾಗಿ ಹಾಗೂ ಪೌರ ಕಾರ್ಮಿಕರ ದಿನಾಚರಣೆ ಪ್ರಯುಕ್ತ ನಗರದ ಕೆ.ಆರ್. ಮಾರ್ಕೆಟ್ ಗಣೇಶ ದೇವಸ್ಥಾನದ ಹತ್ತಿರ ಪೌರ ಕಾರ್ಮಿಕ ಹೆಣ್ಣು ಮಕ್ಕಳಿಗೆ ಸೀರೆ ವಿತರಣೆ ಮತ್ತು ಊಟದ ವ್ಯವಸ್ಥೆ ಮಾಡಲಾಯಿತು.

ಪಾಲಿಕೆ ವಿರೋಧ ಪಕ್ಷದ ನಾಯಕ ಎ. ನಾಗರಾಜ್ ಪೌರ ಕಾರ್ಮಿಕರನ್ನು ಅಭಿನಂದಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್, ಪಾಲಿಕೆ ಸದಸ್ಯರಾದ ಚಮನ್‌ಸಾಬ್, ಸಾವನ್ ಜೈನ್, ಕಂಟ್ರ್ಯಾಕ್ಟರ್ ವಿಜಯ್ ಕುಮಾರ್ ಹುಲ್ಮನಿ, ಎಸ್‌ಓಜಿ ಕಾಲೋನಿ ಪಾಲಿಕೆ ಸದಸ್ಯ ನಾಗರಾಜ್, ಜಗದೀಶ್, ಶಂಭುಲಿಂಗಪ್ಪ, ರುದ್ರೇಶ್, ರವಿ, ಶಿವು ಶೆಟ್ಟಿ, ಮೇಘರಾಜ್, ಹೆಚ್.ಡಿ. ಮೊಯಿನ್ ಖಾನ್, ಚಂದ್ರಣ್ಣ, ನಾಗರಾಜ್ ಗೌಳಿ, ನಾರಾಯಣಿ, ಸಂತೋಷ್, ಯುವರಾಜ್, ಗಂಗಾಧರ್, ಪವನ್ ಕುಮಾರ್, ಜೈದೇವ್, ಕಾರ್ಮಿಕರಿಗೆ ಊಟದ ವ್ಯವಸ್ಥೆ ಹಾಗೂ ಸಿಹಿ ಹಂಚಿದರು.

## ರಾಷ್ಟ್ರ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಪದಕ



ದಾವಣಗೆರೆ, ಸೆ.24 - ನಗರದಲ್ಲಿ ಈಚೆಗೆ ನಡೆದ ರಾಷ್ಟ್ರ ಮಟ್ಟದ ಓಪನ್ ಇ-ಕತಾ ಚಾಂಪಿಯನ್ ಶಿಪ್ (ಆನ್‌ಲೈನ್ ) ಸ್ಪರ್ಧೆಯಲ್ಲಿ ನಗರದ ಶ್ರೀ ಸದ್ಗುರು ಬ್ರಹ್ಮಚೈತನ್ಯ ಮಂದಿರದ ವೈ.ಆರ್ ಕರಾಟೆ ಅಂಡ್ ಸೆಲ್ಫ್ ಡಿಫೆನ್ಸ್ ಶಾಲೆಯ 12 ವಿದ್ಯಾರ್ಥಿಗಳು ಕತಾ ವಿಭಾಗದಲ್ಲಿ ಭಾಗವಹಿಸಿ, 9 ಸ್ವರ್ಣ ಹಾಗೂ 3 ಬೆಳ್ಳಿ ಪದಕಗಳನ್ನು ಪಡೆದಿದ್ದಾರೆ ಎಂದು ಮಂದಿರದ ಅಧ್ಯಕ್ಷ ಪಿ.ಸಿ. ಮಹಾಬಲೇಶ್, ತರಬೇತುದಾರ ಸೆನ್ಸ್ ಯುವರಾಜ್ ಎಸ್. ತಿಳಿಸಿದ್ದಾರೆ.

# ನಗದೀಕರಣದ ಹೆಸರಿನಲ್ಲಿ ಖಾಸಗೀಕರಣ ಮಾಡುತ್ತಿರುವ ಬಿಜೆಪಿ



**ಹರಪನಹಳ್ಳಿ ಕಾರ್ಯಕ್ರಮದಲ್ಲಿ ಜಿ.ಪಂ. ಮಾಜಿ ಸದಸ್ಯ ಹೊದಿಗೆರೆ ರಮೇಶ್ ಆಕ್ರೋಶ**

> "ಬೆವರಿನ ಮೂಲದಿಂದ ಬಂದವರಾದ ನಮಗೆ ಸಾಮಾಜಿಕ, ರಾಜಕೀಯ ಜಾಗೃತಿ ಬರಬೇಕು. ಈ ದೇಶದ ಆಯಕಟ್ಟಿನ ಜಾಗದಲ್ಲಿ ಅಹಿಂದ ವರ್ಗದವರಿಗೆ ಉದ್ಯೋಗ ಸಿಕ್ಕರೆ ಅಭಿವೃದ್ಧಿ ಸಾಧ್ಯ. ಹರಪನಹಳ್ಳಿ ಕ್ರಾಂತಿಯ ನೆಲವಾಗಿದ್ದು, ಇಲ್ಲಿಂದಲೇ ಹಿಂದುಳಿದ ಸಮುದಾಯವನ್ನು ಬಲಪಡಿಸಬೇಕು.
>
> -ಎ.ಬಿ. ರಾಮಚಂದ್ರಪ್ಪ, ನಿವೃತ್ತ ಉಪನ್ಯಾಸಕ

ಹರಪನಹಳ್ಳಿ, ಸೆ.24- ಬಿಜೆಪಿ ಸರ್ಕಾರ ದಾರ್ಶನಿಕರ ಇತಿಹಾಸವನ್ನು ಮರೆಮಾಚುವ ಕೆಲಸ ಮಾಡುತ್ತಿದ್ದು, ವಾಲ್ಮೀಕಿ ಸೇರಿದಂತೆ, ಹಿಂದುಳಿದ ಸಮುದಾಯಗಳಿಗೆ ಜಾತಿ ಜನಗಣತಿ ಆಧಾರದ ಮೇಲೆ ಮೀಸಲಾತಿ ನೀಡದೇ ಕಾಲಹರಣ ಮಾಡುತ್ತಿರುವುದು ಸರಿಯಲ್ಲ ಎಂದು ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಹೊದಿಗೆರೆ ರಮೇಶ್ ಹೇಳಿದರು.

ಪಟ್ಟಣದ ಹೊಸಪೇಟೆ ರಸ್ತೆಯಲ್ಲಿರುವ ಸಮತಾ ರೆಸಾರ್ಟ್‌ನಲ್ಲಿ ದಾವಣಗೆರೆ ಜಿಲ್ಲಾ ಹಿಂದುಳಿದ ಜಾತಿಗಳ ಒಕ್ಕೂಟದಿಂದ ಸೆ.29 ರಂದು ದಾವಣಗೆರೆಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ ನೇತೃತ್ವದಲ್ಲಿ ಜಾತಿವಾರು ಸಮೀಕ್ಷಾ ವರದಿ ಬಿಡುಗಡೆಗೆ ಒತ್ತಾಯಿಸಿ ನಡೆಯುವ ಧರಣಿ ಸತ್ಯಾಗ್ರಹದ ಪೂರ್ವಭಾವಿ ಸಭೆಯಲ್ಲಿ ಅವರು ಭಾಗವಹಿಸಿ ಮಾತನಾಡಿದರು.

ಗುಜರಾತ್‌ನಲ್ಲಿ ಬಿಜೆಪಿ ಸರ್ಕಾರ ಉನ್ನತ ಶಿಕ್ಷಣದಲ್ಲಿ ಮೀಸಲಾತಿ ತೆಗೆದು ಹಾಕುವುದರ ಮೂಲಕ ತಾರತಮ್ಯ ಮಾಡುತ್ತಿದೆ. ನಗದೀಕರಣದ ಹೆಸರಿನಲ್ಲಿ ಖಾಸಗೀಕರಣ ಮಾಡಲು ಹೊರಟಿರುವ ಬಿಜೆಪಿಯವರು, ಮೀಸಲಾತಿಯನ್ನು ತೆಗೆಯುವ ಹುನ್ನಾರ ನಡೆಸಿದ್ದಾರೆ. ದಿನದಿಂದ ದಿನಕ್ಕೆ ಅಹಿಂದ ವರ್ಗದವರನ್ನು ವಿಭಜನೆ ಮಾಡಲಾಗುತ್ತಿದ್ದು, ರಾಜ್ಯದಲ್ಲಿ ಅಹಿಂದ ವರ್ಗ ಬಲಿಷ್ಠವಾಗಬೇಕು. ಮುಂಬರುವ ಚುನಾವಣೆಯಲ್ಲಿ ನಮ್ಮ ಶಕ್ತಿ ಪ್ರದರ್ಶನ ಮಾಡಬೇಕು. ಅಹಿಂದ ಸಂಘಟನೆ ಸ್ವಾಭಿಮಾನದ ಸಂಘಟನೆಯಾಗಬೇಕು ಎಂದರು.

ಅಹಿಂದ ಮುಖಂಡ ಪಿ. ರಾಜಕುಮಾರ್ ಮಾತನಾಡಿ, ಎಲ್.ಜಿ. ಹಾವನೂರು, ದೇವರಾಜ ಅರಸು, ಅಂಬೇಡ್ಕರ್ ಆಸೆಯಂತೆ ನಿರಂತರ ಹೋರಾಟದ ಅಗತ್ಯತೆ ಇದೆ.

ಸತತ 5 ವರ್ಷಗಳ ಕಾಲ ಹಿಂದುಳಿದ ವರ್ಗಗಳ ನಾಯಕರಾಗಿ ಸಿದ್ದರಾಮಯ್ಯನವರು ಜನಪರ ಆಡಳಿತ ಮಾಡಿದ್ದಾರೆ. ಬಿಜೆಪಿಯವರು ಯಾವುದೇ ನಿಗಮಗಳಿಗೆ ಅನುದಾನ ನೀಡಿಲ್ಲ. ಪರಿಶಿಷ್ಟ ಜಾತಿ, ಪಂಗಡಗಳ ಅನುದಾನವನ್ನು ಸಮರ್ಪಕವಾಗಿ ನೀಡಿಲ್ಲ ಎಂದರು.

ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಹೆಚ್. ಬಿ.ಪರಶುರಾಮಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಾಜ್ಯ ಯುವ ಕಾಂಗ್ರೆಸ್ ಕಾರ್ಯದರ್ಶಿ ಪಿ.ಟಿ. ಭರತ್, ಮುಖಂಡರಾದ ಶಂಕ್ರನಹಳ್ಳಿ ಉಮೇಶ್ ಬಾಬು, ಬಸವರಾಜಪ್ಪ, ನಲ್ಕುಂದ ಹಾಲೇಶ್, ಲೋಕಿಕೆರೆ ಸಿದ್ದಪ್ಪ, ತಾಲ್ಲೂಕು ಅಂಬೇಡ್ಕರ್ ಸಂಘದ ಅಧ್ಯಕ್ಷ ನಿಚ್ಚವ್ವನಹಳ್ಳಿ ಭೀಮಪ್ಪ, ತಾಲ್ಲೂಕು ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಎ. ಮೂಸಾಸಾಬ್ ಮಾತನಾಡಿ, ಇದೇ ದಿನಾಂಕ 29 ರಂದು ದಾವಣಗೆರೆ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಜರುಗುವ ಧರಣಿ ಸತ್ಯಾಗ್ರಹಕ್ಕೆ ಹರಪನಹಳ್ಳಿ ತಾಲ್ಲೂಕಿನ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಒಗ್ಗೂಡುವಂತೆ ಕರೆ ನೀಡಿದರು.

ಈ ಸಂದರ್ಭದಲ್ಲಿ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ. ಉಚ್ಚಂಗೆಪ್ಪ, ಕುರುಬ ಸಮಾಜದ ತಾಲ್ಲೂಕು ಅಧ್ಯಕ್ಷ ಬಂಡ್ರಿ ಗೋಣಿಬಸಪ್ಪ, ಉಪ್ಪಾರ ಸಮಾಜದ ಅಧ್ಯಕ್ಷ ಶಂಕ್ರನಹಳ್ಳಿ ಹನುಮಂತಪ್ಪ, ಹರಿಜನ ಸಮಾಜದ ಅಧ್ಯಕ್ಷ ದುಗ್ಗಾವತಿ ಹನುಮಂತಪ್ಪ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಮುತ್ತಿಗಿ ಜಂಬಣ್ಣ, ಮುಖಂಡರಾದ ಆಲದಹಳ್ಳಿ ಷಣ್ಮುಖಪ್ಪ, ಪುರಸಭೆ ಮಾಜಿ ಅಧ್ಯಕ್ಷ ಎಚ್. ಕೆ. ಹಾಲೇಶ್, ಹರಿಯಮ್ಮನಹಳ್ಳಿ ರಾಜಕುಮಾರ, ಹಲಗೇರಿ ಮಂಜುನಾಥ, ಪುಣಭಗಟ್ಟ ನಿಂಗಪ್ಪ, ತೆಲಿಗಿ ಯೋಗೇಶ್, ನೀಲಗುಂದ ವಾಗೀಶ್, ತಿಮ್ಮೇಶ್, ಎನ್. ಮಜೀದ್, ನೇಮಿರಾಜ ನಾಯ್ಕ್, ಶಶಿಕುಮಾರ್ ನಾಯ್ಕ್, ತಿಮ್ಮಾರೆಡ್ಡಿ, ಮಂಜುನಾಥ ಇನ್ನಿತರರಿದ್ದರು.

# ಡಾ।। ಅಂಬೇಡ್ಕರ್ ಸಮುದಾಯ ಭವನಕ್ಕೆ ಅಡುಗೆ ಪಾತ್ರೆ ಸಾಮಾನುಗಳನ್ನು ಕೊಡುಗೆ ನೀಡಿದ ಎಸ್ಸೆಸ್ಸೆಂ



ಎಲೆಬೇತೂರು

ದಾವಣಗೆರೆ, ಸೆ.24- ಎಲೆಬೇತೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಎಸ್.ಎಸ್.ಮಲ್ಲಿಕಾರ್ಜುನ್ ಅಭಿಮಾನಿ ಬಳಗದಿಂದ ಎಸ್.ಎಸ್. ಮಲ್ಲಿಕಾರ್ಜುನ್ ಅವರ 54ನೇ ಜನ್ಮದಿನ ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾ.ಪಂ. ಅಧ್ಯಕ್ಷರಾದ ಶ್ರೀಮತಿ ಸುಮಾ ವಿರುಪಾಕ್ಷಪ್ಪ ವಹಿಸಿದ್ದರು. ಉದ್ಘಾಟನೆಯನ್ನು ಎಂ. ನಾಗಪ್ಪ ನೆರವೇರಿಸಿದರು. ಎಸ್.ಎಸ್. ಮಲ್ಲಿಕಾರ್ಜುನ್ ಅವರ ಕುರಿತು ಪ್ರಾಸ್ತಾವಿಕ ನುಡಿಯನ್ನು ಹೆಚ್. ಬಸವರಾಜಪ್ಪ ಮಾತನಾಡಿದರು.

ಈ ಸಂದರ್ಭದಲ್ಲಿ ಎಲೆಬೇತೂರಿನಲ್ಲಿ ನೂತನವಾಗಿ ನಿರ್ಮಾಣವಾಗಿರುವ ಡಾ।। ಬಿ.ಆರ್. ಅಂಬೇಡ್ಕರ್ ಸಮುದಾಯ ಭವನಕ್ಕೆ 3 ಲಕ್ಷ ರೂ. ಮೌಲ್ಯದ ಅಡುಗೆ ಪಾತ್ರೆ ಸಾಮಾನುಗಳು ಹಾಗೂ ಛೇರ್‌ಗಳನ್ನು ಎಸ್.ಎಸ್. ಮಲ್ಲಿಕಾರ್ಜುನ್ ಅವರು ಕೊಡುಗೆಯಾಗಿ ನೀಡಿದರು.

ನಂತರ ಎಸ್.ಎಸ್.ಎಂ. ಅಭಿಮಾನಿ ಬಳಗ ಹಾಗೂ ಎಸ್.ಎಸ್. ಹೈಟೆಕ್ ಆಸ್ಪತ್ರೆಯ ರಕ್ತಭಂಡಾರ ಇವರ ಸಹಯೋಗದಲ್ಲಿ ರಕ್ತದಾನ ಶಿಬಿರ ನಡೆಯಿತು. ಸರ್ಕಾರಿ ಶಾಲಾ ಮಕ್ಕಳಿಗೆ ನೋಟ್‌ಬುಕ್, ಪೆನ್ ಹಾಗೂ ಸಿಹಿಯನ್ನು ವಿತರಣೆ ಮಾಡಲಾಯಿತು.

ಕೊರೊನಾ ಸಂದರ್ಭದಲ್ಲಿ ಕಾರ್ಯ ನಿರ್ವಹಿಸಿದ ಗ್ರಾಮದವರಾದ ಇ.ಎಸ್.ಐ. ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಡಾ।। ಅಮಿತ್ ಹಾಗೂ ಆಲೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಡಾ।। ಆಶಾ ಭಾನುಪ್ರಕಾಶ್, ಆರೋಗ್ಯ ಸಹಾಯಕರಾದ ಶಫೀವುಲ್ಲಾ ಮತ್ತು ಆಶಾ ಕಾರ್ಯಕರ್ತೆಯರಾದ ಶ್ರೀಮತಿ ಸಿದ್ದಮ್ಮ, ಶ್ರೀಮತಿ ಸುಜಾತ, ಶ್ರೀಮತಿ ರೂಪಾ ಹಾಗೂ ಗ್ರಾಮದ ಸಾಮಾಜಿಕ ಸೇವೆಯನ್ನು ಪರಿಗಣಿಸಿ, ಹೋಟೆಲ್ ಮುರುಗೆಣ್ಣ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ವೇದಿಕೆಯಲ್ಲಿ ಗ್ರಾಮದ ಮುಖಂಡರಾದ ಎಂ. ಪತ್ರಿಬಸಪ್ಪ, ಎಂ.ಬಸವರಾಜಪ್ಪ, ಹೆಚ್.ಬಸಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಬಿ. ಪ್ರಭು, ಜಿ.ಪಂ ಮಾಜಿ ಸದಸ್ಯರಾದ ಬಿ.ಕರಿಬಸಪ್ಪ, ಎಪಿಎಂಸಿ ನಿರ್ದೇಶಕರಾದ ಎಂ.ಕೆ.ರೇವಣಸಿದ್ದಪ್ಪ ಮತ್ತು ಟಿ.ರಾಜಪ್ಪ, ಗ್ರಾ.ಪಂ ಸದಸ್ಯರಾದ ಚೇತನ್‌ಕುಮಾರ್ ಹಂಚಿನಮನೆ, ಬಿ. ಶಿವಕುಮಾರ್, ಶ್ರೀಮತಿ ಶಾಂತಾ ಬಸವನಗೌಡಪ್ಪ, ಮರಕುಂಟಿ ಮಂಜುನಾಥ್, ನಂದಿ ಇಂಟೀರಿಯರ್‌ಸ್‌ನ ಮಾಲೀಕರಾದ ಎಂ. ಪ್ರಕಾಶ್, ಎಸ್‌ಡಿಎಂಸಿ ಅಧ್ಯಕ್ಷ ರಾಂಪುರ ನಾಗರಾಜ್, ವೈ. ರಮೇಶ್, ಕಿಸಾನ್ ಕಾಂಗ್ರೆಸ್ ಜಿಲ್ಲಾ ಕಾರ್ಯದರ್ಶಿ ಶಿವಕುಮಾರ್ ಹಂಚಿನಮನಿ, ಕೆಇಬಿ ಕರಿಬಸಪ್ಪ, ಎ.ಕೆ.ನಾಗೇಂದ್ರಪ್ಪ, ಎ.ಕೆ.ಬಂದಪ್ಪ, ಬಿ.ಸಿ. ನರೇಶ್, ಮಧು, ಚೌಡೇಶಿ, ಸುನೀಲ್, ವಿಜಯ್, ಮಧು ಹಳ್ಳಿಕೇರಿ, ಚಂದ್ರು ಮತ್ತಿತರರು ಉಪಸ್ಥಿತರಿದ್ದರು.

ಶಾಲಾ ಮಕ್ಕಳು ಪ್ರಾರ್ಥಿಸಿದರು. ಎಂ. ಷಡಕ್ಷರಪ್ಪ ಸ್ವಾಗತಿಸಿದರು. ಶಿಕ್ಷಕಿ ಅನ್ನಪೂರ್ಣ ನಿರೂಪಿಸಿದರು. ಬಿ. ಕರಿಬಸ್ಸಪ್ಪ ವಂದಿಸಿದರು.

## ನಗರದಲ್ಲಿ ಇಂದು 'ಎಸ್‌ಪಿಬಿ ನೆನಪಿನ ಒಂದು ವರ್ಷ'



ದಾವಣಗೆರೆ, ಸೆ.24- ಜಿಲ್ಲೆ ಸಮಾಚಾರ ದಿನಪತ್ರಿಕಾ ಬಳಗದ ವತಿಯಿಂದ ಹಿರಿಯ ಪತ್ರಕರ್ತ ವಿ. ಹನುಮಂತಪ್ಪ ರಚಿಸಿರುವ ಮಹದಾಭಿಮಾನದ ಕೃತಿ 'ಸ್ವರ ಸಾಮ್ರಾಟ ಎಸ್.ಪಿ. ಬಾಲಸುಬ್ರಹ್ಮಣ್ಯಂ' ಜೀವಮಾನ ಸಾಧನೆ ಕುರಿತ ಕೃತಿ ಲೋಕಾರ್ಪಣೆ ಹಾಗೂ 'ಎಸ್ಪಿಬಿ ನೆನಪಿನ ಒಂದು ವರ್ಷ' ಸಮಾರಂಭವು ನಾಳೆ ದಿನಾಂಕ 25 ರ ಶನಿವಾರ ಸಂಜೆ 5.30ಕ್ಕೆ ನಗರದ ಕುವೆಂಪು ಕನ್ನಡ ಭವನದಲ್ಲಿ ಜರುಗಲಿದೆ ಎಂದು ಬಳಗದ ಪ್ರಧಾನ ಕಾರ್ಯದರ್ಶಿ ಸಿ.ಕೆ. ಆನಂದತೀರ್ಥಾಚಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪಾಲಿಕೆ ಮಹಾಪೌರರಾದ ಎಸ್.ಟಿ. ವೀರೇಶ್ ಕಾರ್ಯಕ್ರಮ ಉದ್ಘಾಟಿಸುವರು. ರಂಗಭೂಮಿ ನಟ, ನಿರ್ದೇಶಕ ಚಿಂದೋಡಿ ಬಂಗಾರೇಶ್ ಪುಸ್ತಕ ಲೋಕಾರ್ಪಣೆ ಮಾಡಲಿದ್ದು, ಜಾನಪದ ವಿದ್ವಾಂಸ ಡಾ. ಎಂ.ಜಿ. ಈಶ್ವರಪ್ಪ ಪುಸ್ತಕ ಕುರಿತು ಮಾತನಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಹಿರಿಯ ನ್ಯಾಯವಾದಿ ರಾಮಚಂದ್ರ ಕಲಾಲ್, ಕರ್ನಾಟಕ ಹಿಮೋಫಿಲಿಯಾ ಸೊಸೈಟಿ ಸಂಸ್ಥಾಪಕ ಡಾ. ಸುರೇಶ್ ಹನಗವಾಡಿ, ಎಂ.ಬಿ. ಪಿಯು ವಿಜ್ಞಾನ ಕಾಲೇಜಿನ ನಿರ್ದೇಶಕ ಡಾ. ಜಿ.ಎನ್.ಹೆಚ್. ಕುಮಾರ್, ಜಿಲ್ಲೆ ಸಮಾಚಾರ ಬಳಗದ ಗೌರವಾಧ್ಯಕ್ಷ ಎನ್.ಟಿ. ಯರ್ರಿಸ್ವಾಮಿ, ಸಂಪಾದಕ ವಿ. ಹನುಮಂತಪ್ಪ ಉಪಸ್ಥಿತರಿರುವರು. ದಾವಣಗೆರೆ ವಿವಿ ಕುಲಪತಿ ಪ್ರೊ.ಶರಣಪ್ಪ ಹಲಸೆ ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಿದ್ದ ಎಸ್ಪಿಬಿ ಗಾಯನದ ಕನ್ನಡಾಭಿಮಾನದ ಗೀತೆಗಳ ಪ್ರಬಂಧ ಸ್ಪರ್ಧಾ ವಿಜೇತರಾದ ಶಿಕ್ಷಕಿ ವನಜಾಕ್ಷಿ ಮತ್ತೂರು ಉಚ್ಚಂಗಿದುರ್ಗ (ಪ್ರಥಮ), ಎ.ಆರ್. ವತ್ಸಲ ದಾವಣಗೆರೆ (ದ್ವಿತೀಯ), ಎ. ಸಾಧನಾ ದಾವಣಗೆರೆ (ತೃತೀಯ) ಅವರಿಗೆ ಬಹುಮಾನ ವಿತರಿಸಲಾಗುವುದು ಎಂದರು.

ವಿದುಷಿ ಸಂಗೀತ ರಾಘವೇಂದ್ರ ಮತ್ತು ತಂಡದವರಿಂದ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರು ಹಾಡಿರುವ ಸುಮಧುರ ಗೀತೆಗಳ ಗಾಯನ ಕಾರ್ಯಕ್ರಮವಿರುತ್ತದೆ ಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಬಳಗದ ಸಂಚಾಲಕ ಸಾಲಿಗ್ರಾಮ ಗಣೇಶ್ ಶೆಣೈ, ಸದಸ್ಯರಾದ ಶ್ರೀಮತಿ ಭಾರತಿ, ಗುರು ಬಸವರಾಜ್, ಶ್ರೀಕುಮಾರ ಆನೆಕೊಂಡ ಉಪಸ್ಥಿತರಿದ್ದರು.

## ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ಶ್ರೀ ಡಿ. ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್, ಪಿ.ಬಿ.ರಸ್ತೆ, ದಾವಣಗೆರೆ–06

ನಂ:ದಾಹನಪ್ರಾ:ಭೂಸ್ವಾಶಾ:ಸಿಆರ್:01:2021–22/1070 ದಿನಾಂಕ:23–09–2021.

### ಸಾರ್ವಜನಿಕ ಪತ್ರಿಕಾ ಪ್ರಕಟಣೆ

ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರವು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆಯ ಹಸಿರು ವಲಯದಲ್ಲಿರುವ ದಾವಣಗೆರೆ ತಾಲ್ಲೂಕು ಕುಂದುವಾಡ ಗ್ರಾಮದ ರಿಸನಂ: 125/2, 125/3, 125/4, 125/5, 125/6, 125/7, 125/8, 126/1, 126/2, 126/3, 126/4, 125/5, 126/6, 126/7, 126/8, 126/13, 127/2, 127/3, 127/4, 127/5, 127/6, 127/7, 127/8, 130/1, 130/3 ಮತ್ತು 130/4ರ ಜಮೀನುಗಳ ಒಟ್ಟು ವಿಸ್ತೀರ್ಣ: 53ಎ–19.8ಗುಂ ಪ್ರದೇಶದಲ್ಲಿ ವಸತಿ ಯೋಜನೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದ್ದು, ಈ ಬಗ್ಗೆ ದಿನಾಂಕ:14–12–2020ರಂದು ಮಾನ್ಯ ಲೋಕಾಸಭಾ ಸದಸ್ಯರು ದಾವಣಗೆರೆ, ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು, ಪ್ರಾಧಿಕಾರದ ಅಧ್ಯಕ್ಷರು, ಆಯುಕ್ತರು ಮತ್ತು ಭೂ ಮಾಲೀಕರುಗಳೊಂದಿಗೆ ಸಭೆ ನಡೆಸಲಾಗಿದ್ದು, ವಸತಿ ಯೋಜನೆಯನ್ನು ಅಭಿವೃದ್ಧಿ ಪಡಿಸಲು ನೇರ ಖರೀದಿ ಮುಖಾಂತರ ಜಮೀನುಗಳನ್ನು ನೀಡಲು ಸಂಬಂಧಿಸಿದ ಖಾತೆದಾರರು ಲಿಖಿತ ರೂಪದಲ್ಲಿ ಒಪ್ಪಿಗೆ ಪತ್ರಗಳನ್ನು ಬರೆದುಕೊಟ್ಟಿರುತ್ತಾರೆ. ಸದರಿ ಒಪ್ಪಿಗೆ ಪತ್ರಗಳನ್ನು ಪಡೆದ ನಂತರ ಜಮೀನುಗಳನ್ನು ನೇರ ಖರೀದಿ ಮಾಡಲು ಅನುಮತಿ ನೀಡುವಂತೆ ಕೋರಿ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಇವರಿಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಇವರು ಹೊಸ ವಸತಿ ಯೋಜನೆಯನ್ನು ಕೈಗೊಳ್ಳುವ ಪೂರ್ವದಲ್ಲಿ ಹೊಸದಾಗಿ ನಿವೇಶನ ಬೇಡಿಕೆ ಸಮೀಕ್ಷೆಯನ್ನು ಕೈಗೊಳ್ಳುವುದು ಸೂಕ್ತವೆಂದು ನಿರ್ದೇಶನ ನೀಡಿದ್ದರ ಮೇರೆಗೆ ದಿನಾಂಕ:09–08–2021ರಂದು ನಿವೇಶನ ಬೇಡಿಕೆ ಸಮೀಕ್ಷೆಗೆ ಪತ್ರಿಕೆ ಪ್ರಕಟಣೆ ನೀಡಿ ದಿನಾಂಕ:11–08–2021 ರಿಂದ 04–09–2021ರವರೆಗೆ ನಿವೇಶನ ಬೇಡಿಕೆ ಸಮೀಕ್ಷೆ ಕೈಗೊಂಡು ಸಾರ್ವಜನಿಕರಿಂದ ಅರ್ಜಿ ಸ್ವೀಕರೀಸಲಾಗಿದ್ದು, ಒಟ್ಟು 22250 ನಿವೇಶನಗಳಿಗೆ ಬೇಡಿಕೆ ಸ್ವೀಕೃತವಾಗಿರುತ್ತದೆ. ಸದರಿ ನಿವೇಶನ ಬೇಡಿಕೆ ಸಮೀಕ್ಷೆ ವರದಿಯನ್ನು ಹಾಗೂ ಭೂ ಉಪಯೋಗ ನಕ್ಷೆಯನ್ನು ಲಗತ್ತಿಸಿ, ಸರ್ಕಾರಕ್ಕೆ ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಸದರಿ ವಸತಿ ಯೋಜನೆಗೆ ರೈತರಿಂದ ಜಮೀನನ್ನು ಖರೀದಿಸಲು ಪ್ರಾಧಿಕಾರದಲ್ಲಿ ಸಾಕಷ್ಟು ಅನುದಾನ ಲಭ್ಯವಿದ್ದು, ಸರ್ಕಾರದಿಂದ ವಸತಿ ಯೋಜನೆ ಕೈಗೊಳ್ಳಲು ಶೀಘ್ರದಲ್ಲಿಯೇ ಅನುಮೋದನೆ ನೀಡುವ ನಿರೀಕ್ಷಣೆಯಲ್ಲಿರುತ್ತದೆ.

ಈ ಮಧ್ಯೆ ಸದರಿ ನೇರ ಖರೀದಿಗೆ ಒಪ್ಪಿಗೆ ನೀಡಿರುವ ಸರ್ವೆ ನಂಬರುಗಳ ಜಮೀನುಗಳ ಕೆಲವೊಂದು ಭೂ ಮಾಲೀಕರುಗಳಿಗೆ ಖಾಸಗಿ ವ್ಯಕ್ತಿಗಳು ತಮ್ಮ ಜಮೀನುಗಳನ್ನು ಮಾರಾಟ ಮಾಡುವಂತೆ ಆಮಿಷ ಒಡ್ಡುತ್ತಿರುವುದು ಪ್ರಾಧಿಕಾರದ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ಈ ಬಗ್ಗೆ ಹಿರಿಯ ಉಪನೋಂದಣಾಧಿಕಾರಿಗಳು, ದಾವಣಗೆರೆ ಇವರಿಗೆ ಸದರಿ ಸರ್ವೆ ನಂಬರುಗಳಲ್ಲಿ ಯಾವುದೇ ಕ್ರಯ ವಹಿವಾಟು ಜರುಗದಂತೆ ಕ್ರಮ ಕೈಗೊಳ್ಳಲು ಹಾಗೂ ಉಪವಿಭಾಗಾಧಿಕಾರಿಗಳು, ದಾವಣಗೆರೆ ಉಪವಿಭಾಗ, ದಾವಣಗೆರೆ ಮತ್ತು ತಹಶೀಲ್ದಾರ್, ದಾವಣಗೆರೆ ತಾಲ್ಲೂಕು, ದಾವಣಗೆರೆ ಇವರಿಗೆ ಸದರಿ ಸರ್ವೆ ನಂಬರುಗಳಲ್ಲಿ ಯಾವುದೇ ಕ್ರಯ ವಹಿವಾಟು ಜರುಗದಂತೆ ಹಾಗೂ ಪಹಣಿ ಕಲಂ–11 ರಲ್ಲಿ **"ಈ ಜಮೀನು ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ವಸತಿ ಯೋಜನೆಗೆ ನೇರ ಖರೀದಿಗೆ ಒಳಪಟ್ಟಿರುತ್ತದೆ"** ಎಂಬ ಷರಾ ನಮೂದಿಸುವಂತೆ ಕೋರಿ ಪತ್ರ ಬರೆಯಲಾಗಿದೆ. ಪ್ರಯುಕ್ತ ಸದರಿ ವಸತಿ ಯೋಜನೆಯು ಅನುಮೋದನೆ ಹಂತದಲ್ಲಿರುವುದರಿಂದ ದಾವಣಗೆರೆ ತಾಲ್ಲೂಕು ಕುಂದುವಾಡ ಗ್ರಾಮದ ಮೇಲ್ಕಂಡ ಸರ್ವೆ ನಂಬರುಗಳ ಜಮೀನುಗಳನ್ನು ಸಾರ್ವಜನಿಕರು ಖರೀದಿ ಮಾಡದಿರಲು ಈ ಮೂಲಕ ಕೋರಿದೆ ಹಾಗೂ ಸಾರ್ವಜನಿಕರು ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ದಾ–ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆಯ ಭೂ ಸ್ವಾಧೀನ ಶಾಖೆಯಿಂದ ಪಡೆಯಬಹುದಾಗಿದೆ.

ಸದರಿ ವಸತಿ ಯೋಜನೆಯ ಬೇಡಿಕೆ ಸಮೀಕ್ಷೆಯಲ್ಲಿ ಹೆಚ್ಚು ಅರ್ಜಿಗಳು ಸ್ವೀಕೃತಗೊಂಡಿರುವುದರಿಂದ ಮೇಲ್ಕಂಡ ಉದ್ದೇಶಿತ ನೇರ ಖರೀದಿಯ ಭೂ ವಿಸ್ತೀರ್ಣದೊಂದಿಗೆ ಸದರಿ ಜಮೀನುಗಳಿಗೆ ಹೊಂದಿಕೊಂಡಿರುವ ಸರ್ವೆ ನಂಬರುಗಳ ಒಳಗೊಂಡಂತೆ ಅಂದಾಜು ವಿಸ್ತೀರ್ಣ : 150ಎ–00ಗುಂ ಜಮೀನುಗಳನ್ನು ಭೂ ಸ್ವಾಧೀನ ಮಾಡಿಕೊಳ್ಳುವ ಬಗ್ಗೆ ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ತೀರ್ಮಾನಿಸಿದ್ದು, ಈ ಸಂಬಂಧ ಉಪವಿಭಾಗಾಧಿಕಾರಿಗಳು ಹಾಗೂ ವಿಶೇಷ ಭೂ ಸ್ವಾಧೀನಾಧಿಕಾರಿಗಳು, ದಾವಣಗೆರೆ ಹಾಗೂ ಆಯುಕ್ತರು, ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ಇವರೊಂದಿಗೆ ಸಭೆ ನಡೆಸಿರುತ್ತದೆ. ಶೀಘ್ರದಲ್ಲಿಯೇ ಹೆಚ್ಚುವರಿ ಜಮೀನುಗಳನ್ನು ಭೂ ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಿದೆ.

ಸಹಿ/– **ಆಯುಕ್ತರು, ದಾ–ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.**

**ಸಹಿ/– (ದೇವರಮನಿ ಶಿವಕುಮಾರ್), ಅಧ್ಯಕ್ಷರು, ದಾ–ಹ ನಗರಾಭಿವೃದ್ಧಿ ಪ್ರಾಧಿಕಾರ,ದಾವಣಗೆರೆ**

ವಾಸಾಇ/ದಾವಣಗೆರೆ/402/ಎಂಸಿಎ/2021–22

## ಭುವನೇಶ್ವರಿ ಆದರ್ಶ ಹಿರಿಯ ಪ್ರಾಥಮಿಕ ಶಾಲೆಗೆ ಪ್ರೊಜೆಕ್ಟರ್, ಕಂಪ್ಯೂಟರ್ ಕೊಡುಗೆ



ರಾಣೇಬೆನ್ನೂರು

ರಾಣೇಬೆನ್ನೂರು, ಸೆ. 24- ನಗರದ ಭುವನೇಶ್ವರಿ ಆದರ್ಶ ಹಿರಿಯ ಪ್ರಾಥಮಿಕ ಶಾಲೆ ಕೋಡಿಯಾಲದಲ್ಲಿ ನಿವೃತ್ತ ಇಂಜಿನಿಯರ್ ಸಿ.ಆರ್. ಬಳ್ಳಾರಿ ಅವರು ನೂತನ ಪ್ರೊಜೆಕ್ಟರ್‌ಗಳನ್ನು ನೀಡಿದರು ಹಾಗೂ ಗ್ರಾಸಿಂ ಜನಸೇವಾ ಟ್ರಸ್ಟ್ ವತಿಯಿಂದ ಕಂಪ್ಯೂಟರ್ ನೀಡಲಾಯಿತು.

ನಂತರ ಮಾತನಾಡಿದ ಸಿ.ಆರ್. ಬಳ್ಳಾರಿ ಅವರು, ನಿವೃತ್ತ ಶಿಕ್ಷಕರಾದ ಪುಟ್ಟಮ್ಮನವರು ಶಾಲೆ ಸ್ಥಾಪಿಸಿ ಬಡ ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿರುವುದನ್ನು ಗಮನಿಸಿ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಂದ ಪ್ರೊಜೆಕ್ಟರ್ ದೇಣಿಗೆಯಾಗಿ ನೀಡಿದ್ದೇವೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಹಾಯ ಮಾಡುವುದಾಗಿ ತಿಳಿಸಿದರು.

ಕರೂರು ಜಿ.ಪಂ. ಕ್ಷೇತ್ರದ ಮಾಜಿ ಸದಸ್ಯ ಮಂಗಳಗೌರಿ ಅರುಣಕುಮಾರ್ ಪೂಜಾರ್ ಮಾತನಾಡಿ, ಶಾಲಾಧ್ಯಕ್ಷರಾದ ಪುಟ್ಟಮ್ಮನವರ ಸಾಧನೆ ದೊಡ್ಡದು. ಅವರ ಈ ಸಾಧನೆಗೆ ಶೈಕ್ಷಣಿಕ ಕ್ಷೇತ್ರದಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡುವಂತೆ ವರಿಷ್ಠರ ಗಮನಕ್ಕೆ ತರುತ್ತೇನೆಂದರು.

ಕಾರ್ಯಕ್ರಮದಲ್ಲಿ ಶಾಲಾಧ್ಯಕ್ಷರಾದ ಪುಟ್ಟಮ್ಮ ಹಿರೇಮಠ, ಗ್ರಾಮ ಪಂಚಾಯತ್ ಅಧ್ಯಕ್ಷ ಚೇತನ್ ಮಂಜಣ್ಣ ಪೂಜಾರ್, ಶಿಕ್ಷಣ ಸಂಯೋಜಕ ಬಿ.ಕೆ. ಅಶೋಕ್, ಗ್ರಾಮದ ಮುಖಂಡರಾದ ನಾಗರಾಜಪ್ಪ ಹಳ್ಳಳ್ಳೆಪ್ಪನವರ, ರಾಮಣ್ಣ ಗೋಣೆಪ್ಪನವರ, ವಿಜಯಕುಮಾರ ಹಿತ್ತಲಮನಿ, ಶಿವಮೊಗ್ಗ ಮಂಜಣ್ಣ, ದುಷ್ಯಂತ್ ದ್ಯಾಮಕ್ಕನವರ, ಗ್ರಾಮ ಪಂಚಾಯತ್ ಸದಸ್ಯರಾದ ಬಸವಣ್ಣೆಪ್ಪ ಹೆಗ್ಗಪ್ಪನವರ, ಪ್ರಭು ಪೂಜಾರ್, ಗ್ರಾಸಿಂ ಜನಸೇವಾ ಟ್ರಸ್ಟ್ ಗ್ರಾಮೀಣಾಭಿವೃದ್ಧಿ ವಿಭಾಗದ ಎನ್. ಮಂಜುನಾಥ ಮತ್ತು ಎಂ. ನಿವೇದಿತಾ ಉಪಸ್ಥಿತರಿದ್ದರು.

ಶಿಕ್ಷಕ ದೇವರಾಜ್ ಮಲ್ಲಾಪುರ ನಿರೂಪಿಸಿದರು. ಮುಖ್ಯೋಪಾಧ್ಯಾಯ ಮಲ್ಲಿಕಾರ್ಜುನ ಬಾವಿಕಟ್ಟೆ ಪ್ರಾಸ್ತಾವಿಕ ಭಾಷಣ ಮಾಡಿದರು. ಶಿವಯ್ಯ ಹಿರೇಮಠ ವಂದಿಸಿದರು. ಶಿಕ್ಷಕರಾದ ಸಿ. ರೇಖಾ, ಎಸ್. ರೇಣುಕಮ್ಮ, ಜಿ.ಆರ್. ಹನುಮಂತಪ್ಪ ಉಪಸ್ಥಿತರಿದ್ದರು.

## ಅನಧಿಕೃತ ಮರಳು ಗಣಿಗಾರಿಕೆ ತಡೆಯಲು ಸಂರಕ್ಷಣಾ ಪಡೆ

ಬೆಂಗಳೂರು, ಸೆ.24 - ರಾಜ್ಯದಲ್ಲಿ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆ ತಡೆಗಟ್ಟಲು ಖನಿಜ ಸಂರಕ್ಷಣಾ ಪಡೆ ರಚಿಸಲಾಗಿದೆ ಎಂದು ಗಣಿ ಮತ್ತು ಭೂ ವಿಜ್ಞಾನ ಸಚಿವ ಆಚಾರ್ ಹಾಲಪ್ಪ ವಿಧಾನಸಭೆಗಿಂದು ತಿಳಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಭರತ್ ಶೆಟ್ಟಿ ಪ್ರಶ್ನೆಗೆ ಉತ್ತರಿಸಿದ ಸಚಿವರು, ಗ್ರಾಹಕರಿಗೆ ಆನ್‌ಲೈನ್ ಬುಕ್ಕಿಂಗ್ ಮೂಲಕ ಮರಳು ಪೂರೈಕೆ ವ್ಯವಸ್ಥೆಯನ್ನು ಜಾರಿಗೆ ತಂದಿದ್ದೇವೆ. ಗುತ್ತಿಗೆದಾರರು ನಿರ್ವಹಿಸುವ ಸರ್ಕಾರಿ ಯೋಜನೆಗಳಿಗೆ ಮರಳು ಅವಶ್ಯವಿದ್ದಲ್ಲಿ ಜಿಲ್ಲಾ ಮರಳು ಸಮಿತಿ ರಚಿಸಿ ಮರಳು ಬ್ಲಾಕ್‌ಗಳನ್ನು ತೆಗೆಯಲು ಅವಕಾಶ ಮಾಡಿಕೊಡಲಾಗಿದೆ ಎಂದು ಹೇಳಿದರು. ಸಾರ್ವಜನಿಕರಿಗೆ ಸುಲಭವಾಗಿ ಮರಳು ದೊರಕಲು ಸರ್ಕಾರ ಅನೇಕ ಕ್ರಮಗಳನ್ನು ತೆಗೆದುಕೊಂಡಿದೆ. 1, 2 ಮತ್ತು 3ನೇ ಶ್ರೇಣಿಯ ಹಳ್ಳ, ತೊರೆ, ಕೆರೆ ಮೂಲಕ ಗ್ರಾಮ ಪಂಚಾಯತ್‌ಗಳಲ್ಲಿ ಟನ್‌ಗೆ 300 ರೂ. ನಿಗದಿಪಡಿಸಲಾಗಿದೆ ಎಂದರು.

## ಕಾಂಗ್ರೆಸ್‌ನಿಂದ ಟಾಂಗಾ ಪ್ರತಿಭಟನೆ

ಬೆಂಗಳೂರು, ಸೆ. 24 - ಬೆಲೆ ಏರಿಕೆಯಿಂದ ಜನ ತತ್ತರಿಸುತ್ತಿದ್ದರೂ ಬಿಜೆಪಿ ಸರ್ಕಾರ ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿ, ಕಾಂಗ್ರೆಸ್ ಮುಖಂಡರು ಕೆಪಿಸಿಸಿ ಕಚೇರಿಯಿಂದ ವಿಧಾನಸೌಧದವರೆಗೆ ಟಾಂಗಾ ಜಾಥಾ ಮೂಲಕ ಪ್ರತಿಭಟನೆ ನಡೆಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್‌ನಲ್ಲಿನ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ್ ನೇತೃತ್ವದಲ್ಲಿ ಟಾಂಗಾ ಜಾಥಾ ನಡೆಸಲಾಯಿತು. ಕಳೆದ ದಿನಗಳಲ್ಲಿ ಇದೇ ನಾಯಕರು ಬೆಲೆ ಏರಿಕೆ ಪ್ರತಿಭಟಿಸಿ ಎತ್ತಿನ ಗಾಡಿ, ಸೈಕಲ್ ಜಾಥಾ ನಡೆಸಿದ್ದರು. ತನ್ನ ಜನ ವಿರೋಧಿ ನೀತಿ ಮೂಲಕ ಬಿಜೆಪಿ ಸರ್ಕಾರ ಜನರ ಬದುಕನ್ನು ದುಸ್ಥಿತಿಗೆ ನೂಕುತ್ತಿದೆ ಎಂದು ಮುಖಂಡರು ಘೋಷಣೆ ಹಾಕಿದರು.

# ಜಗಳೂರು : ಅಂಗನವಾಡಿ ಕಾರ್ಯಕರ್ತೆಯರಿಂದ ಪ್ರತಿಭಟನೆ



ಜಗಳೂರು, ಸೆ.24- ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಕರೆ ನೀಡಿದ್ದ ಜಂಟಿ ಸಂಘಟನೆಗಳ ಅಖಿಲ ಭಾರತ ಮುಷ್ಕರಕ್ಕೆ ಬೆಂಬಲಿಸಿ ಎಐಟಿಯುಸಿ ಸಂಯೋಜಿತ ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಫೆಡರೇಷನ್ ನೇತೃತ್ವದಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ನೂರಾರು ಸಂಖ್ಯೆಯ ಪ್ರತಿಭಟನಾಕಾರರು ಮಹಾತ್ಮಗಾಂಧಿ ವೃತ್ತದ ಮೂಲಕ ಆಡಳಿತ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ, ಅಂಬೇಡ್ಕರ್ ವೃತ್ತದಿಂದ ತಹಶೀಲ್ದಾರ್ ಕಛೇರಿ ಮುಂಭಾಗ ಜಮಾಯಿಸಿ ಲಿಖಿತ ಮನವಿ ಸಲ್ಲಿಸಿದರು.

ಸಂಘಟನೆ ಗೌರವಾಧ್ಯಕ್ಷ ಮಹಮ್ಮದ್ ಬಾಷಾ ಮಾತನಾಡಿ, ಅಂಗನವಾಡಿ ಕಾರ್ಯಕರ್ತೆಯರು ವಾರಿಯರ್ಸ್‌ಗಳಾಗಿ ಸೇವೆ ಸಲ್ಲಿಸುತ್ತಿದ್ದು, ಮುಂಚೂಣಿಯಲ್ಲಿದ್ದಾರೆ. ಅಕಾಲಿಕ ನಿಧನ ಹೊಂದಿದವರಿಗೆ 50 ಲಕ್ಷ ಪರಿಹಾರ, ಆರೋಗ್ಯ ವಿಮೆ ಘೋಷಿಸಬೇಕು. ಹೆಚ್ಚುವರಿಯಾಗಿ ಕೋವಿಡ್ 19 ಸೇವೆಗೆ ಮಾಸಿಕ 10 ಸಾವಿರ ಭತ್ಯೆ ನೀಡಬೇಕು. ಸೋಂಕಿತ ಪೀಡಿತರಿಗೆ ತಲಾ 10 ಲಕ್ಷ ಪರಿಹಾರ ಒದಗಿಸಬೇಕು ಎಂದು ಒತ್ತಾಯಿಸಿದರು.

ಎಐಟಿಯುಸಿ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಮಾದಿಹಳ್ಳಿ ಕೆ. ಮಂಜಪ್ಪ ಮಾತನಾಡಿ, 46ನೇ ಲೇಬರ್ ಕಾನ್ಫರೆನ್ಸ್ ಅಧಿವೇಶನದ ಶಿಫಾರಸ್ಸಿನಂತೆ ಯೋಜನೆಗಳ ಕೆಲಸಗಾರರನ್ನು ಕಾರ್ಮಿಕರೆಂದು ಪರಿಗಣಿಸಿ ಮಾಸಿಕ 21 ಸಾವಿರ ಕನಿಷ್ಠ ವೇತನ ಜಾರಿಗೊಳಿಸಬೇಕು. ಸೇವಾ ಭದ್ರತೆಗಾಗಿ ವಿವಿಧ ರಾಷ್ಟ್ರೀಯ ವಿಮಾ ಯೋಜನೆ ಕಲ್ಪಿಸಬೇಕು. ಐಸಿಡಿಎಸ್ ಖಾಸಗೀಕರಣದ ಹುನ್ನಾರ ಕೈಬಿಡಬೇಕು. ಶ್ರೀಮಂತರಿಗೆ ಅಧಿಕ ತೆರಿಗೆ ವಿಧಿಸಿ ಆರ್ಥಿಕ ಸಂಗ್ರಹಣೆ ಹೆಚ್ಚಿಸಬೇಕು. ಸೆಂಟ್ರಲ್ ವಿಸ್ತಾ ಯೋಜನೆ ಕೈಬಿಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಂಘಟನೆ ಅಧ್ಯಕ್ಷೆ ಹಾಲಮ್ಮ, ಉಪಾಧ್ಯಕ್ಷೆ ಶಾಂತವೀರಮ್ಮ, ಖಜಾಂಚಿ ಪುಷ್ಪಾಂಜಲಿ, ಸಹಕಾರ್ಯದರ್ಶಿ ನಾಗರತ್ನಮ್ಮ, ಪದಾಧಿಕಾರಿಗಳಾದ ವೀರಣ್ಣ, ತಿಪ್ಪೇಸ್ವಾಮಿ, ಗೌರಮ್ಮ, ಶಶಿಕಲಾ, ರೂಪ, ತಿಪ್ಪಮ್ಮ, ನಾಗಮ್ಮ, ಭರಮಕ್ಕ, ಮಂಜುಳಾ, ಪವಿತ್ರ, ಸುಮಾ, ಲಕ್ಷ್ಮಿದೇವಿ, ಶಿವಮ್ಮ, ಹಸೀನಾ ಬೇಗಂ ಇನ್ನಿತರರು ಭಾಗವಹಿಸಿದ್ದರು.

## ಹಿಂದೂ ಮಹಾಗಣಪತಿ ಇಂದು ವಿಸರ್ಜನೆ : ಎಸ್ಸೆಸ್ಸೆಂ ದರ್ಶನ



ದಾವಣಗೆರೆ,ಸೆ.24- ನಗರದ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ಪ್ರತಿಷ್ಠಾಪಿಸಿರುವ ಹಿಂದೂ ಮಹಾಗಣಪತಿಯು ನಾಳೆ ದಿನಾಂಕ 25ರ ಶನಿವಾರ ಬೆಳಿಗ್ಗೆ ಪೂಜಾ ಕಾರ್ಯಕ್ರಮದೊಂದಿಗೆ ವಿಸರ್ಜನೆಗೊಳ್ಳಲಿದೆ ಎಂದು ಗಣಪತಿ ಮಹೋತ್ಸವದ ಸಂಚಾಲಕ ಜೊಳ್ಳಿ ಗುರು ತಿಳಿಸಿದ್ದಾರೆ.

ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು ಇಂದು ಸಂಜೆ ಹಿಂದೂ ಮಹಾಗಣಪತಿಯನ್ನು ವೀಕ್ಷಿಸಿದ ಸಂದರ್ಭದಲ್ಲಿ ವಿಶೇಷ ಪೂಜೆ ನಡೆಯಿತು. ಇದೇ ಸಂದರ್ಭದಲ್ಲಿ ಜೊಳ್ಳಿ ಗುರು ಮತ್ತು ಇತರೆ ಪದಾಧಿಕಾರಿಗಳು ಎಸ್ಸೆಸ್ಸೆಂ ಅವರನ್ನು ಶಾಲು ಹೊದಿಸಿ, ಸನ್ಮಾನಿಸಿದರು.

ನಗರ ಪಾಲಿಕೆಯ ವಿರೋಧ ಪಕ್ಷದ ನಾಯಕ ಎ. ನಾಗರಾಜ್, ಪಾಲಿಕೆ ಸದಸ್ಯರುಗಳಾದ ಗಡಿಗುಡಾಳ್ ಮಂಜುನಾಥ್, ಚಮನ್ ಸಾಬ್, ಶ್ರೀಮತಿ ಸವಿತಾ ಗಣೇಶ್ ಹುಲ್ಲುಮನೆ, ಶ್ರೀಮತಿ ಆಶಾ ಉಮೇಶ್, ಶ್ರೀಮತಿ ಸುಧಾ ಇಟ್ಟಿಗುಡಿ, ಕಾಂಗ್ರೆಸ್ ಮುಖಂಡರುಗಳಾದ ಶಿವಗಂಗಾ ಬಸವರಾಜ್, ಗಣೇಶ್ ಹುಲ್ಲುಮನೆ, ಉಮೇಶ್ ಮತ್ತಿತರರು ಎಸ್ಸೆಸ್ಸೆಂ ಅವರೊಂದಿಗಿದ್ದರು.

# ಸುಳ್ಳು ಹೇಳಿ ಎಸ್ಸಿ ಜಾತಿ ಪ್ರಮಾಣ ಪತ್ರ : ಪ್ರತಿಭಟನೆ



ದಾವಣಗೆರೆ, ಸೆ.24- ಬೇಡ ಜಂಗಮರೆಂದು ಸುಳ್ಳು ಹೇಳಿಕೊಂಡು ಎಸ್ಸಿ ಜಾತಿ ಸಿಂಧುತ್ವ ಪ್ರಮಾಣ ಪತ್ರ ಪಡೆಯುತ್ತಿರುವುದನ್ನು ತಡೆಯುವಂತೆ ಒತ್ತಾಯಿಸಿ, ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಘಟಕದ ನೇತೃತ್ವದಲ್ಲಿ ನಗರದಲ್ಲಿಂದು ಪ್ರತಿಭಟಿಸಲಾಯಿತು.

ಅಂಬೇಡ್ಕರ್ ವೃತ್ತದಲ್ಲಿ ವಿವಿಧ ವೇಷಧಾರಿಗಳಾಗಿ ಪ್ರತಿಭಟಿಸಿದ ಬೇಡ ಜಂಗಮರು ಹಾಗೂ ಪರಿಶಿಷ್ಟ ಜಾತಿಯ ವಿವಿಧ ಸಮುದಾಯಗಳ ಜನರು ತಾಲ್ಲೂಕು ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ಮುಖೇನ ತೆರಳಿ ತಹಶೀಲ್ದಾರ್ ಬಿ. ಎನ್. ಗಿರೀಶ್ ಮುಖಾಂತರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿದರು.

ಬೆಂಗಳೂರಿನ ಅಖಿಲ ಕರ್ನಾಟಕ ಡಾ. ಬಿ.ಆರ್. ಅಂಬೇಡ್ಕರ್ ಬೇಡ ಜಂಗಮ ಪರಿಶಿಷ್ಟ ಜಾತಿ ರಕ್ಷಣಾ ವೇದಿಕೆ ಹೆಸರಿನ ಸಂಸ್ಥೆ ನೀಡುವ ಬೇಡ ಜಂಗಮ ಜಾತಿ ಗುರುತಿನ ಪತ್ರ, ಚೀಟಿಗಳನ್ನು ಪರಿಗಣಿಸಿ, ಜಾತಿ ಸಿಂಧುತ್ವ ಪ್ರಮಾಣ ಪತ್ರವನ್ನು ಯಾವುದೇ ಜಿಲ್ಲೆಯಲ್ಲೂ ನೀಡಬಾರದು.

ವೇದಿಕೆಯವರು ನೀಡುವ ಯಾವುದೇ ಗುರುತಿನ ಪತ್ರವನ್ನು ಸರ್ಕಾರವಾಗಲೀ, ವಿವಿಧ ಇಲಾಖೆಗಳಾಗಲೀ ಪರಿಗಣಿಸಬಾರದು. ಈ ವೇದಿಕೆ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ನೈಜ ಬೇಡ ಜಂಗಮ ಅಲ್ಲದ, ಮೇಲ್ವರ್ಗದ ಕೆಲ ಜಾತಿಯವರಿಗೆ ಎಸ್‌ಸಿ ಜಾತಿ ಪ್ರಮಾಣ ಪತ್ರ ನೀಡಿದರೆ ಅಂತಹ ಅಧಿಕಾರಿಗಳನ್ನು ಸೇವೆಯಿಂದ ವಜಾಗೊಳಿಸಿ, ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಮಂಜುನಾಥ ಕುಕ್ಕುವಾಡ ಎಚ್ಚರಿಸಿದರು.

ಮುಖಂಡ ಹೊದಿಗೆರೆ ರಮೇಶ್, ವಿಚಾರವಾದಿ ಪ್ರೊ. ಎ. ಬಿ. ರಾಮಚಂದ್ರಪ್ಪ, ಕೆಪಿಸಿಸಿ ವಕ್ತಾರ ಡಿ. ಬಸವರಾಜ ಹೋರಾಟವನ್ನು ಬೆಂಬಲಿಸಿದರು.

ಪ್ರತಿಭಟನೆಯಲ್ಲಿ ಡಿಎಸ್ಸೆಸ್ ಮುಖಂಡರಾದ ಜಿಗಳಿ ಹಾಲೇಶ, ಪರಮೇಶ ತೇರದಾಳ, ಜಯಮ್ಮ ಬಾತಿ ಸಿದ್ದೇಶ್, ಕೆ. ವೀರೇಶ, ಮಹಾಂತೇಶ, ಅಣಜಿ ಹನುಮಂತಪ್ಪ, ನೀರ್ಥಡಿ ಮಂಜು, ದುರ್ಗಾಪ್ರಸಾದ್, ಬೇತೂರು ಹನುಮಂತಪ್ಪ, ಪ್ರದೀಪ್ ಸೇರಿದಂತೆ ಇತರರು ಭಾಗವಹಿಸಿದ್ದರು.

## ನಗರದಲ್ಲಿ ಇಂದು ರಫ್ತುದಾರರ ಸಮಾವೇಶ

ಜಿಲ್ಲಾ ಕೈಗಾರಿಕಾ ಉತ್ತೇಜನ ಹಾಗೂ ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ (ಬೆಂಗಳೂರು) ಇವರ ಸಂಯುಕ್ತಾಶ್ರಯದಲ್ಲಿ ವಾಣಿಜ್ಯ ಸಪ್ತಾಹ ರಫ್ತುದಾರರ ಸಮಾವೇಶವನ್ನು ಇಂದು ಬೆಳಿಗ್ಗೆ 11 ಗಂಟೆಗೆ ಹೋಟೆಲ್ ಓಷನ್ ಪಾರ್ಕ್‌ನಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ ಸಮಾವೇಶವನ್ನು ಉದ್ಘಾಟಿಸ ಲಿದ್ದು, ಶಾಸಕ ಎಸ್.ಎ. ರವೀಂದ್ರನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದ ಜಿ.ಎಂ. ಸಿದ್ದೇಶ್ವರ ಜಿಲ್ಲಾ ರಫ್ತು ಕೈಪಿಡಿ ಬಿಡುಗಡೆ ಮಾಡುವರು. ಶಾಸಕರಾದ ಮಾಡಾಳ್ ವಿರೂಪಾಕ್ಷಪ್ಪ, ಎಸ್.ವಿ. ರಾಮಚಂದ್ರಪ್ಪ, ಪ್ರೊ. ಎಂ. ಲಿಂಗಣ್ಣ ಪಾಲ್ಗೊಳ್ಳುವರು.

ಮುಖ್ಯ ಅತಿಥಿಗಳಾಗಿ ಡಾ. ಶಾಮನೂರು ಶಿವಶಂಕರಪ್ಪ, ಎಂ.ಪಿ. ರೇಣುಕಾಚಾರ್ಯ, ಎಸ್. ರಾಮಪ್ಪ, ಎಸ್.ಟಿ. ವೀರೇಶ್, ದೇವರಮನೆ ಶಿವಕುಮಾರ್, ಮಹಾಂತೇಶ್ ಬೀಳಗಿ, ವಿಜಯ ಮಹಾಂತೇಶ್ ಬಿ. ದಾನಮ್ಮನವರ್ ಮತ್ತಿತರರು ಪಾಲ್ಗೊಳ್ಳುವರು.

## ಹರಿಹರದಲ್ಲಿ ಇಂದು ನೀರು ಪೂರೈಕೆ ವ್ಯತ್ಯಯ

ನಗರಸಭೆ ವ್ಯಾಪ್ತಿಯಲ್ಲಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನಿಂದ ಕೆಯುಐಡಿಎಫ್‌ಸಿ - ಕೆಐಯುಡ ಬ್ಲ್ಯೂಎಂಐಪಿ-ಪಿ.ಐ.ಯು ಜಲಸಿರಿ ಯೋಜನೆಯಡಿ ಕೈಗೊಂಡಿರುವ ನಿರಂತರ ಕುಡಿಯುವ ನೀರು ಸರಬರಾಜು ಕಾಮಗಾರಿ ಯ (24x7), ನೀರು ಶುದ್ಧೀಕರಣ ಘಟಕದ ಹತ್ತಿರ ಫ್ಲೋ ಕಂಟ್ರೋಲ್ ವಾಲ್ವ್ ಅಥವಾ ಮೀಟರ್ ಅಳವಡಿಸಬೇಕಾಗಿರು ವುದರಿಂದ ಇಂದು ನೀರು ಸರಬರಾಜಿನಲ್ಲಿ ವ್ಯತ್ಯಯವಾ ಗಲಿದೆ ಎಂದು ನಗರಸಭೆಯ ಪೌರಾಯುಕ್ತ ರಾದ ಶ್ರೀಮತಿ ಎಸ್.ಲಕ್ಷ್ಮಿ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಹಾಸ್ಯ ದರ್ಬಾರ್

ಸಿರಿ ಕನ್ನಡ ವಾಹಿನಿಯಿಂದ ಹರಟೆಮಲ್ಲರ, ಹಾಸ್ಯ ದಿಗ್ಗಜರನ್ನೊಳಗೊಂಡ 'ಹಾಸ್ಯ ದರ್ಬಾರ್' ಕಾರ್ಯಕ್ರಮವು ಬಿಐಇಟಿ ಕಾಲೇಜಿನ ಎಸ್.ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 11 ಮತ್ತು ಮಧ್ಯಾಹ್ನ 3 ಗಂಟೆಗೆ ಹಾಸ್ಯ ದರ್ಬಾರ್ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮದಲ್ಲಿ ಪ್ರಾಣೇಶ್, ಮುಖ್ಯಮಂತ್ರಿ ಚಂದ್ರು, ಎಂ.ಎಸ್. ನರಸಿಂಹಮೂರ್ತಿ, ಎಚ್.ಡುಂಡಿರಾಜ್, ಗುಂಡೂರಾವ್, ಸುಧಾ ಬರಗೂರ್, ಯಶವಂತ್ ಸರ್‌ದೇಶ್‌ಪಾಂಡೆ, ಮಿಮಿಕ್ರಿ ದಯಾನಂದ್ ಭಾಗವಹಿಸಲಿದ್ದಾರೆ. ವಿಶೇಷ ಅತಿಥಿಗಳಾಗಿ ಶಾಮನೂರು ಶಿವಶಂಕರಪ್ಪ, ಎಂ.ಪಿ. ರೇಣುಕಾಚಾರ್ಯ, ಎಸ್.ಎ. ರವೀಂದ್ರ ನಾಥ್, ಎಸ್.ಎಸ್. ಮಲ್ಲಿಕಾರ್ಜುನ್, ಎಸ್ ಟಿ. ವೀರೇಶ್, ಮಹಾಂತೇಶ್ ಬೀಳಗಿ, ರಿಷ್ಯಂತ್ ಉಪಸ್ಥಿತರಿರುವರು.

# ಅಂಗನವಾಡಿ, ಬಿಸಿಯೂಟ ಕಾರ್ಯಕರ್ತೆಯರ ಪ್ರತಿಭಟನೆ




ದಾವಣಗೆರೆ, ಸೆ.24- ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ, ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಶನ್, ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಫೆಡರೇಶನ್ ವತಿಯಿಂದ ನಗರದ ಜಯದೇವ ವೃತ್ತದಲ್ಲಿ ಪ್ರತಿಭಟನೆ ನಡೆಸಿ, ಉಪವಿಭಾಗಾಧಿಕಾರಿಗಳ ಮೂಲಕ ಪ್ರಧಾನಿ ಮೋದಿ ಅವರಿಗೆ ಮನವಿ ಸಲ್ಲಿಸಲಾಯಿತು.

ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು, ಬಿಸಿಯೂಟ ತಯಾರಕರು ಹಾಗೂ ಆಶಾ ಕಾರ್ಯಕರ್ತೆಯರಿಗೆ ನಿರ್ದಿಷ್ಟ ಕಾಲಮಿತಿಯೊಳಗೆ ಉಚಿತವಾಗಿ ಲಸಿಕೆ ಹಾಕಿಸುವುದು, ಸುರಕ್ಷಾ ಸಾಧನಗಳನ್ನು ಒದಗಿಸುವುದು, ಕೋವಿಡ್-19 ರ ಟೆಸ್ಟ್ ಕಡ್ಡಾಯವಾಗಿ ಮಾಡಿಸಿ, ಸೋಂಕಿನಿಂದ ರಕ್ಷಿಸುವುದು, ಮುಂಚೂಣಿಯಲ್ಲಿರುವ ಕಾರ್ಯಕರ್ತೆಯರಿಗೆ 50 ಲಕ್ಷ ರೂ.ಗಳ ಆರೋಗ್ಯ ವಿಮೆ ಮಾಡಿಸುವುದು. ಕರ್ತವ್ಯದಲ್ಲಿದ್ದಾಗಲೇ ಸಾವನ್ನಪ್ಪಿದರೆ ಸರ್ಕಾರಿ ಸೌಲಭ್ಯ ಕಲ್ಪಿಸುವುದು. ಹೆಚ್ಚುವರಿಯಾಗಿ ಮಾಸಿಕ 10 ಸಾವಿರ ಕೋವಿಡ್ ಭತ್ಯೆ ನೀಡಬೇಕು ಎಂಬಿತರೆ ಬೇಡಿಕೆಗಳನ್ನು ಈಡೇರಿಸುವಂತೆ ಪ್ರತಿಭಟನಾಕಾರರು ಆಗ್ರಹಿಸಿದರು.

ಕಾರ್ಮಿಕ ವಿರೋಧಿ ಸಂಹಿತೆಗಳನ್ನು ವಾಪಾಸ್ ಪಡೆಯಬೇಕು. ಯೋಜನೆಗಳ ಕೆಲಸಗಾರರನ್ನು 'ಕಾರ್ಮಿಕರು' ಎಂದು ಪರಿಗಣಿಸಿ, 21 ಸಾವಿರ ರೂ. ಮಾಸಿಕ ವೇತನ ಕೊಡಬೇಕು. ಕೇಂದ್ರ ಸರ್ಕಾರದ ಯೋಜನೆಗಳಾದ ಐಸಿಡಿಎಸ್, ಎನ್‌ಹೆಚ್‌ಎಂ ಮತ್ತು ಎಂಡಿಎಂಎಸ್ ಕೆಲಸಗಾರರನ್ನು ಖಾಯಂಗೊಳಿಸಿ, ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ನೀಡಬೇಕೆಂದು ಮನವಿ ಮಾಡಿದರು.

ರಾಜ್ಯದಲ್ಲಿ ಬಿಸಿಯೂಟ ತಯಾರಿಕರಿಗೆ ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳ ವೇತನವನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಉಭಯ ಸಂಘಟನೆಗಳ ಮುಖಂಡರಾದ ಆವರಗೆರೆ ಚಂದ್ರು, ಆವರಗೆರೆ ವಾಸು, ಎಂ.ಬಿ. ಶಾರದಮ್ಮ, ಎಸ್.ಎಸ್. ಮಲ್ಲಮ್ಮ, ವಿಶಾಲಾಕ್ಷಿ, ರೇಣುಕಮ್ಮ, ಸುಧಾ, ಕಾಳಮ್ಮ, ಚನ್ನಮ್ಮ, ಕೆ. ಪುಷ್ಪಾವತಿ, ಸರೋಜ, ಸಿ. ರಮೇಶ್, ಟಿ. ವನಜಾಕ್ಷಮ್ಮ, ಜ್ಯೋತಿಲಕ್ಷ್ಮಿ, ಮಳಲಕೆರೆ ಜಯಮ್ಮ ಮತ್ತಿತರರು ಭಾಗವಹಿಸಿದ್ದರು.

## ನಗರದ ವಿವಿಧ ಸ್ಥಳಗಳಿಗೆ ಜಿಲ್ಲಾಧಿಕಾರಿ ಭೇಟಿ : ಕಾಮಗಾರಿಗಳ ವೀಕ್ಷಣೆ



ದಾವಣಗೆರೆ, ಸೆ.24- ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅವರು ನಗರದ ಸಿ.ಜಿ. ಆಸ್ಪತ್ರೆಯಲ್ಲಿ ಸಿದ್ದಗೊಳ್ಳುತ್ತಿರುವ 1 ಹಾಗೂ 2 ಸಾವಿರ ಲೀ ಸಾಮರ್ಥ್ಯದ ಆಕ್ಸಿಜನ್ ಪ್ಲಾಂಟ್, ಎಂ.ಐ.ಸಿ.ಯು ವಾರ್ಡ್‌ನ ಸಿವಿಲ್ ಕಾಮಗಾರಿಗಳನ್ನು ಇಂದು ವೀಕ್ಷಿಸಿದರು.

ನಂತರ ನಗರದ ಅತ್ಯಂತ ಹಳೆಯ ದಾದ ಸರ್ಕಾರಿ ಹೈಸ್ಕೂಲ್‌ನ ನವೀಕರಣ ಕಾಮಗಾರಿಯನ್ನು ಮೂಲ ಸ್ವರೂಪಕ್ಕೆ ಧಕ್ಕೆಯಾಗದಂತೆ ಸ್ಮಾರ್ಟ್ ಸಿಟಿ ವತಿಯಿಂದ ಮಾಡಲಾಗುತ್ತಿದ್ದು, ಅತ್ಯಂತ ಜಾಗರೂಕತೆಯಿಂದ ಕಾಮಗಾರಿ ಮುಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲಾ ಗುರುಭವನ ರಸ್ತೆಯ ಸಿ.ಸಿ.ಕ್ಯಾಮೆರಾಗಳ ಅಳವಡಿಕೆ ಕಾಮಗಾರಿಗಳನ್ನು ಜಿಲ್ಲಾಧಿಕಾರಿಗಳು ವೀಕ್ಷಿಸಿದರು. ಈ ಸಂದರ್ಭದಲ್ಲಿ ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ಸ್ಮಾರ್ಟ್ ಸಿಟಿ ಅಧಿಕಾರಿ ರವೀಂದ್ರ ಮಲ್ಲಾಪುರ ಇದ್ದರು.

## ನಲ್ಕುಂದದಲ್ಲಿ ನಾಳೆ ಹೃದಯ ರೋಗ, ನರ ರೋಗ, ಕ್ಯಾನ್ಸರ್ ತಪಾಸಣಾ ಶಿಬಿರ

ದಾವಣಗೆರೆ, ಸೆ.24- ತಾಲ್ಲೂಕಿನ ನಲ್ಕುಂದ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ಸೇವಾ ಸಮಿತಿ ಹಾಗೂ ಬೆಂಗಳೂರಿನ ಸಪ್ತಗಿರಿ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ನಾಡಿದ್ದು ದಿನಾಂಕ 26 ರ ಭಾನುವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ ನಲ್ಕುಂದ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಉಚಿತ ಹೃದಯರೋಗ, ನರರೋಗ, ಮೂತ್ರಪಿಂಡದ ಕಲ್ಲು ಹಾಗೂ ಕ್ಯಾನ್ಸರ್ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾ.ಪಂ. ಕೆಡಿಪಿ ಸದಸ್ಯ ಪ್ಯಾಟಿ ಹನುಮಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶಿಬಿರದ ನಿರ್ವಹಣೆಯನ್ನು ಶ್ರೀ ಆಂಜನೇಯ ಸ್ವಾಮಿ ಸೇವಾ ಸಮಿತಿ ಪದಾಧಿಕಾರಿಗಳಾದ ಕೆ.ಸಿ. ಚಂದ್ರಪ್ಪ, ಎನ್.ಯು. ಪ್ರಕಾಶ್, ಟಿ.ಜಿ. ಪ್ರಭು, ಎಂ.ಎಸ್. ಸುರೇಶ, ಕೆಂಗಜ್ಜಿ ಬಸವರಾಜಪ್ಪ, ಎ.ಕೆ. ಗೋಪಾಲ್ ವಹಿಸಿಕೊಂಡಿದ್ದಾರೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ನಲ್ಕುಂದ ಗ್ರಾಮದ ಮಹದೇವಪ್ಪ, ರಂಗಸ್ವಾಮಿ, ಟಿ.ಕೆ. ವೀರಪ್ಪ, ಎಂ.ಹೆಚ್. ಕಂಬಪ್ಪ, ಎಂ.ಎಸ್. ಸುರೇಶ್, ಎನ್. ವಿ. ಪ್ರಕಾಶ್, ಮಿಲಿಟರಿ ರಾಜಪ್ಪ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ರೆಡ್ ಕ್ರಾಸ್‌ನಲ್ಲಿ ಲಸಿಕೆ

ದೇವರಾಜ ಅರಸು ಲೇಔಟ್ ನಲ್ಲಿನ ಬಿಎಸ್ಸೆನ್ನೆಲ್ ಕಚೇರಿ ಬಳಿಯ ಭಾರತೀಯ ರೆಡ್‌ಕ್ರಾಸ್ ಭವನದಲ್ಲಿ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ ವತಿಯಿಂದ ಇಂದು ಬೆಳಿಗ್ಗೆ 10.30ಕ್ಕೆ 18 ವರ್ಷ ಮೇಲ್ಪಟ್ಟವರಿಗೆ ಕೋವಿಶೀಲ್ಡ್ ನ 1ನೇ, 2ನೇ ಲಸಿಕೆ ನೀಡುವುದಾಗಿ ಸೊಸೈಟಿ ಉಪಾಧ್ಯಕ್ಷ ಡಿ.ಎಸ್. ಸಿದ್ದಣ್ಣ ತಿಳಿಸಿದ್ದಾರೆ.

## ಕೃಷಿ ಸಿಂಚಾಯಿ ಯೋಜನೆ ಸೌಲಭ್ಯ ಪಡೆಯಲು ಸೂಚನೆ

ದಾವಣಗೆರೆ, ಸೆ.24 - ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಸೂಕ್ಷ್ಮ ನೀರಾವರಿ ಕಾರ್ಯಕ್ರಮದಡಿ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ವ್ಯವಸ್ಥೆ ಅಳವಡಿಸಲು ದಾವಣಗೆರೆ ತಾಲ್ಲೂಕಿನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಣ್ಣ ಮತ್ತು ಅತಿ ಸಣ್ಣ ಹಾಗೂ ಇತರೆ ವರ್ಗಕ್ಕೆ ಸೇರಿದ ರೈತರಿಗೆ ಸಹಾಯಧನ ನೀಡಲಾಗುವುದು.

ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಣ್ಣ ಮತ್ತು ಅತಿಸಣ್ಣ ರೈತರಿಗೆ ಶೇ.90 ಹಾಗೂ ಇತರೆ ವರ್ಗಕ್ಕೆ ಸೇರಿದ ರೈತರಿಗೆ ಶೇ.45 ರಷ್ಟು ಸಹಾಯಧನ ಲಭ್ಯವಿದ್ದು, ಸಣ್ಣ ಮತ್ತು ಅತಿಸಣ್ಣ ರೈತರು ದಾವಣಗೆರೆ ತಾಲ್ಲೂಕು ರೈತ ಸಂಪರ್ಕ ಕೇಂದ್ರಗಳ ಸಹಾಯಕ ತೋಟಗಾರಿಕೆ ಅಧಿಕಾರಿಗಳನ್ನು ಸಂಪರ್ಕಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ತೋಟಗಾರಿಕೆ ಅಧಿಕಾರಿ ಆನಗೋಡು ಮೊ.ಸಂ:7019819101, ಮಾಯಕೊಂಡ ಮೊ. ಸಂ: 9902866619,8722551293,7899445111, ಕಸಬಾ ಮೊ.ಸಂ: 7022244152 ಸಂಪರ್ಕಿಸಬಹುದು.

## ಡಿಆರ್‌ಆರ್ ಸರ್ಕಾರಿ ಪಾಲಿಟೆಕ್ನಿಕ್ ಪ್ರವೇಶ ಅವಧಿ ವಿಸ್ತರಣೆ

ದಾವಣಗೆರೆ, ಸೆ.24- ಡಿಆರ್‌ಆರ್ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ 2021-22 ನೇ ಸಾಲಿಗೆ ಡಿಪ್ಲೋಮಾ ಸಿಪಿ ಕನ್ನಡ ಕೋರ್ಸ್‌ನ ಉಳಿದ ಸೀಟುಗಳಿಗೆ ಪ್ರವೇಶ ಅವಧಿಯನ್ನು ಇದೇ ದಿನಾಂಕ 30 ರವರೆಗೆ ವಿಸ್ತರಿಸಿ ಮುಕ್ತ ಪ್ರವೇಶಾವಕಾಶವನ್ನು ನೀಡಲಾಗಿದೆ. ವಿದ್ಯಾರ್ಥಿಗಳು ಸಂಬಂಧಪಟ್ಟ ದಾಖಲೆಗಳೊಂದಿಗೆ ಹಾಜರಾಗಿ ಪ್ರವೇಶ ಪಡೆಯಲು ಪ್ರಾಂಶುಪಾಲರು ತಿಳಿಸಿದ್ದಾರೆ.

## ನಗರದಲ್ಲಿ 'ಎಸ್‌ಪಿಬಿ ಪುಷ್ಪ ನಮನ'

ನಿಜಲಿಂಗಪ್ಪ ಬಡಾವಣೆ ರಿಂಗ್‌ರಸ್ತೆಯಲ್ಲಿರುವ ಕರ್ನಾಟಕ ಹಿಮೋಫಿಲಿಯಾ ಸೊಸೈಟಿ ವತಿಯಿಂದ 'ಎಸ್‌ಪಿಬಿ ಪುಷ್ಪ ನಮನ' ಮತ್ತು ಅವರ ಕೊಡುಗೆಗಳ ಬಗ್ಗೆ ಕಾರ್ಯಕ್ರಮವು ಇಂದು ಬೆಳಿಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ ಎಂದು ಸೊಸೈಟಿಯ ಡಾ. ಸುರೇಶ್ ಹನಗವಾಡಿ ತಿಳಿಸಿದ್ದಾರೆ.

## ನಗರದಲ್ಲಿಂದು ಪಂಚಮಸಾಲಿ ವಿಚಾರ ಸಂಗಮ

ಜಿಲ್ಲಾ ವೀರಶೈವ ಲಿಂಗಾಯತ ಪಂಚಮಸಾಲಿ ನೌಕರರ ಘಟಕದ ವತಿಯಿಂದ ಸಮಾಜದ ಕಚೇರಿಯಲ್ಲಿ ಇಂದು ಸಂಜೆ 6 ಗಂಟೆಗೆ 'ವಿಚಾರ ಸಂಗಮ' ನಡೆಯಲಿದೆ.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಮಾಜ ಕಾರ್ಯಕರ್ತ ವೀರೇಶ್ ಕಳ್ಳಿಮನಿ ಅವರು ಇಲಾಖೆಯಿಂದ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಇರುವ ಯೋಜನೆಗಳ ಮಾಹಿತಿ ಹಾಗೂ ಇತರೆ ಇಲಾಖೆಗಳಿಂದ ಸಿಗುವ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ನೀಡಲಿದ್ದಾರೆ ಎಂದು ಎಸ್. ಮಲ್ಲಿನಾಥ್, ಕೆ.ಶಿವಶಂಕರ್, ಶ್ರೀಧರ್ ತಿಳಿಸಿದ್ದಾರೆ.

## ಭಾರತ್ ಬಂದ್ : ನಗರದಲ್ಲಿ ಇಂದು ಪೂರ್ವಭಾವಿ ಸಭೆ

ಸಂಯುಕ್ತ ಹೋರಾಟ ಕರ್ನಾಟಕ ದಾವಣಗೆರೆ ಜಿಲ್ಲೆಯ ವತಿಯಿಂದ ಇದೇ ದಿನಾಂಕ 27 ರ ಸೋಮವಾರ ಕರೆಕೊಟ್ಟಿರುವ ಭಾರತ್ ಬಂದ್ ಗೆ ಪೂರ್ವಭಾವಿಯಾಗಿ ಇಂದು ಬೆಳಿಗ್ಗೆ 11 ಗಂಟೆಗೆ ಪ್ರಚಾರಾಂದೋಲನದ ಸಭೆಯ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಸಭೆಯ ಉದ್ಘಾಟನೆಯನ್ನು ತೇಜಸ್ವಿ ಪಟೇಲ್, ಸಂಯುಕ್ತ ಹೋರಾಟ ಕರ್ನಾಟಕ ಜಿಲ್ಲಾ ಸಂಚಾಲಕ ಹೆಚ್.ಜಿ. ಉಮೇಶ್, ಮಧು ತೊಗಲೇರಿ, ಶ್ರೀನಿವಾಸ್, ಮಂಜುನಾಥ್ ಕುಕ್ಕುವಾಡ, ಭಾರತಿ ಮತ್ತಿತರರು ಭಾಗವಹಿಸಲಿದ್ದಾರೆ.

## 5 ಸರ್ಕಾರಿ ಶಾಲೆಗಳ ದತ್ತು



ದಾವಣಗೆರೆ, ಸೆ.24 - ಲಾಸ್ಯ ಫೌಂಡೇಶನ್ ಸಂಸ್ಥೆಯ ಸಂಸ್ಥಾಪಕರೂ, ಕದಂಬ ಕ್ರಾಂತಿ ಸಂಪಾದಕರೂ ಆದ ಸೂರ್ಯಪ್ರಕಾಶ್ ಅವರು ಮಾಜಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರ 54ನೇ ಜನ್ಮದಿನದ ಪ್ರಯುಕ್ತ ತಮ್ಮ ಲಾಸ್ಯ ಫೌಂಡೇಶನ್ ಸಂಸ್ಥೆಯಿಂದ ದಾವಣಗೆರೆ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಗೆ ಬರುವ 5 ಸರ್ಕಾರಿ ಶಾಲೆಗಳಾದ, ದಾವಣಗೆರೆ ಉತ್ತರ ವಲಯದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ವಡ್ಡರಕೇರಿ, ಕೆ.ಆರ್ ರಸ್ತೆ, ಸ. ಹಿ.ಪ್ರಾ. ಉರ್ದು ಶಾಲೆ, ಸಣ್ಣ ಮಿಲ್ಲತ್, ಮಾಗಾನಹಳ್ಳಿ ರಸ್ತೆ, ದಕ್ಷಿಣ ವಲಯದ ಸ.ಹಿ.ಪ್ರಾ. ಶಾಲೆ, ಶ್ರೀರಾಮನಗರ, ಹಾಗೂ ಜಗಳೂರು ಮತ್ತು ಹೊನ್ನಾಳಿಯ ಎರಡು ಸ.ಹಿ.ಪ್ರಾ. ಶಾಲೆಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ದತ್ತು ತೆಗೆದುಕೊಂಡಿದ್ದಾರೆ.

## ನಗರದಲ್ಲಿ ಇಂದು

ಮಹಿಳಾ ಪ್ರಥಮ ದರ್ಜೆ ಕಾಲೇಜಿಗೆ ಡೆಸ್ಕ್‌ಗಳನ್ನು ನೀಡುವ ಕಾರ್ಯಕ್ರಮವು ಇಂದು ಬೆಳಿಗ್ಗೆ 11.30ಕ್ಕೆ ನೆರವೇರಲಿದ್ದು, ಕಾರ್ಯಕ್ರಮಕ್ಕೆ ಜಿ.ಎಂ.ಸಿದ್ದೇಶ್ವರ, ಎಸ್.ಎ. ರವೀಂದ್ರನಾಥ್, ಡಿಸಿ ಮಹಾಂತೇಶ್ ಬೀಳಗಿ ಚಾಲನೆ ನೀಡಲಿದ್ದಾರೆ.

### ಕಾಣೆಯಾಗಿದ್ದಾರೆ



ಮುದಹದಡಿ ಗ್ರಾಮದ ವೀರಭದ್ರಪ್ಪ (43) ಅವರು ಬೆಂಗಳೂರಿನ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವುದಾಗಿ ಹೇಳಿ ಹೋದವರು ವಾಪಸ್ ಬಂದಿರುವುದಿಲ್ಲ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ದಾವಣಗೆರೆ ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂಗಾಗಲೀ ಅಥವಾ ಹದಡಿ ಪೊಲೀಸ್ ಠಾಣೆಯ ಪಿ.ಎಸ್.ಐ. ರವರಿಗಾಗಲೀ ತಿಳಿಸಲು ಕೋರಿದೆ.

ಸಹೋದರ : **ನಾಗರಾಜ್** ಮುದಹದಡಿ

## ಫ್ರಂಟ್‌ಲೈನ್ ನೌಕರರೆಂದು ಘೋಷಿಸಲು ಆಗ್ರಹ




### ಸ್ಕೀಂ ವರ್ಕರ್ಸ್‌ಗಳಾದ ಆಶಾ ಕಾರ್ಯಕರ್ತೆಯರ ಪ್ರತಿಭಟನೆ

ದಾವಣಗೆರೆ, ಸೆ.24- ಕೋವಿಡ್ ಸೇವೆಗೆ ನೇಮಿಸಲ್ಪಟ್ಟಿರುವ ಎಲ್ಲಾ ಸ್ಕೀಂ ವರ್ಕರ್ಸ್‌ಗಳನ್ನು ಫ್ರಂಟ್‌ಲೈನ್ ನೌಕರರೆಂದು ಘೋಷಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಗರದಲ್ಲಿ ಇಂದು ಸ್ಕೀಂ ವರ್ಕರ್ಸ್ ಗಳಾದ ಆಶಾ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದರು.

ಉಪವಿಭಾಗಾಧಿಕಾರಿ ಕಚೇರಿ ಆವರಣದಲ್ಲಿ ಜಮಾಯಿಸಿದ್ದ ಪ್ರತಿಭಟನಾಕಾರರು, ವಿವಿಧ ಬೇಡಿಕೆಗಳುಳ್ಳ ಮನವಿಯನ್ನು ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್ ಮುಖಾಂತರ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಸಲ್ಲಿಸಿದರು.

ಎಲ್ಲಾ ಸ್ಕೀಂ ವರ್ಕರ್‌ಗಳಿಗೂ ಕೂಡಲೇ ಉಚಿತ ಮತ್ತು ಸಾರ್ವತ್ರಿಕ ಲಸಿಕೆ ಅಭಿಯಾನ ಕೈಗೊಳ್ಳಬೇಕು, ಫ್ರಂಟ್‌ಲೈನ್ ನೌಕರರಿಗೆ ಮೊದಲ ಆದ್ಯತೆ ನೀಡಬೇಕು, ನಿಗದಿತ ಅವಧಿಯೊಳಗೆ ಸಾರ್ವತ್ರಿಕ ಮತ್ತು ಉಚಿತ ಲಸಿಕಾಕರಣವನ್ನು ಖಾತ್ರಿಪಡಿಸಲು ವ್ಯಾಕ್ಸಿನ್ ಹಂಚಿಕೆಯನ್ನು ಸರ್ಕಾರದ ಹಿಡಿತಕ್ಕೆ ಒಳಪಡಿಸಬೇಕು, ಮಹಾಮಾರಿ ನಿರ್ವಹಣೆಯಲ್ಲಿ ತೊಡಗಿರುವ ಎಲ್ಲಾ ಆರೋಗ್ಯ ಸಿಬ್ಬಂದಿ, ಫ್ರಂಟ್‌ಲೈನ್ ನೌಕರರು ಹಾಗೂ ಸ್ಕೀಂ ವರ್ಕರ್‌ಗಳಿಗೂ ಸುರಕ್ಷಾ ಸಾಧನ, ಸಲಕರಣೆ ಇತ್ಯಾದಿಗಳನ್ನು ಖಾತ್ರಿಪಡಿಸಬೇಕು. ಎಲ್ಲಾ ಫ್ರಂಟ್‌ಲೈನ್ ನೌಕರರಿಗೂ ನಿಯತಕಾಲಿಕವಾಗಿ ಉಚಿತ ಕೋವಿಡ್-19 ಪರೀಕ್ಷೆ ನಡೆಸಬೇಕು, ಕೋವಿಡ್ ಸೋಂಕಿತ ಫ್ರಂಟ್‌ಲೈನ್ ನೌಕರರಿಗೆ ಆಸ್ಪತ್ರೆ ಸೇವೆಯಲ್ಲಿ ಮೊದಲ ಆದ್ಯತೆ ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ತಿಪ್ಪೇಸ್ವಾಮಿ ಅಣಬೇರು, ಭಾರತಿ, ಮಧು ತೊಗಲೇರಿ, ಮಂಜುಳಾ, ನಿರ್ಮಲ, ಶಾಂತ, ಫರ್ವೀನ್ ಬಾನು, ಭಾರತಿ, ಪುಷ್ಪ, ಆಶಾ, ವಿಜಯಲಕ್ಷ್ಮಿ, ಚಂದ್ರಮ್ಮ ಅನಿತಾ, ತಿಪ್ಪಕ್ಕ ಇತರರು ಪಾಲ್ಗೊಂಡಿದ್ದರು.

## ಗೌಡ ಸಾರಸ್ವತ : ಸಭೆ

ದಾವಣಗೆರೆ, ಸೆ.24- ನಗರದ ಗೌಡ ಸಾರಸ್ವತ ಸಮಾಜದ ಸರ್ವ ಸದಸ್ಯರ ಮಹಾಸಭೆಯನ್ನು ನಾಡಿದ್ದು ದಿನಾಂಕ 26 ರಂದು ಭಾನುವಾರ ಸಂಜೆ 6 ಗಂಟೆಗೆ ಶ್ರೀ ಸುಕೃತೀಂದ್ರ ಕಲಾ ಮಂದಿರದಲ್ಲಿ ಕರೆಯಲಾಗಿದೆ.

**ಶ್ರೀನಿವಾಸ ಹೋಂಡಾ**

**ಅಧಿಕೃತ ಹೋಂಡಾ ದ್ವಿಚಕ್ರ ವಾಹನದ ಮಾರಾಟಗಾರರಿಂದ ಆಹ್ವಾನ, ದಾವಣಗೆರೆ ಜಿಲ್ಲೆ ಸಂತೇಬೆನ್ನೂರಲ್ಲಿ ಹೋಂಡಾ ದ್ವಿಚಕ್ರ ವಾಹನದ ಅಧಿಕೃತ ಸರ್ವೀಸ್ ಸೆಂಟರ್‌ಗೆ ಆಹ್ವಾನಿಸುತ್ತಿದ್ದೇವೆ. ಆಸಕ್ತಿವುಳ್ಳವರು ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ**

**ಹದಡಿ ಮೇನ್ ರೋಡ್, ದಾವಣಗೆರೆ**
**ಫೋನ್ ನಂ : 8884445242**

ಶ್ರೀ ಕುಮಾರ ವಿಜಯ ನಾಟಕ ಸಂಘ (ರಿ.) ಚಿತ್ತರಗಿ ಇವರಿಂದ
ಭಾರೀ ಜನದಟ್ಟಣೆಯ 25ನೇ ಪ್ರಯೋಗದತ್ತ



**ಬಂದರ ಬಾರ ಬೋರಂಗಿ**
ಕೌಟುಂಬಿಕ ಹಾಸ್ಯಭರಿತ ಸಾಮಾಜಿಕ ನಾಟಕ ಪ್ರದರ್ಶನ
ಪ್ರತಿದಿನ 2 ಪ್ರಯೋಗಗಳು, ಮಧ್ಯಾಹ್ನ 3 ಕ್ಕೆ, ಸಂಜೆ 6 ಕ್ಕೆ
ದಾವಣಗೆರೆ ಪಿ.ಬಿ. ರಸ್ತೆ, (ಶ್ರೀ ನರಹರಿಶೇಟ್ ಕಲ್ಯಾಣ ಮಂಟಪದ ಎದುರಿಗೆ) ಟಿ.ಎಂ.ಪಿ.ಎನ್. ಕಾಂಪೌಂಡ್‌ನಲ್ಲಿ
ಸಂಚಾಲಕರು : ಮಂಜುನಾಥ್ ಜಾಲ್ಯಾಳ 98803 42862

**ಬೇಕಾಗಿದ್ದಾರೆ**

ಬೆಂಗಳೂರಿನಲ್ಲಿ 1 ವರ್ಷದ ಮಗುವನ್ನು ನೋಡಿಕೊಳ್ಳಲು ಲಿಂಗಾಯತ ಮಹಿಳೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ ಕೊಡಲಾಗುವುದು. ಊಟ ಮತ್ತು ವಸತಿ ನೀಡಲಾಗುವುದು.

ಮೊ: 63627 82630

**ಜನ್ಮದಿನದ ಶುಭಾಶಯಗಳು**



ಇಂದು ಜನ್ಮದಿನದ ಸಂಭ್ರಮದಲ್ಲಿರುವ ಶ್ರೀ ಸ್ವಾಮಿ ವಿವೇಕಾನಂದ ಗೆಳೆಯರ ಬಳಗದ ಅಧ್ಯಕ್ಷರೂ, ಮಾರುತಿ ಸೇವಾ ಸಮಿತಿ ಕಾರ್ಯದರ್ಶಿಗಳೂ, 10ನೇ ವಾರ್ಡಿನ ಬಿಜೆಪಿ ಬೂತ್ ಅಧ್ಯಕ್ಷರೂ, ಆತ್ಮೀಯರೂ ಆದ

**ಶ್ರೀ ಎರ್ರಿಸ್ವಾಮಿ**

ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು. ಭಗವಂತನು ಅವರಿಗೆ ಆಯುರಾರೋಗ್ಯ, ಐಶ್ವರ್ಯ, ಸುಖ, ಶಾಂತಿ, ನೆಮ್ಮದಿ ನೀಡಲೆಂದು ಶುಭ ಹಾರೈಸುತ್ತೇವೆ...

**ಎರ್ರಿಸ್ವಾಮಿ ಗೆಳೆಯರ ಬಳಗ**
ದಾವಲ್ ಪೇಟೆ, ದಾವಣಗೆರೆ.

## ಡೀಸೆಲ್ ಬೆಲೆ 20 ಪೈಸೆ ಏರಿಕೆ

### ಸೆ.5ರ ನಂತರ ಮೊದಲ ಬಾರಿಗೆ ಬೆಲೆ ಏರಿಕೆ

ನವದೆಹಲಿ, ಸೆ. 24 – ಶುಕ್ರವಾರ ಡೀಸೆಲ್ ಬೆಲೆಯನ್ನು ಲೀಟರ್‌ಗೆ 20 ಪೈಸೆ ಹೆಚ್ಚಿಸಲಾಗಿದೆ. ಎರಡು ವಾರಗಳ ನಂತರ ಬೆಲೆ ಏರಿಕೆ ಮಾಡಲಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ 2018ರ ನಂತರ ಅತಿ ಹೆಚ್ಚಿನ ಮಟ್ಟಕ್ಕೆ ತಲುಪಿದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಡೀಸೆಲ್ ಬೆಲೆಯಲ್ಲಿ ಏರಿಕೆ ಮಾಡಲಾಗಿದೆಯಾದರೂ, ಪೆಟ್ರೋಲ್ ಬೆಲೆ ಯಥಾಸ್ಥಿತಿಯಲ್ಲಿ ಮುಂದುವರೆದಿದೆ. ಸೆಪ್ಟೆಂಬರ್ 5ರ ನಂತರ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರಿಕೆಯಾಗಿದ್ದರೂ ಸಹ, ತೈಲ ಬೆಲೆ ಪರಿಷ್ಕರಣೆ ಮಾಡಿರಲಿಲ್ಲ.

ಶುಕ್ರವಾರ ಜಾಗತಿಕವಾಗಿ ಕಚ್ಚಾ ತೈಲದ ಬೆಲೆ ಬ್ಯಾರಲ್‌ಗೆ 77.50 ಡಾಲರ್‌ಗಳಿಗೆ ತಲುಪಿದೆ. ಸತತ ಐದು ವಾರಗಳಿಂದ ಕಚ್ಚಾ ತೈಲದ ಬೆಲೆ ಏರಿಕೆ ಮಾಡಲಾಗುತ್ತಿದೆ. ಕಳೆದ ವಾರ ಕಚ್ಚಾ ತೈಲ ಬೆಲೆ ಶೇ.2ರಷ್ಟು ಏರಿಕೆಯಾಗಿದೆ.

ಆಗಸ್ಟ್ ತಿಂಗಳಿಗೆ ಹೋಲಿಸಿದರೆ ಸೆಪ್ಟೆಂಬರ್ 5ರ ನಂತರ ಕಚ್ಚಾ ತೈಲದ ಬೆಲೆ ಬ್ಯಾರಲ್‌ಗೆ 6-7 ಡಾಲರ್‌ಗಳಷ್ಟು ಹೆಚ್ಚಾಗಿದೆ.

ಬೆಲೆ ಹೆಚ್ಚಾದಂತೆ ತೈಲ ಕಂಪನಿಗಳು ಪ್ರತಿದಿನ ಬೆಲೆಗಳ ಪರಿಷ್ಕರಣೆ ಮಾಡಬೇಕಿತ್ತು. ಆದರೆ, ಮೂರು ವಾರಗಳಾದರೂ ಬೆಲೆ ಏರಿಕೆ ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳಲಾಗಿತ್ತು. ಈಗ ಡೀಸೆಲ್ ಬೆಲೆ ಏರಿಕೆ ಪುನರಾರಂಭಿಸಲಾಗಿದೆ.

## ಆಯೋಗದ ವರದಿ ನಂತರ ಮೀಸಲಾತಿ ಪರಿಷ್ಕರಣೆ : ಸಿಎಂ

ಬೆಂಗಳೂರು, ಸೆ. 24 - ಹಿಂದುಳಿದ ವರ್ಗಗಳ ಆಯೋಗ ವರದಿ ನೀಡಿದ ನಂತರ ಮೀಸಲಾತಿ ಪರಿಷ್ಕರಣೆಗೆ ಸೂಕ್ತ ಕ್ರಮ ಕೈಗೊಳ್ಳುವ ಭರವಸೆಯನ್ನು ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದಲ್ಲದೆ, ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಸರ್ಕಾರ ಅನುಷ್ಠಾಗೊಳಿಸುವುದು ಶತಸಿದ್ಧ ಎಂದು ಸ್ಪಷ್ಟಪಡಿಸಿದ್ದಾರೆ.

ವಿವಿಧ ಬೇಡಿಕೆಗಳಿಗೆ ಒತ್ತಾಯಿಸಿ ಕಾಂಗ್ರೆಸ್ ಸದಸ್ಯರು ಧರಣಿ ನಡೆಸುವ ಸಂದರ್ಭದಲ್ಲೇ ಮಧ್ಯೆ ಪ್ರವೇಶಿಸಿದ ಮುಖ್ಯಮಂತ್ರಿ ಅವರು, ಸುಪ್ರೀಂ ಕೋರ್ಟ್ ಮೀಸಲಾತಿ ಹಂಚಿಕೆ ವಿಷಯವನ್ನು ರಾಜ್ಯ ಸರ್ಕಾರಗಳಿಗೆ ಬಿಡಲಾಗಿದೆ.

ನ್ಯಾಯಾಲಯ ನೀಡಿರುವ ಮಾರ್ಗ ಸೂಚಿ ಸರ್ಕಾರದ ಕೈ ಸೇರಿಲ್ಲ, ವರದಿ ಬಂದ ನಂತರ ಹಿಂದುಳಿದ ವರ್ಗಗಳ ಆಯೋಗ ನೀಡುವ ವರದಿಯನ್ನು ಆಧಾರವಾಗಿಟ್ಟು ಕೊಂಡು ಮೀಸಲಾತಿ ಪರಿಷ್ಕರಣೆಗೆ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದರು. ಮೀಸಲಾತಿ ಪ್ರಮಾಣ ಏರಿಕೆ ಮತ್ತು ಇತರೆ ಮೀಸಲಾತಿ ಪಟ್ಟಿಗೆ ಸೇರಿಸಬೇಕೆಂದು ಹಲವು ಸಮುದಾಯಗಳು ಸರ್ಕಾರಕ್ಕೆ ಮನವಿ ಸಲ್ಲಿಸಿವೆ, ಇದರಲ್ಲಿ ತಪ್ಪಿಲ್ಲ. ತಾಂತ್ರಿಕವಾಗಿ ಯುಗ ಬೆಳೆಯುತ್ತಿದ್ದಂತೆ ಅತೀ ಹಿಂದುಳಿದ ಸಮುದಾಯದವರೂ ಶಿಕ್ಷಣ ಪಡೆದಿದ್ದಾರೆ, ಆ ಸಮುದಾಯಗಳೂ ಉದ್ಯೋಗದಲ್ಲಿ ಮೀಸಲಾತಿ ಕೇಳುತ್ತಿವೆ.

ಮಹಾರಾಷ್ಟ್ರದಲ್ಲಿ ಮರಾಠಿಗರ ಮೀಸಲಾತಿ ಹೆಚ್ಚಳ ಮಾಡಿರುವುದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗಿತ್ತು, ಸುಪ್ರೀಂ ಕೋರ್ಟ್ ಈ ಮೀಸಲಾತಿಯನ್ನು ರದ್ದುಪಡಿಸಿದೆ.

ನಾವು ಯಾವುದೇ ಸಮುದಾಯಕ್ಕೂ ಮೀಸಲಾತಿ ನೀಡಬೇಕಾದರೆ ಸಾಧಕ-ಬಾಧಕಗಳ ಬಗ್ಗೆ ಚರ್ಚೆ ಮಾಡಬೇಕು. ಈ ಬಗ್ಗೆ ಸರ್ಕಾರ ಅಧ್ಯಯನ ನಡೆಸಲಿದೆ, ಈಗಲೂ ನಾವು ಸಕಾರಾತ್ಮಕವಾಗಿದ್ದೇವೆ. ಹಿಂದುಳಿದ ವರ್ಗಗಳ ಆಯೋಗ ವರದಿ ನೀಡಿದ ನಂತರ ಸರ್ಕಾರ ಸೂಕ್ತ ಕ್ರಮಕೈಗೊಳ್ಳಲಿದೆ ಎಂಬ ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಬಗ್ಗೆ ಪ್ರಸ್ತಾಪ ಮಾಡಿದ ಮುಖ್ಯಮಂತ್ರಿ, ಕಾಂಗ್ರೆಸ್ ಆಡಳಿತ ವಿದೇಶಿ ಶಿಕ್ಷಣವನ್ನು ಅನುಷ್ಠಾಗೊಳಿಸಿದೆ. ನಾವು ಸ್ವದೇಶಿ ಶಿಕ್ಷಣ ನೀಡಿ ಉದ್ಯೋಗಾವಕಾಶ ಕಲ್ಪಿಸಬೇಕೆಂಬ ಉದ್ದೇಶದಿಂದ ನೂತನ ಶಿಕ್ಷಣ ನೀತಿಯನ್ನು ಜಾರಿಗೊಳಿಸುತ್ತಿದ್ದೇವೆ.

ಕಾಂಗ್ರೆಸ್ ವಿರೋಧ ಮಾಡುತ್ತದೆ ಎಂದು ಹೊಸ ನೀತಿ ಜಾರಿಯಿಂದ ಹಿಂದೆ ಸರಿಯುವುದಿಲ್ಲ, ಗ್ರಾಮೀಣ ಮಕ್ಕಳಿಗೂ ಉತ್ತಮ ಶಿಕ್ಷಣ ನೀಡಿ, ಮುಂದೆ ಉದ್ಯೋಗಾವಕಾಶ ದೊರಕಿಸುವಲ್ಲಿ ಈ ನೀತಿ ಉತ್ತೇಜನಕಾರಿಯಾಗಿದೆ ಎಂದು ಬೊಮ್ಮಾಯಿ ಹೇಳಿದರು.

### ಎಪಿಎಂಸಿಗಳಲ್ಲಿ ಶೀತಲಗೃಹಕ್ಕೆ ಅವಕಾಶ

ಬೆಂಗಳೂರು, ಸೆ. 24 - ಪ್ರತಿ ತಾಲ್ಲೂಕಿನಲ್ಲೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕೆಲಸ ಮಾಡುವ ಸ್ಥಿತಿಯಲ್ಲಿ ಇಲ್ಲ, ಸ್ಥಳಾವಕಾಶವಿರುವ ಎಪಿಎಂಸಿಗಳಲ್ಲಿ ಶೇ. 50ರಷ್ಟು ಶೀತಲಗೃಹ ನಿರ್ಮಾಣಕ್ಕೆ ಅವಕಾಶ ಮಾಡಿಕೊಡಲಾಗುವುದು ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ವಿಧಾನಸಭೆಗೆ ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಕೆ.ಎಂ.ಶಿವಲಿಂಗೇಗೌಡ ಪ್ರಶ್ನೆಗೆ ಉತ್ತರಿಸಿದ ಅವರು, ಖಾಸಗಿ-ಸಾರ್ವಜನಿಕ ಸಹಭಾಗಿತ್ವದಲ್ಲಿ ಶೀತಲಗೃಹ ನಿರ್ಮಾಣ ಮಾಡಬಹುದು ಎಂದರು.

ರಾಜ್ಯದಲ್ಲಿ 160 ಎಪಿಎಂಸಿಗಳಿವೆ, ಬೆಂಗಳೂರಿನಲ್ಲಿ ತರಕಾರಿ, ಹೂವು, ಹಣ್ಣಿನ ಉತ್ಪನ್ನಗಳಿಗೆ ಹಾಗೂ ಭತ್ತ ಮತ್ತು ಅಕ್ಕಿ ಉತ್ಪನ್ನಗಳಿಗೆ ಕಾರಟಗಿಯಲ್ಲಿ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಇದೆ ಎಂದು ಹೇಳಿದರು.

## ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ನೂತನ ಶಿಕ್ಷಣ ನೀತಿ ರದ್ದು



ಬೆಂಗಳೂರು, ಸೆ. 24 - ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಾದರೆ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ರದ್ದುಗೊಳಿಸುತ್ತೇವೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ರಾಷ್ಟ್ರೀಯ ಶಿಕ್ಷಣ ನೀತಿ ಜಾರಿ ವಿಚಾರವಾಗಿ ಸದನದಲ್ಲಿ ಚರ್ಚೆಗೆ ಅವಕಾಶ ನೀಡಿ ಎಂದು ಮನವಿ ಮಾಡಿದರೂ ಅವಕಾಶ ಕೊಟ್ಟಿಲ್ಲ, ಶಿಕ್ಷಣ ನೀತಿ ರಾಜ್ಯಕ್ಕೆ ಸಂಬಂಧಿಸಿದ ವಿಚಾರ, ಇದರ ಜಾರಿಗೆ ಅವಕಾಶ ನೀಡುವುದಿಲ್ಲ ಎಂದರು.

ರಾಜ್ಯ ಸರ್ಕಾರ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನಕ್ಕೆ ತರುತ್ತಿದೆ, ಬಿಜೆಪಿ ಆಡಳಿತದಲ್ಲಿರುವ ಯಾವ ರಾಜ್ಯದಲ್ಲೂ ಇದು ಅನುಷ್ಠಾನಗೊಳ್ಳುತ್ತಿಲ್ಲ ಎಂದವರು ಹೇಳಿದರು.

ರಾಜ್ಯದ ಪ್ರಾಥಮಿಕ ಶಿಕ್ಷಣ ಸಚಿವರು ಈ ನೀತಿಯ ಅನುಷ್ಠಾನ ಕ್ಲಿಷ್ಟವಾಗಿದ್ದು, ಅದರ ಅಧ್ಯಯನ ನಡೆಯಬೇಕು ಎಂದು ಹೇಳಿದ್ದಾರೆ, ಸದನದಲ್ಲಿ ಈ ಬಗ್ಗೆ ಚರ್ಚೆ ಮಾಡೋಣ, ಇದರಲ್ಲಿ ಏನೆಲ್ಲಾ ಪ್ರಯೋಜನವಾಗಲಿದೆ ಎಂಬುದನ್ನು ಸ್ಪಷ್ಟಪಡಿಸಿ ಎಂಬ ಬೇಡಿಕೆಗೆ ಸರ್ಕಾರ ಸ್ಪಂದಿಸಿಲ್ಲ ಎಂದರು.

ಬಿಜೆಪಿ ಅಧಿಕಾರದಲ್ಲಿರುವ ಮಧ್ಯಪ್ರದೇಶ, ಗುಜರಾತ್‌ನಲ್ಲಿ ಈ ಶಿಕ್ಷಣ ನೀತಿ ಜಾರಿಗೊಳಿಸಲಿ, ಕರ್ನಾಟಕದಲ್ಲಿ ಈ ನೀತಿ ಜಾರಿಗೆ ಅವಕಾಶ ನೀಡುವುದಿಲ್ಲ, ಇದು ನಮ್ಮ ಮಕ್ಕಳ ಭವಿಷ್ಯದ ವಿಚಾರ, ಇದನ್ನು ವಿರೋಧಿಸುತ್ತೇವೆ, ಈ ಶಿಕ್ಷಣ ನೀತಿ ನಮ್ಮ ರಾಜ್ಯಕ್ಕೆ ಅವಶ್ಯಕತೆ ಇಲ್ಲ ಎಂದರು.

## ಲಯನ್ಸ್ ವಲಯಾಧ್ಯಕ್ಷರಾಗಿ ವೆಂಕಟಾಚಲಂ, ಕುಮಾರ್





ದಾವಣಗೆರೆ, ಸೆ.24- ಜಿಲ್ಲೆ ಲಯನ್ಸ್ 317 - ಸಿ ಪ್ರಾಂತ್ಯ 9ರ ವಲಯ-1ರ ಅಧ್ಯಕ್ಷರಾಗಿ ನಗರದ ಎ.ವಿ.ಜಿ. ಜ್ಯೂಯಲರ್ಸ್ ಮಾಲೀಕ ಎಸ್. ವೆಂಕಟಾಚಲಂ ಮತ್ತು ವಲಯ -2ರ ಅಧ್ಯಕ್ಷರಾಗಿ ಮಾಗನೂರು ಬಸಪ್ಪ ಪಿಯು ವಿಜ್ಞಾನ ಕಾಲೇಜಿನ ನಿರ್ದೇಶಕ ಡಾ. ಜಿ.ಎನ್.ಹೆಚ್. ಕುಮಾರ್ ಆಯ್ಕೆಯಾಗಿದ್ದಾರೆ.


## ನಗರಕ್ಕೆ ನಾಳೆ ಜಿಲ್ಲಾ ಉಸ್ತುವಾರಿ ಸಚಿವ



ದಾವಣಗೆರೆ ಸೆ.24 - ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ ಅವರು ನಾಡಿದ್ದು ದಿನಾಂಕ 26 ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ನಗರಕ್ಕೆ ಆಗಮಿಸಿ, ಪ್ರವಾಸಿ ಮಂದಿರದಲ್ಲಿ ವಾಸ್ತವ್ಯ ಮಾಡುವರು.

ದಿನಾಂಕ 27 ರ ಸೋಮವಾರ ಬೆಳಿಗ್ಗೆ 10 ಗಂಟೆಗೆ ಆನಗೋಡಿನ ಶ್ರೀ ಮರುಳಸಿದ್ದೇಶ್ವರ ಸಮುದಾಯ ಭವನದಲ್ಲಿ ನಡೆಯುವ ಮಾಯಕೊಂಡ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಚರ್ಮ ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರ, ಚರ್ಮ ಶಿಲ್ಪಿ ಭವನ ಮತ್ತು ಮೂಲಭೂತ ಸೌಕರ್ಯಗಳ ನಿರ್ಮಾಣ ಕಾರ್ಯಾಗಾರದ ಶಂಕುಸ್ಥಾಪನೆ ಮತ್ತು ಸವಲತ್ತು ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಧ್ಯಾಹ್ನ 1 ಗಂಟೆಗೆ ಬೆಂಗಳೂರಿಗೆ ಪ್ರಯಾಣ ಬೆಳೆಸುವರು.

## ಭೈರನಪಾದ ಯೋಜನೆಗೆ ಹಣ ನೀಡದಿದ್ದರೆ ಹೋರಾಟ



### ಸರ್ಕಾರಕ್ಕೆ ಹರಿಹರದ ಶಾಸಕ ರಾಮಪ್ಪ ಎಚ್ಚರಿಕೆ

ಬೆಂಗಳೂರು, ಸೆ.24- ಹರಿಹರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 3357 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಮತ್ತು ಸಾರ್ವಜನಿಕರಿಗೆ ಕುಡಿಯುವ ನೀರು ಒದಗಿಸುವ ಭೈರನಪಾದ ಏತ ನೀರಾವರಿ ಯೋಜನೆಯ ಕಾಮಗಾರಿಗೆ 58 ಕೋಟಿ ರೂ. ಅನುದಾನ ನೀಡುವಂತೆ ಶಾಸಕ ಎಸ್. ರಾಮಪ್ಪ ಅವರು ವಿಧಾನಸಭೆ ಅಧಿವೇಶನದಲ್ಲಿ ಪ್ರಶ್ನೆ ಕೇಳುವ ಮೂಲಕ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಇದಕ್ಕೆ ಉತ್ತರಿಸಿದ ಜಲ ಸಂಪನ್ಮೂಲ ಸಚಿವರಾದ ಗೋವಿಂದ ಕಾರಜೋಳ ಅವರು 2013 ರಲ್ಲಿ ಭೈರನಪಾದ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಅಂದಿನ ಸರ್ಕಾರ 43.73 ಕೋಟಿ ರೂ. ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿತ್ತು.

ಏತನ್ಮಧ್ಯೆ, ಭದ್ರಾ ಯೋಜನೆಯ ಅಧಿಕೃತ ಅಚ್ಚುಕಟ್ಟಿನಲ್ಲಿ ಒಳಗೊಂಡಿರುವ ಭೈರನಪಾದ ಏತ ನೀರಾವರಿ ಯೋಜನೆಯಿಂದ ನೀರಾವರಿ ಸೌಲಭ್ಯ ಕಲ್ಪಿಸುವುದು ಸಮಂಜಸವಾಗಿಲ್ಲದ ಕಾರಣ ಉದ್ದೇಶಿತ ಪ್ರಸ್ತಾವನೆಯನ್ನು ಕೈಬಿಡುವಂತೆ ಕರ್ನಾಟಕ ನೀರಾವರಿ ನಿಗಮದಿಂದ ವರದಿ ಸ್ವೀಕೃತವಾಗಿತ್ತು.

ಪುನಃ 2020 ರಲ್ಲಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು, ಸ್ಥಳೀಯ ಜನರು ಹಾಗೂ ಜನಪ್ರತಿನಿಧಿಗಳು ಭೈರನಪಾದ ಏತ ನೀರಾವರಿ ಯೋಜನೆಯನ್ನು ಕೈಗೊಳ್ಳಲು ಆಗ್ರಹ ಮಾಡುತ್ತಿದ್ದು, ಯೋಜನೆಯನ್ನು ಅನುಷ್ಠಾನಗೊಳಿಸುವುದು ಸೂಕ್ತವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

2018-19ನೇ ಸಾಲಿನ ದರಪಟ್ಟಿ ದರಗಳನ್ವಯ ಯೋಜನೆಯನ್ನು 58.13 ಕೋಟಿ ರೂ. ಮೊತ್ತದ ಪರಿಷ್ಕೃತ ವಿವರವಾದ ಯೋಜನಾ ವರದಿಯನ್ನು ಸಲ್ಲಿಸಿ, ಇದಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಕೋರಿದ್ದ ಹಿನ್ನೆಲೆಯಲ್ಲಿ ಈ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯ ಸಮ್ಮತಿಗಾಗಿ ಕಳುಹಿಸಿಕೊಡಲಾಗಿತ್ತು. ಆದರೆ. ಆರ್ಥಿಕ ಇಲಾಖೆಯು ಈಗಾಗಲೇ ಅನುಮೋದಿತ ಕಾಮಗಾರಿಗಳ ಕಾರ್ಯಭಾರ ಅಧಿಕವಾಗಿರುವುದಲ್ಲದೇ, ಪ್ರಸಕ್ತ ಹಣಕಾಸು ಪರಿಸ್ಥಿತಿಯಲ್ಲಿ ಹೊಸ ಕಾಮಗಾರಿಗಳಿಗೆ ಅನುಮೋದನೆ ನೀಡಲು ಅವಕಾಶವಾಗುವುದಿಲ್ಲ. ಪ್ರಸ್ತಾಪಿತ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದನ್ನು ಸದ್ಯಕ್ಕೆ ಮುಂದೂಡುವಂತೆ ತಿಳಿಸಿರುತ್ತದೆ.

ಕೋವಿಡ್-19 ತಡೆಗಟ್ಟುವ ನಿಟ್ಟಿನಲ್ಲಿ ಪ್ರಥಮಾದ್ಯತೆಗಳಿಗೆ ಆರ್ಥಿಕ ಸಂಪನ್ಮೂಲವನ್ನು ಒದಗಿಸಲು ಪರಿಗಣಿಸಲಾಗುತ್ತಿದ್ದು, ನಂತರ ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿ, ಇತರೆ ಪ್ರಸ್ತಾವನೆಗಳನ್ನು ಕೈಗೊಳ್ಳುವ ಕುರಿತು ಪರಿಶೀಲಿಸಲಾಗುವುದೆಂದು ಸಚಿವ ಗೋವಿಂದ ಕಾರಜೋಳ ನೀಡಿದ ಉತ್ತರದಲ್ಲಿ ತಿಳಿಸಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ರಾಮಪ್ಪ, ಕೋವಿಡ್ ಕಾರಣ ಹೇಳಿ ಕಾಂಗ್ರೆಸ್, ಜೆಡಿಎಸ್ ಶಾಸಕರ ಕ್ಷೇತ್ರಗಳ ಅಭಿವೃದ್ಧಿ ಯೋಜನೆಗಳಿಗೆ ಸರ್ಕಾರ ಅನುದಾನ ನೀಡುತ್ತಿಲ್ಲ.

ಬಿಜೆಪಿ ಶಾಸಕರ, ಸಚಿವರ ಕ್ಷೇತ್ರಗಳಲ್ಲಿ ಮಾತ್ರ ನೂರಾರು ಕೋಟಿ ರೂ. ವೆಚ್ಚದ ಕಾಮಗಾರಿಗಳು ಯಾವುದೇ ಅಡೆ-ತಡೆ ಇಲ್ಲದಂತೆ ನಡೆಯುತ್ತಿವೆ. ಇದು ತಾರತಮ್ಯವಲ್ಲವೇ? ಎಂದು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡು, ತಡೆ ಹಿಡಿದಿರುವ ಅನುದಾನ ಬಿಡುಗಡೆ ಮಾಡದಿದ್ದರೆ ಸರ್ಕಾರದ ವಿರುದ್ಧ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದ್ದಾರೆ.


ನೋಂದಣಿ ಸಂಖ್ಯೆ: ಡಿ.ಆರ್. ಡಿ.ವಿ.ಜಿ. ಆರ್.ಎಸ್.ಆರ್/ಸೌನೋ/2652/2013-14 ದಿನಾಂಕ 12.7.2013





**ಹರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ**

# 56/11ಬಿ, ಮೊದಲನೇ ಮಹಡಿ, ಹಳೆ ಮಾಧ್ಯಮಿಕ ಶಾಲೆ ರಸ್ತೆ, ದಾವಣಗೆರೆ-577001., ದೂರವಾಣಿ: 08192 233700

**9ನೇ ಸಾಮಾನ್ಯ ಸಭೆಯ ನೋಟೀಸ್**



ಬಿ.ಸಿ. ಉಮಾಪತಿ
ಅಧ್ಯಕ್ಷರು



ಎಂ. ದೊಡ್ಡಪ್ಪ
ಉಪಾಧ್ಯಕ್ಷರು

**ಕಾರ್ಯಕಾರಿ ಮಂಡಳಿ ಸದಸ್ಯರು**



ಎಸ್.ಮಲ್ಲನಗೌಡ್ರು, ನಿರ್ದೇಶಕರು | ಅಂದನೂರು ಮುರುಗೇಶಪ್ಪ, ನಿರ್ದೇಶಕರು | ಹಾಲೇಶ್ ಅಂಗಡಿ, ನಿರ್ದೇಶಕರು | ಹೆಚ್.ಎಸ್. ಅವ್ವಣ್ಣಪ್ಪ, ನಿರ್ದೇಶಕರು | ಡಿ.ರಮೇಶ್, ನಿರ್ದೇಶಕರು | ಪಿ.ವಿ. ರವಿಕುಮಾರ್, ನಿರ್ದೇಶಕರು



ಚಂದ್ರಶೇಖರ್ ಬಾದಾಮಿ, ನಿರ್ದೇಶಕರು | ಜಿ.ವಿ. ಸುಂಕದ, ನಿರ್ದೇಶಕರು | ವಿನುತಾ ಎಂ.ಬಿ., ನಿರ್ದೇಶಕರು | ಗೀತಾ ಪ್ರಶಾಂತ್, ನಿರ್ದೇಶಕರು | ಚೈತನ್ಯ ಕುಮಾರ್ ಸಿ.ಬಿ., ವಿಶೇಷ ಆಹ್ವಾನಿತರು | ಮಂಜುನಾಥ ಎಸ್., ವಿಶೇಷ ಆಹ್ವಾನಿತರು

*ಮಾನ್ಯ ಸದಸ್ಯರುಗಳ ಗಮನಕ್ಕೆ*

ಸಹಕಾರಿಯ 2020-21ನೇ ಸಾಲಿನ 9ನೇ ಸಾಮಾನ್ಯ ಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಸಿ. ಉಮಾಪತಿ ಇವರ ಘನ ಅಧ್ಯಕ್ಷತೆಯಲ್ಲಿ ದಿನಾಂಕ 25.09.2021ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಸರಿಯಾಗಿ ಶ್ರೀ ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳವರ ಮಠ, ಶಿವಾಚಾರ್ಯ ನಿಕೇತನ, ಎಂ.ಸಿ.ಸಿ ಬಿ ಬ್ಲಾಕ್, ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದ ಹತ್ತಿರ, ದಾವಣಗೆರೆ ಇಲ್ಲಿ ಕರೆಯಲಾಗಿದೆ. ಈಗಾಗಲೇ ಅರ್ಹ ಸದಸ್ಯರುಗಳಿಗೆ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆಯನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ಆದಾಗ್ಯೂ ಈ ಆಹ್ವಾನ ಪತ್ರಿಕೆ ಮೂಲಕ ಅರ್ಹ ಸದಸ್ಯರು ವಾರ್ಷಿಕ ಸಾಮಾನ್ಯ ಸಭೆಗೆ ಹಾಜರಾಗಬೇಕೆಂದು ಆಡಳಿತ ಮಂಡಳಿ ಪರವಾಗಿ ವಿನಂತಿಸಲಾಗಿದೆ.

| ಕ್ರ.ಸಂ | ವಿವರ | 2018-19 | 2019-20 | 2020-21 |
|---|---|---|---|---|
| 1 | ಸದಸ್ಯರ ಸಂಖ್ಯೆ | 2426 | 2543 | 2658 |
| 2 | ಷೇರು ಬಂಡವಾಳ | 92,40,816.00 | 1,01,56,464.00 | 1,13,97,408.00 |
| 3 | ನಿಧಿಗಳು/ಸ್ವಂತ ಬಂಡವಾಳ | 65,44,523.66 | 93,28,520.16 | 1,24,32,906.58 |
| 4 | ಸದಸ್ಯರ ಠೇವಣಿಗಳು | 7,74,41,836.00 | 8,49,02,253.21 | 10,01,57,130.21 |
| 5 | ಸದಸ್ಯರಿಗೆ ವಿತರಿಸಿದ ಸಾಲಗಳು | 5,99,72,353.00 | 6,53,30,780.00 | 7,83,40,132.00 |
| 6 | ಹೂಡಿಕೆಗಳು | 1,85,06,000.00 | 2,10,06,000.00 | 3,90,06,000.00 |
| 7 | ದುಡಿಯುವ ಬಂಡವಾಳ | 9,66,24,350.16 | 10,86,53,287.37 | 12,93,38,269.37 |
| 8 | ನಿವ್ವಳ ಲಾಭ | 30,51,507.50 | 34,51,501.42 | 40,17,287.58 |
| 9 | ಲಾಭಾಂಶ ನೀಡಿಕೆ | 10% | 10% | ಉದ್ದೇಶಿತ 10% |

ಸ್ಥಳ: ದಾವಣಗೆರೆ
ದಿನಾಂಕ 23.09.2021

ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ ಸಹಿ/-
(ಚನ್ನಮಲ್ಲಿಕಾರ್ಜುನ ಕೆ), ಕಾರ್ಯದರ್ಶಿ

ಸದಸ್ಯರು ಕೋವಿಡ್–19 ಇರುವುದರಿಂದ ಮಾಸ್ಕ್ ಧರಿಸುವುದು ಮತ್ತು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು ಕಡ್ಡಾಯವಾಗಿದೆ.



**ಶ್ರೀ ಅಂಬಾಭವಾನಿ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ.,**

# 26/2ಎ, ವಿಜಯಲಕ್ಷ್ಮಿ ರೋಡ್, ದಾವಣಗೆರೆ 577 001. ☎ : 271688 235645, GST No.: 29AABAS2774F1ZC ✉ ambabhavaniucbdvg@gmail.com



ಶ್ರೀ ಕಿರಣ್‌ಕುಮಾರ್ ಎ.
ಅಧ್ಯಕ್ಷರು



ಶ್ರೀ ಮಾಲತೇಶರಾವ್ ಡಿ. ಜಾಧವ್, ನಿರ್ದೇಶಕರು, ಮಾಜಿ ಅಧ್ಯಕ್ಷರು | ಡಾ || ತಿಪ್ಪೇಸ್ವಾಮಿ ವಿಕಬೋಟೆ, ನಿರ್ದೇಶಕರು, ಮಾಜಿ ಅಧ್ಯಕ್ಷರು | ಶ್ರೀ ಎಂ.ಎಸ್. ವಿಠಲ್, ನಿರ್ದೇಶಕರು | ಶ್ರೀಮತಿ ಡಾ. ರಜನಿ ಎಸ್., ನಿರ್ದೇಶಕರು | ಶ್ರೀ ಮೋಹನ್‌ರಾವ್ ವಿಕಬೋಟೆ, ನಿರ್ದೇಶಕರು | ಶ್ರೀ ಅಶೋಕ ರಾಯಬಾಗಿ, ನಿರ್ದೇಶಕರು | ಶ್ರೀ ಡಿ. ವೆಂಕಟೇಶ್ ಕಾಟೆ, ನಿರ್ದೇಶಕರು | ಶ್ರೀ ಗೋಪಿನಾಥ, ನಿರ್ದೇಶಕರು | ಶ್ರೀ ಅಣ್ಣೋಜಿರಾವ್ ಎಲ್., ನಿರ್ದೇಶಕರು



ಶ್ರೀ ಆನಂದರಾವ್ ಆರ್.ಕೆ., ನಿರ್ದೇಶಕರು | ಕು || ಗೌರಬಾಯಿ ಎಂ., ನಿರ್ದೇಶಕರು | ಶ್ರೀಮತಿ ಗೀತಾ ಮೋಹನ್, ನಿರ್ದೇಶಕರು | ಶ್ರೀ ಬಾಬು, ನಿರ್ದೇಶಕರು | ಶ್ರೀ ರಾಜು ಮಹೇಂದ್ರಕರ್, ವೃತ್ತಿಪರ ನಿರ್ದೇಶಕರು, ಚಾರ್ಟರ್ಡ್ ಅಕೌಂಟೆಂಟ್ | ಶ್ರೀ ಮಂಜೋಜಿರಾವ್ ಗಾಯ್ಕವಾಡ್ ಕೆ.ಎಸ್., ವೃತ್ತಿಪರ ನಿರ್ದೇಶಕರು | ಶ್ರೀ ನಾಗರಾಜ್ ಗೌಡನಕಟ್ಟಿ, ವ್ಯವಸ್ಥಾಪಕರು | ಶ್ರೀ ಅನಿಲ್ ಟಿ. ಮಾಳದಕರ್, ಸಹಾಯಕ ವ್ಯವಸ್ಥಾಪಕರು | ಶ್ರೀ ಕೃಷ್ಣಕಾಂತ್, ಲೆಕ್ಕಾಧಿಕಾರಿ



ಶ್ರೀ ಪರಶುರಾಮರಾವ್ ಜಿ.ಎಂ.
ಉಪಾಧ್ಯಕ್ಷರು

**ಸೂಚನೆ :**

1) ಈಗಾಗಲೇ ಬ್ಯಾಂಕಿನ ಸದಸ್ಯರಿಗೆ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ಕೆಲವು ಪ್ರತಿಗಳು ವಿಳಾಸ ಬದಲಾವಣೆಯಿಂದ ಬ್ಯಾಂಕಿಗೆ ವಾಪಸ್ ಬಂದಿರುತ್ತವೆ. ಆದ ಕಾರಣ, ಬ್ಯಾಂಕಿನ ಕಛೇರಿ ವೇಳೆಯಲ್ಲಿ ಬಂದು ಸರಿಯಾದ ವಿಳಾಸ, ದೂರವಾಣಿ ಸಂಖ್ಯೆ ಹಾಗೂ ಕೆ.ವೈ.ಸಿ (ಚುನಾವಣಾ ಕಾರ್ಡ್, ಪಾನ್ ಕಾರ್ಡ್, ಆಧಾರ ಕಾರ್ಡ್) ನೀಡಿ, ಪತ್ರಿಕೆ ಪಡೆಯತಕ್ಕದ್ದು ಹಾಗೂ ಇದನ್ನು ಆಹ್ವಾನವೆಂದು ಭಾವಿಸಿ, ಮಹಾಸಭೆಯ ವಿಡಿಯೋ ಕಾನ್ಫರೆನ್ಸ್ / ವರ್ಚ್ಯುಯಲ್ ಮೀಟಿಂಗ್‌ನಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಿಕೆ.

**26ನೇ ವಾರ್ಷಿಕ ಮಹಾಸಭೆಯ ನೋಟೀಸ್**

ನಮ್ಮ ಬ್ಯಾಂಕಿನ 2020-2021ನೇ ಸಾಲಿನ 26ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ 25-09-2021ನೇ ಶನಿವಾರ ಬೆಳಿಗ್ಗೆ 12-00 ಗಂಟೆಗೆ ವಿಡಿಯೋ ಕಾನ್ಫರೆನ್ಸ್ ಮುಖಾಂತರ ಕರೆಯಲಾಗಿದೆ. ಮಾನ್ಯ ಬ್ಯಾಂಕಿನ ಸರ್ವಸದಸ್ಯರು ವಿಡಿಯೋ ಕಾನ್ಫರೆನ್ಸ್‌ನಲ್ಲಿ ಭಾಗವಹಿಸಿ ವಾರ್ಷಿಕ ಮಹಾಸಭೆಯನ್ನು ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

**ಸಭೆಯ ಕಾರ್ಯಕಲಾಪಗಳು**

(1) ಪ್ರಾರ್ಥನೆ (2) ಸ್ವಾಗತ ಭಾಷಣ (3) ದಿನಾಂಕ 19-12-2020 ರಂದು ನಡೆದ 25ನೇ ಮಹಾಸಭೆಯ ನಿರ್ಣಯ ಓದಿ ಅಂಗೀಕರಿಸುವುದು. (4) 2020-21ನೇ ಸಾಲಿನ ಆಡಳಿತ ಮಂಡಲಿಯು ತಯಾರಿಸಿರುವ 26ನೇ ವಾರ್ಷಿಕ ವರದಿಯನ್ನು ಪರಿಶೀಲಿಸುವುದು (ಅನುಮೋದಿಸುವುದು). 5. 2020-21ನೇ ಸಾಲಿನ ಲೆಕ್ಕಪರಿಶೋಧನೆಯಾದ ಲಾಭ-ನಷ್ಟ ಮತ್ತು ಅಢಾವೆ ಪತ್ರಿಕೆಯನ್ನು ಹಾಗೂ ಲೆಕ್ಕಪರಿಶೋಧಕರ ವರದಿಯನ್ನು ಪರಿಶೀಲಿಸುವುದು. (ಅನುಮೋದಿಸುವುದು). (6) 2020-2021ನೇ ಸಾಲಿನ ಲಾಭ ವಿಲೇವಾರಿ ಮಾಡುವುದು. (7) 2021-2022ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರ ನೇಮಕಾತಿ ಮಾಡುವುದು ಮತ್ತು ಅವರಿಗೆ ಕೊಡಬಹುದಾದ ಸಂಭಾವನೆ ನಿರ್ಣಯದ ಬಗ್ಗೆ ಚರ್ಚಿಸುವುದು. (8) 2020-2021ನೇ ಸಾಲಿನಲ್ಲಿ ಮುಂಗಡ ಪತ್ರಕ್ಕಿಂತ ಹೆಚ್ಚುವರಿ ಆದ ಖರ್ಚುಗಳನ್ನು ಒಪ್ಪುವುದು ಮತ್ತು 2021 - 2022ನೇ ಸಾಲಿಗೆ ವಾರ್ಷಿಕ ಮುಂಗಡ ಪತ್ರವನ್ನು ಮಂಜೂರು ಮಾಡುವುದು. (9) ನಿರ್ದೇಶಕ ಮಂಡಲಿಯು ರೂಪಿಸಿದ ಬ್ಯಾಂಕಿನ ಮುಂಬರುವ ವರ್ಷದ ಕಾರ್ಯಚಟುವಟಿಕೆಗಳನ್ನು ಅನುಮೋದಿಸುವುದು. (10) ಪದಾಧಿಕಾರಿಗಳು ಸೇರಿದಂತೆ ನಿರ್ದೇಶಕರಿಗೆ, ಅವರ ಸಾಮರ್ಥ್ಯದಲ್ಲಿ ನಿರ್ವಹಿಸಿದ ಕರ್ತವ್ಯಗಳಿಗೆ ಸಂಬಂಧಪಟ್ಟ ಸಭೆಗೆ ಹಾಜರಾದುದಕ್ಕೆ ಅವರಿಗೆ ಸಂದಾಯ ಮಾಡಿದ ಸಂಭಾವನೆ ಹಾಗೂ ಇತರೆ ಭತ್ಯೆಗಳ ಪರಿಶೀಲನೆ. (11) ಮರಣೋತ್ತರ ನಿಧಿಯನ್ನು ಪರಿಶೀಲನೆ ಮಾಡುವ ಬಗ್ಗೆ 12) ಬ್ಯಾಂಕಿನ ಬ್ಯಾಡ್‌ಡೆಟ್ ಮೊತ್ತವನ್ನು ತೀರುವಳಿ ಮಾಡುವ ಬಗ್ಗೆ 13) ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು.

**Video Conference link : https://aavishkar.net/sriambabhavaniurbancooperativebank/**

ಸಹಿ/- ಶ್ರೀ ಕಿರಣ್‌ಕುಮಾರ್ ಎ., ಅಧ್ಯಕ್ಷರು
ಸಹಿ/- ಪರಶುರಾಮರಾವ್ ಜಿ.ಎಂ., ಉಪಾಧ್ಯಕ್ಷರು
ಸಹಿ/- ನಾಗರಾಜ್ ಗೌಡನಕಟ್ಟಿ, ವ್ಯವಸ್ಥಾಪಕರು